


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 16 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 60 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಜೂ. 21ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಅರಮನೆ ಆವರಣದಲ್ಲಿ ಸಾವಿರಾರು ಯೋಗ ಪಟುಗಳಿಂದ ಅಂತಿಮ ತಾಲೀಮು

ಮೈಸೂರು, ಜೂ.15(ಎಂಟಿವೈ)– ಅಂತರ ರಾಷ್ಟ್ರೀಯ ಯೋಗ ದಿನದ ಹಿನ್ನೆಲೆಯಲ್ಲಿ ಭಾನುವಾರ ಅರಮನೆ ಆವರಣದಲ್ಲಿ ನಡೆದ ಅಂತಿಮ ಹಂತದ ಯೋಗ ತಾಲೀಮಿನಲ್ಲಿ ಸಾವಿರಕ್ಕೂ ಹೆಚ್ಚು ಯೋಗ ಪಟುಗಳು ಪಾಲ್ಗೊಂಡು ವಿವಿಧ ಯೋಗಾಸನಗಳನ್ನು ಪ್ರದರ್ಶಿಸಿದರು.

ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆ ವಿವಿಧ ಯೋಗ ಸಂಸ್ಥೆಗಳ ಸಹಯೋಗದಲ್ಲಿ ಅರಮನೆ ಆವರಣದಲ್ಲಿ ಆಯೋಜಿಸಿದ್ದ ಯೋಗ ತಾಲೀಮಿನಲ್ಲಿ ಮೈಸೂರಿನ ವಿವಿಧ ಯೋಗ ಸಂಸ್ಥೆಗಳ ಯೋಗ ಪಟುಗಳು, ಎನ್‌ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಎಸ್‌ಎಸ್, ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡು ಯೋಗ ಪ್ರದರ್ಶನ ನೀಡಿದರು. ಮಕ್ಕಳಿಂದ ಹಿರಿಯ ನಾಗರಿಕರವರೆಗೂ ವಿವಿಧ ವಯೋಮಾನದ ಯೋಗಪಟುಗಳು ಯೋಗಾಸನ ಮಾಡಿ ಗಮನ ಸೆಳೆದರು.

ಜೂ.21ರಂದು ನಡೆಯಲಿರುವ ಅಂತರ ರಾಷ್ಟ್ರೀಯ ಯೋಗ ದಿನದಂದು ಸುಮಾರು 15 ಸಾವಿರಕ್ಕೂ ಹೆಚ್ಚು ಯೋಗಪಟುಗಳನ್ನು ಸೇರಿಸಿ ಪ್ರದರ್ಶನ ಆಯೋಜಿಸುವುದಕ್ಕೆ ನಿರ್ಧರಿಸಲಾಗಿದ್ದು, ಈಗಾಗಲೇ ವಿವಿಧ ಯೋಗ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಚರ್ಚಿಸಿ, ಸಿದ್ಧತೆ ಮಾಡಿಕೊಳ್ಳಲಾಗಿದೆ. ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಎರಡು ಹಂತದಲ್ಲಿ ತಾಲೀಮು ನಡೆಸಲಾಗಿದ್ದು, ಎರಡು ಬಾರಿಯೂ ನೂರಾರು ಯೋಗಪಟುಗಳು ಪಾಲ್ಗೊಂಡು ಯೋಗ ಪ್ರದರ್ಶಿಸಿದ್ದಾರೆ.

ಇಂದು ಬೆಳಗ್ಗೆ 6.30ಕ್ಕೆ ಆರಂಭವಾದ ಯೋಗ ತಾಲೀಮಿನಲ್ಲಿ ಮೊದಲಿಗೆ ಯೋಗ ಪ್ರದರ್ಶನದ ಬಗ್ಗೆ ಮಾಹಿತಿ ನೀಡಲಾಯಿತು. ಅಲ್ಲದೆ, ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ತಿಳಿಸಲಾಯಿತು. ಪ್ರಾರ್ಥನೆ ನೆರವೇರಿದ ನಂತರ ನಾಲ್ಕು ನಿಮಿಷಗಳ ಕಾಲ ಚಲನೆಗೆ ಸಂಬಂಧಿಸಿದ ವ್ಯಾಯಾಮ ಮಾಡಿಸಲಾಯಿತು. ಯೋಗ ಪ್ರದರ್ಶನಕ್ಕೆ ಅಗತ್ಯವಾದ ಕುತ್ತಿಗೆ, ಭುಜ, ಸೊಂಟ, ಮಂಡಿಯ ಚಲನ ಪ್ರಕ್ರಿಯೆ ನಡೆಸಲು ಸೂಚಿಸಲಾಯಿತು.



ಮೈಸೂರು ಅರಮನೆ ಆವರಣದಲ್ಲಿ ಭಾನುವಾರ ನಡೆದ ಅಂತರರಾಷ್ಟ್ರೀಯ ಯೋಗ ದಿನದ ಪೂರ್ವಾಭ್ಯಾಸದಲ್ಲಿ ಯೋಗಪಟುಗಳು ಪಾಲ್ಗೊಂಡು ಯೋಗ ಪ್ರದರ್ಶನ ನೀಡಿದರು.

> ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಇಂದು ನಡೆಸಿದ ಯೋಗ ಪ್ರದರ್ಶನದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಯೋಗಪಟುಗಳು ಪಾಲ್ಗೊಂಡಿದ್ದರು. ಜೂ.21ರಂದು ನಡೆಯುವ ಯೋಗ ದಿನದ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿವಿಧ ಯೋಗ ಸಂಸ್ಥೆಗಳ ಮುಖ್ಯಸ್ಥರು, ಯೋಗಪಟುಗಳು, ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಆಗಮಿಸಿ, ಯೋಗ ಮಾಡಲಿದ್ದಾರೆ.
> –ಡಾ.ಸಿ.ರೇಣುಕಾದೇವಿ, ಜಿಲ್ಲಾ ಆಯುಷ್ ಅಧಿಕಾರಿ.

25 ನಿಮಿಷ ಯೋಗಾಸನ: ಬಳಿಕ ಬೆಳಗ್ಗೆ 7 ಗಂಟೆಗೆ ಯೋಗಾಸನ ಪ್ರದರ್ಶನ ಆರಂಭವಾಯಿತು. 25 ನಿಮಿಷ ತಾಡಾಸನ, ಹಸ್ತಾಸನ, ಶಲಭಾಸನ, ಪಾದಹಸ್ತಾಸನ, ಅರ್ಧ ಚಕ್ರಾಸನ, ತ್ರಿಕೋಣಾಸನ, ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಂಕಾಸನ, ಉತ್ಥಾನ ಮಂಡೂಕಾಸನ, ವಕ್ರಾಸನ, ಮಕರಾಸನ, ಭುಜಂಗಾಸನ, ಸೇತು ಬಂದಾಸನ, ಉತ್ಥಾನ ಪಾದಾಸನ, ಅರ್ಧ ಹಲಾಸನ, ಪವನ ಮುಕ್ತಾಸನ, ಶವಾಸನಗಳನ್ನು ಪ್ರದರ್ಶಿಸಲಾಯಿತು.

ಪ್ರಾಣಾಯಮ, ಧ್ಯಾನ, ಸಂಕಲ್ಪ : ನೆರೆದಿದ್ದ ಯೋಗಾಸಕ್ತರು ಸುಮಾರು 15 ನಿಮಿಷಗಳ ಕಾಲ ಕಪಾಲಭಾತಿ, ನಾಡಿ ಶೋಧನ ಪ್ರಾಣಾಯಮ, ಶೀತಲಿ, ಭ್ರಾಮರಿ, ಧ್ಯಾನ ಮಾಡುವ ಮೂಲಕ ಯೋಗ ಪ್ರದರ್ಶನ ನೆರವೇರಿತು. ಬೆಳಗ್ಗೆ 7.45ಕ್ಕೆ ಯೋಗ ತಾಲೀಮು ಪೂರ್ಣಗೊಂಡಿತು.

ಕ್ಯಾನ್ಸರ್ ಪೀಡಿತ ಮಕ್ಕಳಿಗೆ ವಿಶೇಷ ಶಾಲೆ ಸ್ಥಾಪನೆ

ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆ ಬಳಿ ಜುಲೈನಲ್ಲಿ ಶಾಲೆ ಆರಂಭ ಸಾಧ್ಯತೆ

ಮೊದಲ ಹಂತದಲ್ಲಿ 10ನೇ ತರಗತಿವರೆಗಿನ 1500 ಮಕ್ಕಳ ದಾಖಲಿಸುವ ನಿರೀಕ್ಷೆ



ಸಂಗ್ರಹ ಚಿತ್ರ

ಶಿವಮೊಗ್ಗ, ಜೂ.15– ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಆಂಕೊಲಾಜಿ ಸಂಸ್ಥೆ ಬಳಿ ಮಾರಕ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಕ್ಕಳಿಗಾಗಿ ವಿಶೇಷ ವಸತಿ ಶಾಲೆಯನ್ನು ಪ್ರಾರಂಭಿಸಲು ಸಜ್ಜಾಗಿದೆ.

ಈ ಶಾಲೆ ಜುಲೈನಲ್ಲಿ ಆರಂಭವಾಗುವ ನಿರೀಕ್ಷೆಯಿದೆ. ಈ ಉಪಕ್ರಮವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ಕನಸಿನ ಕೂಸು. ಇದು ಕ್ಯಾನ್ಸರ್ ಚಿಕಿತ್ಸೆಗೆ ಒಳಗಾಗುವ ಮಕ್ಕಳಿಗಾಗಿ ಪ್ರತ್ಯೇಕವಾಗಿ ರಾಜ್ಯದಲ್ಲಿ ಸರ್ಕಾರ ನಡೆಸುವ ಮೊದಲ ವಸತಿ ಶಾಲೆಯಾಗಿದೆ.

ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕ್ಯಾನ್ಸರ್ ಪೀಡಿತ ಮಕ್ಕಳ ನೋವನ್ನು ಕಂಡ ನಂತರ ಈ ಕಲ್ಪನೆ ನನಗೆ ಬಂದಿತು ಎಂದು ಮಧು ಬಂಗಾರಪ್ಪ ಮಾಧ್ಯಮಕ್ಕೆ ತಿಳಿಸಿದರು. ಈ ಉಪ ಕ್ರಮವು ಶಾಲಾ ಶಿಕ್ಷಣ ಸಚಿವರಾಗಿ ಅಧಿಕಾರ ವಹಿಸಿಕೊಂಡು ಎರಡು ವರ್ಷಗಳನ್ನು ಪೂರೈಸುವ ಸಂದರ್ಭದಲ್ಲಿ ಆರಂಭ ವಾಗಲಿದೆ ಎಂದು ಅವರು ಹೇಳಿದರು.



ಈ ಕಾಯಿಲೆಯಿಂದಾಗಿ ಮಕ್ಕಳು ಶಾಲೆಯಿಂದ ಹೊರಗುಳಿಯುವ ಸಾಧ್ಯತೆಯಿದೆ. ಕ್ಯಾನ್ಸರ್ ಗುಣಪಡಿಸಬಹುದಾದ ಕಾರಣ ಚಿಕಿತ್ಸೆ ಮತ್ತು ಶಿಕ್ಷಣ ಮಕ್ಕಳಿಗೆ ಏಕಕಾಲದಲ್ಲಿ ಮುಂದುವರಿಯುವುದು. ಆದ್ದರಿಂದ ಸಂಬಂಧಿತ ಅಂಕಿ–ಅಂಶಗಳನ್ನು ಸಂಗ್ರಹಿಸುವ ಮತ್ತು ಕಾರ್ಯಸಾಧ್ಯವಾದ ಯೋಜನೆಯನ್ನು ಸಲ್ಲಿಸುವ ಜವಾಬ್ದಾರಿಯನ್ನು ನಾನು ಒಂದು ಸರ್ಕಾರೇತರ ಸಂಸ್ಥೆಗೆ ವಹಿಸಿದೆ.

ಪ್ರಾಥಮಿಕ ಮಾಹಿತಿಯ ಆಧಾರದ ಮೇಲೆ ರಾಜ್ಯದಲ್ಲಿ ಸುಮಾರು 3,500 ಮಕ್ಕಳು ಪ್ರಸ್ತುತ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಶಾಲೆಯು ತನ್ನ ಮೊದಲ ಹಂತದಲ್ಲಿ 1 ರಿಂದ 10ನೇ ತರಗತಿವರೆಗೆ ಸುಮಾರು 1,500 ವಿದ್ಯಾರ್ಥಿಗಳನ್ನು ದಾಖಲಿಸುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

ರಾಜ್ಯದ ಯಾವುದೇ ಭಾಗದ ವಿದ್ಯಾರ್ಥಿಗಳು ಈ ಶಾಲೆಗೆ ದಾಖಲಾಗಬಹುದು ಎಂದು ಮಧು ಬಂಗಾರಪ್ಪ ಹೇಳಿದರು. ಈ ರೋಗಕ್ಕೆ ಉಚಿತ ಚಿಕಿತ್ಸೆಯ ಜೊತೆಗೆ, ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳು ■ 6ನೇ ಪುಟಕ್ಕೆ

ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್‌ಗೆ ಆಧಾರ್ ಕಡ್ಡಾಯ

ಬೆಂಗಳೂರು, ಜೂ.15– ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆ ಪಡೆಲು ಆಧಾರ್ ದೃಢೀಕರಣವನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಪ್ರಧಾನಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಕಾರ್ಯಕ್ರಮ ಯೋಜನೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದ್ದು, ಇದರಡಿ ಯಾವುದೇ ಡಿಬಿಟಿ (ನಗದು ನೇರ ವರ್ಗಾವಣೆ)ಗೆ ಆಧಾರ್ ಸಂಖ್ಯೆ ಅಗತ್ಯವಿರುವ ಹಿನ್ನೆಲೆಯಲ್ಲಿ ಡಯಾಲಿಸಿಸ್ ಸೇವೆಯ ಪ್ರಯೋಜನ ಪಡೆಯಲು ಬಯಸುವವರು ಆಧಾರ್ ದೃಢೀಕರಣಕ್ಕೆ ಒಳಗಾಗಬೇಕು ಎಂದು ತಿಳಿಸಿದೆ.



ಆಧಾರ್ ಇಲ್ಲದ ಕಾರಣ ಯಾವುದೇ ವ್ಯಕ್ತಿ, ವಯಸ್ಕ ಅಥವಾ ಮಗುವಿಗೆ ಚಿಕಿತ್ಸೆಯನ್ನು ನಿರಾಕರಿಸುವಂತಿಲ್ಲ ಎಂದೂ ಸರ್ಕಾರ ಸ್ಪಷ್ಟಪಡಿಸಿದೆ. ಅಂತಹ ಸಂದರ್ಭಗಳಲ್ಲಿ ಇತರ ಗುರುತಿನ ದಾಖಲೆಗಳನ್ನು ಸ್ವೀಕರಿಸಲಾಗುತ್ತದೆ ಎಂದು ಹೇಳಿದೆ. ಇತರೆ ದಾಖಲೆಗಳ ಆಧಾರದ ಮೇಲೆ ಸೌಲಭ್ಯ ನೀಡಿದ ಸಂದರ್ಭದಲ್ಲಿ ಅದನ್ನು ದಾಖಲಿಸಲು ಪ್ರತ್ಯೇಕ ರಿಜಿಸ್ಟಾರ್ ನಿರ್ವಹಿಸಬೇಕು. ಅನುಷ್ಠಾನ ಏಜೆನ್ಸಿಯ ಮೂಲಕ ನಿಯಮಿತವಾಗಿ ಪರಿಶೀಲಿಸಿ ಲೆಕ್ಕಪರಿಶೋಧನೆ ಕೈಗೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಯಾವುದೇ ವ್ಯಕ್ತಿ ಆಧಾರ್ ಹೊಂದಿಲ್ಲದ್ದರೆ ಅಥವಾ ಈವರೆಗೆ ಆಧಾರ್‌ಗೆ ನೋಂದಣಿ ಆಗದಿದ್ದು, ಆಧಾರ್ ಕಾಯ್ದೆಯ ಸೆಕ್ಷನ್ 3ರ ಪ್ರಕಾರ ಆಧಾರ್ ಪಡೆಯಲು ಅರ್ಹರಾಗಿದ್ದರೆ ಅವರು ಆಧಾರ್‌ಗೆ ಅರ್ಜಿ ಸಲ್ಲಿಸಬೇಕು. ಒಂದು ವೇಳೆ ಫಲಾನುಭವಿಗಳು ಮಕ್ಕಳಾಗಿದ್ದರೆ ತನ್ನ ತಂದೆ, ತಾಯಿ ಅಥವಾ ಪೋಷಕರ ಒಪ್ಪಿಗೆಗೆ ಒಳಪಟ್ಟು ಆಧಾರ್ ನೋಂದಣಿಗೆ ಅರ್ಜಿ ಸಲ್ಲಿಸಬೇಕು. ಒಂದೊಮ್ಮೆ ಅವರ ಸಮೀಪದಲ್ಲಿ ಆಧಾರ್ ನೋಂದಣಿ ಕೇಂದ್ರ ಇಲ್ಲದಿದ್ದರೆ ■ 6ನೇ ಪುಟಕ್ಕೆ

ಕೇದಾರನಾಥದಲ್ಲಿ ಹೆಲಿಕಾಪ್ಟರ್ ಪತನ: ಪೈಲಟ್ ಸೇರಿ 7 ಮಂದಿ ದುರ್ಮರಣ

ಈ ಭಾಗದಲ್ಲಿ ಎರಡು ದಿನ ಹೆಲಿಕಾಪ್ಟರ್ ಸೇವೆ ಸ್ಥಗಿತ

ಉತ್ತರಾಖಂಡ, ಜೂ.15– ಡೆಹ್ರಾಡೂನ್‌ನಿಂದ ಕೇದಾರನಾಥಕ್ಕೆ ತೆರಳುತ್ತಿದ್ದ ಹೆಲಿಕಾಪ್ಟರ್‌ವೊಂದು ಗೌರಿಕುಂಡದ ಬಳಿ ಪತನಗೊಂಡಿದ್ದು, ದುರ್ಘಟನೆಯಲ್ಲಿ ಪೈಲಟ್ ಸೇರಿ 7 ಮಂದಿ ಸಾವನ್ನಪ್ಪಿದ್ದಾರೆ.

ಆರ್ಯನ್ ಅವಿಯೇಷನ್ ಕಂಪನಿಗೆ ಸೇರಿದ ಹೆಲಿಕಾಪ್ಟರ್ 6 ಮಂದಿ ಪ್ರಯಾಣಿಕರನ್ನು ಗುಪ್ತಕಾಶಿಗೆ ಹೊತ್ತು ತೆರಳುತ್ತಿತ್ತು. ಈ ವೇಳೆ ಗೌರಿಕುಂಡ್ ಬಳಿ ಇಂದು ಭಾನುವಾರ ಬೆಳಗಿನ ಜಾವ 5.30ರ ಸುಮಾರಿಗೆ ಪತನವಾಗಿದೆ. ಹವಾಮಾನ ವೈಪರೀತ್ಯದಿಂದಾಗಿ ದುರ್ಘಟನೆ ಸಂಭವಿಸಿದೆ ಎಂದು ವರದಿಗಳು ತಿಳಿಸಿವೆ.

ಹೆಲಿಕಾಪ್ಟರ್ ಪತನವನ್ನು ಹೆಲಿಕಾಪ್ಟರ್ ನೋಡಲ್ ಅಧಿಕಾರಿ ರಾಹುಲ್ ಚೌಬೆ ಮತ್ತು ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ರಾಜ್ವರ್ ಅವರು ದೃಢಪಡಿಸಿದ್ದಾರೆ. ಘಟನೆ ವೇಳೆ ಹೆಲಿಕಾಪ್ಟರ್‌ನಲ್ಲಿ ಪೈಲಟ್ ಸೇರಿ ಒಟ್ಟು 7 ಮಂದಿ ಇದ್ದರು ಎನ್ನಲಾಗಿದ್ದು, ಎಲ್ಲರೂ ಸಾವನ್ನಪ್ಪಿದ್ದಾರೆಂದು ತಿಳಿದುಬಂದಿದೆ.



ಕೇದಾರನಾಥಕ್ಕೆ ತೆರಳುತ್ತಿದ್ದ ಹೆಲಿಕಾಪ್ಟರ್ ಪತನಗೊಂಡಿರುವುದು.

ಸಿಎಂ ಪುಷ್ಕರ್ ಸಿಂಗ್ ಧಾಮಿ ಸಂತಾಪ: ಈ ನಡುವೆ ಉತ್ತರಾಖಂಡ ರಾಜ್ಯದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಮೃತರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ರುದ್ರಪ್ರಯಾಗ ಜಿಲ್ಲೆಯಲ್ಲಿ ಹೆಲಿಕಾಪ್ಟರ್ ಪತನದ ಸುದ್ದಿ ಅತೀವ್ರ ದುಃಖ ತಂದಿದೆ. ಎಸ್‌ಡಿಆರ್‌ಎಫ್, ಸ್ಥಳೀಯ ಆಡಳಿತ ಮತ್ತು ಇತರ ರಕ್ಷಣಾ ತಂಡಗಳು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಎಲ್ಲಾ ಪ್ರಯಾಣಿಕರ ಸುರಕ್ಷತೆಗಾಗಿ ಬಾಬಾ ಕೇದಾರನನ್ನು ಪ್ರಾರ್ಥಿಸುತ್ತೇನೆಂದು ಹೇಳಿದ್ದಾರೆ. ■ 6ನೇ ಪುಟಕ್ಕೆ

ಏರ್ ಇಂಡಿಯಾ ವಿಮಾನ ಪತನ: ಉನ್ನತ ಮಟ್ಟದ ಸಮಿತಿ ಸಭೆ ನಾಳೆ

ನವದೆಹಲಿ: ಏರ್‌ಇಂಡಿಯಾ ವಿಮಾನ ಪತನದ ತನಿಖೆಗಾಗಿ ಕೇಂದ್ರ ಸರ್ಕಾರ ರಚಿಸಿರುವ ಉನ್ನತ ಮಟ್ಟದ ಸಮಿತಿಯು ಸೋಮವಾರ ಮಧ್ಯಾಹ್ನ ಸಭೆ ಸೇರಲಿದೆ ಎಂದು ಮೂಲಗಳು ತಿಳಿಸಿವೆ.

ಗೃಹ ಕಾರ್ಯದರ್ಶಿ ನೇತೃತ್ವದ ಸಮಿತಿ ಮೂರು ತಿಂಗಳಲ್ಲಿ ತನ್ನ ವರದಿಯನ್ನು ಸಲ್ಲಿಸುವ ನಿರೀಕ್ಷೆ ಇದೆ. ಸಮಿತಿಯು, ಭವಿಷ್ಯದಲ್ಲಿ ಇಂತಹ ಅವಘಡಗಳ ತಡೆಗಾಗಿ ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಜಾರಿ ಬಗ್ಗೆ ಹೆಚ್ಚಿನ ಗಮನ ನೀಡಲಿದೆ ಎಂದು ಹೇಳಲಾಗಿದೆ


ಏರ್ ಇಂಡಿಯಾ ವಿಮಾನ ಅಪಘಾತ

ಮಾಜಿ ಸಿಎಂ ವಿಜಯ್ ರೂಪಾನಿ ಸೇರಿ 42 ಮೃತದೇಹಗಳ ಗುರುತು

ನವದೆಹಲಿ, ಜೂ.15– ಅಹಮದಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗೆ ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ 270ಕ್ಕೂ ಹೆಚ್ಚು ಜನರು ಮೃತಪಟ್ಟ ಘಟನೆ ನಡೆದು ಮೂರು ದಿನಗಳ ನಂತರ ಅಧಿಕಾರಿಗಳು ಇಲ್ಲಿಯವರೆಗೆ 42 ಮೃತದೇಹಗಳನ್ನು ಡಿಎನ್‌ಎ ಪರೀಕ್ಷೆ ಮೂಲಕ ಗುರುತಿಸಿದ್ದಾರೆ ಮತ್ತು 14 ಶವಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದ್ದಾರೆ.

ಕಳೆದ ರಾತ್ರಿ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ನಮ್ಮ ತಂಡಗಳು ಡಿಎನ್‌ಎ ಮಾದರಿಗಳನ್ನು ಹೊಂದಿಸಲು ಅವಿಶ್ರಾಂತವಾಗಿ ಶ್ರಮಿಸಿವೆ. ಹೆಚ್ಚುವರಿಯಾಗಿ 22 ಡಿಎನ್‌ಎ ಮಾದರಿಗಳನ್ನು ಹೊಂದಿಸಲಾಗಿದೆ. ಇದುವರೆಗೆ ಒಟ್ಟು 42 ಡಿಎನ್‌ಎ ಮಾದರಿಗಳು ಹೊಂದಿಕೆಯಾಗುತ್ತವೆ ಎಂದು ಗುಜರಾತ್ ಗೃಹ ಸಚಿವ ಹರ್ಷ್ ರಮೇಶ್‌ಭಾಯ್ ಸಂಘವಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ. ಜೂನ್ 12 ರಂದು ನಡೆದ ವಿಮಾನ ಅಪಘಾತದಲ್ಲಿ ನಿಧನರಾದ ಗುಜರಾತ್ ಮಾಜಿ ■ 6ನೇ ಪುಟಕ್ಕೆ

ಇಂದ್ರಯಾಣಿ ಸೇತುವೆ ಕುಸಿದು 30 ಪ್ರವಾಸಿಗರು ನೀರುಪಾಲು



ಪುಣೆ, ಜೂ.15– ಮಹಾರಾಷ್ಟ್ರದ ಪುಣೆ ಜಿಲ್ಲೆಯ ಮಾವಲ್ ತಾಲೂಕಿನ ಇಂದ್ರಯಾಣಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಸೇತುವೆ ಕುಸಿದು ಬಿದ್ದಿದ್ದು, 25 ರಿಂದ 30 ಪ್ರವಾಸಿಗರು ನೀರು ಪಾಲಾಗಿದ್ದಾರೆ. ಭಾನುವಾರ (ಜೂ.15) ಮಧ್ಯಾಹ್ನ ಈ ಘಟನೆ ನಡೆದಿದೆ.

ಮಾವಲ್ ತಾಲೂಕಿನಲ್ಲಿರುವ ಕುಂದಮಲ ಪ್ರಸಿದ್ಧ ಪ್ರವಾಸಿ ತಾಣವಾಗಿದೆ. ಮಳೆಗಾಲದಲ್ಲಿ ಪ್ರತಿದಿನ ನೂರಾರು ಸಂಖ್ಯೆಯಲ್ಲಿ ಪ್ರವಾಸಿಗರು ಈ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಕುಂದಮಲಗೆ ತೆರಳಲು ಇಂದ್ರಯಾಣಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲಾಗಿತ್ತು. ಈ ಸೇತುವೆ ಏಕಾಏಕಿ ಕುಸಿದ ಪರಿಣಾಮ ಸೇತುವೆ ಮೇಲಿದ್ದ 25 ರಿಂದ 30 ಜನ ■ 6ನೇ ಪುಟಕ್ಕೆ

ಪ್ರಯಾಗ್‌ರಾಜ್‌ನಲ್ಲಿ ಸಿಡಿಲು ಬಡಿದು ಒಂದೇ ಕುಟುಂಬದ ನಾಲ್ವರು ಸಜೀವ ದಹನ

ಪ್ರಯಾಗ್‌ರಾಜ್, ಜೂ.15– ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮನೆಯಲ್ಲಿ ಮಲಗಿದ್ದ ದಂಪತಿ ಮತ್ತು ಇಬ್ಬರು ಹೆಣ್ಣುಮಕ್ಕಳು ಸಿಡಿಲಿನ ಆರ್ಭಟಕ್ಕೆ ಜೀವಂತ ದಹನವಾಗಿದ್ದಾರೆ. ಗುಡುಗು ಸಹಿತ ಮನೆಗೆ ಸಿಡಿಲು ಬಡಿದು ಗುಡಿಸಲಿನಲ್ಲಿ ಬೆಂಕಿ ಕಾಣಿಸಿಕೊಂಡಿತು. ನೆರೆಹೊರೆಯವರು ಬೆಂಕಿ ನಂದಿಸಲು ಯತ್ನಿಸಿದರು. ಆದರೆ ಎಲ್ಲರೂ ಸುಟ್ಟು ಕರಕಲಾಗಿದ್ದು ಎಲ್ಲರ ಶವಗಳು ಅಸ್ಥಿಪಂಜರ ಗಳಾಗಿ ಮಾರ್ಪಟ್ಟಿದ್ದವು. ಪೊಲೀಸರು ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ.

ಪ್ರಯಾಗ್‌ರಾಜ್ ಜಿಲ್ಲೆಯ ಬಾರಾ ತಹಸಿಲ್‌ನ ಹಲ್ಲಬೋರ್ ಸೋನ್‌ಬರ್ಸಾ ನಿವಾಸಿ ವೀರೇಂದ್ರ ವನವಾಸಿ, ಅವರ ಪತ್ನಿ ಪಾರ್ವತಿ ಮತ್ತು ಇಬ್ಬರು ಹೆಣ್ಣು ಮಕ್ಕಳಾದ ರಾಧಾ ಮತ್ತು ಕರಿಷ್ಮಾ ಅವರೊಂದಿಗೆ ಹುಲ್ಲಿನ ಮನೆಯಲ್ಲಿ ವಾಸಿಸುತ್ತಿದ್ದರು. ಶನಿವಾರ ಸಂಜೆ ಎಲ್ಲರೂ ಹುಲ್ಲಿನ ಛಾವಣಿಯ ಕೆಳಗೆ ಮಲಗಿದ್ದರು. ರಾತ್ರಿ 12 ಗಂಟೆ ಸುಮಾರಿಗೆ ಗುಡುಗು ಸಹಿತ ಮನೆಗೆ ಸಿಡಿಲು ಬಡಿದಿದೆ. ಮನೆಯ ಮೇಲೆ ಸಿಡಿಲು ಬಿದ್ದು ಹುಲ್ಲಿನ ■ 6ನೇ ಪುಟಕ್ಕೆ

ಏರ್ ಇಂಡಿಯಾ ಟೇಕಾಫ್ ವೇಳೆ ತಾಂತ್ರಿಕ ದೋಷ; ತಪ್ಪಿದ ಅನಾಹುತ

ಲಕ್ನೋ: ಉತ್ತರ ಪ್ರದೇಶದ ಗಾಜಿಯಾಬಾದ್‌ನ ಹಿಂಡನ್ ವಿಮಾನ ನಿಲ್ದಾಣದಿಂದ ಕೋಲ್ಕತ್ತಾಗೆ ಹೊರಟಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಟೇಕಾಫ್‌ಗೆ ಸ್ವಲ್ಪ ಸಮಯ ಬಾಕಿ ಇರುವಾಗ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದು, ಅನಾಹುತ ವೊಂದು ತಪ್ಪಿದಂತಾಗಿದೆ.

ಏರ್ ಇಂಡಿಯಾ IX1511 ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ರನ್‌ವೇಯಲ್ಲಿದ್ದಾಗ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ, ವಿಮಾನ ಹಾರಾಟ ಒಂದು ಗಂಟೆ ಕಾಲ ವಿಳಂಬವಾಯಿತು. ಇದರಿಂದ ಪ್ರಯಾಣಿಕರಿಗೆ ಉಂಟಾದ ಅನಾನುಕೂಲಕ್ಕೆ ಏರ್ ಇಂಡಿಯಾ ಕ್ಷಮೆಯಾಚಿಸಿದೆ. ■ 6ನೇ ಪುಟಕ್ಕೆ

ಜೆಡಿಎಸ್‌ನಿಂದ 'ಜನರೊಂದಿಗೆ ಜನತಾದಳ' ರಾಜ್ಯ ಪ್ರವಾಸಕ್ಕೆ ಚಾಲನೆ

- ಇಂದಿನಿಂದ 58 ದಿನ ನಿಖಿಲ್ ಕುಮಾರಸ್ವಾಮಿ ರಾಜ್ಯ ಪ್ರವಾಸ
- ಮಿಸ್ಡ್‌ಕಾಲ್ ಮೂಲಕ ಸದಸ್ಯತ್ವ ನೋಂದಣಿ ಅಭಿಯಾನ


ಬೆಂಗಳೂರು, ಜೂ.15– ಜೆಡಿಎಸ್ ಪಕ್ಷವನ್ನು ಸಂಘಟಿಸುವ ಉದ್ದೇಶದಿಂದ ನಾಳೆಯಿಂದ (ಜೂನ್ 16) ರಾಜ್ಯಾದ್ಯಂತ ಪ್ರವಾಸ ಮಾಡುತ್ತೇನೆ. ಸೋಮವಾರ ತುಮಕೂರು ಜಿಲ್ಲೆಯಿಂದ ಅಧಿಕೃತವಾಗಿ ಪ್ರವಾಸ ಆರಂಭ ಮಾಡ್ತೇನೆ. ಎಲ್ಲಾ ಹಿರಿಯ ಮುಖಂಡರು ಸಹಕಾರ ಕೊಡಬೇಕು ಎಂದು ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮನವಿ ಮಾಡಿದರು.

ಪಕ್ಷವನ್ನು ಜನರ ಬಳಿಗೆ ಕರೆದೊಯ್ಯುವ ಉದ್ದೇಶದಿಂದ ಹಿರಿಯರು ಸೇರಿ ಪಕ್ಷದ ಎಲ್ಲಾ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜನರೊಂದಿಗೆ ಜನತಾದಳ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಇದರ ಭಾಗವಾಗಿಯೇ ರಾಜ್ಯ ಪಕ್ಷ ಸಂಘಟನಾ ರಾಜ್ಯ ಪ್ರವಾಸ ಮತ್ತು ಮಿಸ್ ಕಾಲ್ ಅಭಿಯಾನ ನಡೆಸುತ್ತಿದ್ದೇವೆ ಎಂದು ತಿಳಿಸಿದರು. ಇಂದಿನಿಂದ ಅಧಿಕೃತವಾಗಿ ಮಿಸ್ಡ್ ಕಾಲ್ ಅಭಿಯಾನದ ಮೂಲಕ ಸದಸ್ಯತ್ವ ನೋಂದಣಿ ಆರಂಭ ಮಾಡಿದ್ದೇವೆ. ರಾಜ್ಯ ಪ್ರವಾಸದ ವೇಳೆ ಪ್ರತಿ ಕಾರ್ಯಕರ್ತರನ್ನು ಭೇಟಿ ಮಾಡಿ, ಪಕ್ಷಕ್ಕಾಗಿ ದುಡಿಯುವ ತಳಮಟ್ಟದ ಕಾರ್ಯಕರ್ತರನ್ನು ಗುರುತಿಸುವ ಕೆಲಸವನ್ನು ಮಾಡುತ್ತೇನೆ ಎಂದು ತಿಳಿಸಿದರು.

ಕನಿಷ್ಠ ಐವತ್ತು ಲಕ್ಷ ಜನ ಸದಸ್ಯರಾಗಬೇಕು ಎಂಬ ಗುರಿ ಇಟ್ಟುಕೊಂಡು ಹೋಗೋಣ. ಮತ್ತೆ ಈ ಪಕ್ಷವನ್ನು ತಳ ಮಟ್ಟದಿಂದ ಪುಟಿದೇಳುವಂತೆ ಮಾಡಬೇಕು ಎಂಬ ನಿಟ್ಟಿನಲ್ಲಿ ಆ.16 ರವರೆಗೆ ರಾಜ್ಯ ಪ್ರವಾಸ ಹಮ್ಮಿಕೊಳ್ಳಲಾಗಿದೆ ನಿಮ್ಮ ಸಹಕಾರ ಇರಲಿ ಎಂದು ಮನವಿ ಮಾಡಿದರು. ■ 6ನೇ ಪುಟಕ್ಕೆ



'ಜನರೊಂದಿಗೆ ಜನತಾದಳ' ಪೋಸ್ಟರ್ ಅನ್ನು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪಕ್ಷದ ವರಿಷ್ಠರಾದ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ನೀಡಿದರು. ಚಿತ್ರದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಇನ್ನಿತರರನ್ನು ಕಾಣಬಹುದು.



ಬೋನ್ಸಾಯಿ ವೃಕ್ಷಗಳ ಸಂಗ್ರಹಣೆಯಲ್ಲಿ ಗಣಪತಿ ಸಚ್ಚಿದಾನಂದ ಆಶ್ರಮ ವಿಶ್ವ ದಾಖಲೆ



ಮೈಸೂರಿನ ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಗಿನ್ನಿಸ್ ಸಂಸ್ಥೆಯ ಪ್ರತಿನಿಧಿ ರಿಷಿನಾಥ್, ವಿಶ್ವದಾಖಲೆ ಪ್ರಮಾಣ ಪತ್ರ ನೀಡಿದರು.

ಮೈಸೂರು, ಜೂ.15(ಎಂಕೆ)– ಮೈಸೂರಿನ ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಬೋನ್ಸಾಯಿ ವೃಕ್ಷಗಳ ಸಂಗ್ರಹಣೆಯಲ್ಲಿ ವಿಶ್ವ ದಾಖಲೆ ಮಾಡಿದೆ.

ಈಗಾಗಲೇ ಹಲವು ವಿಶೇಷತೆಗಳಿಂದ ದಾಖಲೆಗಳನ್ನು ಮಾಡಿ, ಗಿನ್ನಿಸ್ ರೆಕಾರ್ಡ್ ಮಾಡಿರುವ ಅವಧೂತ ದತ್ತ ಪೀಠ ಇದೀಗ ಮತ್ತೊಂದು ದಾಖಲೆ ಬರೆದಿದ್ದು, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಲ್ಲಿನ ಪರಿಸರ ಕಾಳಜಿಯಿಂದಾಗಿ ಬೋನ್ಸಾಯಿ ವೃಕ್ಷಗಳ ಸಂಗ್ರಹಣೆಯಲ್ಲಿ ದಾಖಲೆ ಮಾಡಿದೆ.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ 2006ರಲ್ಲಿ ಸ್ಥಾಪನೆಯಾದ ವಿಶ್ವ ವಿಖ್ಯಾತ ಕಿಷ್ಕಿಂದಾ ಮೂಲಿಕಾ ಬೋನ್ಸಾಯಿ ವನವು ದೇಶಾದ್ಯಂತ ಅಪಾರ ಪ್ರವಾಸಿಗರು ಹಾಗೂ ಭಕ್ತರ ಮನಸೂರೆಗೊಳ್ಳುತ್ತಿದ್ದು, ಜೂ.6ರಿಂದ 15ರವರೆಗೆ ನಡೆಯುತ್ತಿರುವ ವನದುರ್ಗಾ ಪೂಜೆಯ ಪ್ರಯುಕ್ತ ಸಾವಿರಾರು ಅತಿ ಅಪರೂಪದ ಬೋನ್ಸಾಯಿ ವೃಕ್ಷಗಳನ್ನು ಥೈವಾನ್, ಇಂಗ್ಲೆಂಡ್, ಜಪಾನ್ ಸೇರಿದಂತೆ ದೇಶದ ನಾನಾ ಕಡೆಗಳಿಂದ ಸಂಗ್ರಹಿಸಲಾಗಿದೆ.

10,836 ಬೋನ್ಸಾಯ್ ವೃಕ್ಷಗಳ ಸಂಗ್ರಹಣೆ ಮೂಲಕ ವಿಶ್ವದಲ್ಲೇ ಅತಿ ಹೆಚ್ಚು ಬೋನ್ಸಾಯಿ ವೃಕ್ಷಗಳಿರುವ ವನವೆಂಬ ಹೆಗ್ಗಳಿಕೆ ಪಡೆದಿರುವ ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಗಿನ್ನಿಸ್ ದಾಖಲೆ ಮಾಡಿದೆ.

ಪ್ರಮಾಣ ಪತ್ರ ವಿತರಣೆ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಗಿನ್ನಿಸ್ ಸಂಸ್ಥೆಯ ಪ್ರತಿನಿಧಿ ರಿಷಿನಾಥ್, ವಿಶ್ವದಾಖಲೆ ಪ್ರಮಾಣ ಪತ್ರವನ್ನು ನೀಡಿದರು.

ಲೈಸೆನ್ಸ್ ನವೀಕರಣ ಹೆಸರಲ್ಲಿ ಮೈಸೂರಿನ ಆಹಾರ ಉದ್ದಿಮೆದಾರರಿಗೆ ವಂಚನೆ

- ಕನ್ನಡದಲ್ಲೇ ಮಾತನಾಡುವ ಸೈಬರ್ ಅಪರಾಧಿಗಳು
- ಲೈಸೆನ್ಸ್ ಕೊನೆ ದಿನ ಹೇಳಿ ನಂಬಿಸುವ ಚಾಲಾಕಿಗಳು
- ಗೂಗಲ್ ಪೇ, ಫೋನ್ ಪೇ ಮೂಲಕ ಹಣ ಪಾವತಿ
- ಎಷ್ಟೇ ಜಾಗೃತಿ ಮೂಡಿಸಿದರೂ ಪಾಠ ಕಲಿಯದ ಜನ

ಮೈಸೂರು, ಜೂ.15(ಬಿಎಲ್‌ಯು)– ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ)ದ ಲೈಸೆನ್ಸ್ ನವೀಕರಣ ಮಾಡುವುದಾಗಿ ಕರೆ ಮಾಡಿ, ಸೈಬರ್ ಅಪರಾಧಿಗಳು ಮೈಸೂರಿನ ಆಹಾರ ಉದ್ದಿಮೆದಾರರನ್ನು ವಂಚಿಸುತ್ತಿದ್ದಾರೆ.

ನೋಂದಣಿ ನವೀಕರಣ ಮಾಡುವುದಾಗಿ ಮೈಸೂರಿನ ಆಹಾರ ಉದ್ದಿಮೆದಾರರಿಗೆ ಕರೆ ಮಾಡುತ್ತಿದ್ದಾರೆ. ಆನ್‌ಲೈನ್ ಮೂಲಕವೇ ನವೀಕರಣ ಪ್ರಕ್ರಿಯೆ ಮಾಡಿ ಮುಗಿಸುವುದಾಗಿ ನಂಬಿಸುತ್ತಾರೆ. ವ್ಯಾಪಾರದ ಒತ್ತಡದಲ್ಲಿರುವ ವರ್ತಕರು ನೋಂದಣಿ ನವೀಕರಣಕ್ಕೆ ಒಪ್ಪುತ್ತಾರೆ. ಕೊನೆಗೆ ಈ ವಂಚಕರು ಗೂಗಲ್ ಪೇ ಅಥವಾ ಫೋನ್ ಪೇಯಿಂದ ಹಣ ಪಡೆಯುತ್ತಾರೆ. ಮೊದಲಿಗೆ ತಾವು ನಗರಪಾಲಿಕೆ ಅಧಿಕಾರಿಗಳು ಎಂದು ಪರಿಚಯಿಸಿಕೊಳ್ಳುವ ವಂಚಕರು, ಲೈಸೆನ್ಸ್ ನವೀಕರಣ ಕೊನೆಯಾಗುವ ಪಕ್ಕಾ ದಿನಾಂಕವನ್ನು ಹೇಳಿ ನಂಬಿಸುತ್ತಾರೆ. ಇದನ್ನು ನಂಬಿದ ವ್ಯಾಪಾರಸ್ಥರು ತಮ್ಮ ಹಣ ಕಳೆದುಕೊಳ್ಳುತ್ತಿದ್ದಾರೆ. ಕನ್ನಡ ಭಾಷೆಯಲ್ಲೆ ಮಾತನಾಡುವ ಸೈಬರ್ ಅಪರಾಧಿಗಳು, ನಯವಾಗಿಯೇ ಹಲವರನ್ನು ಸುಲಿಗೆ ಮಾಡಿದ್ದಾರೆ. ಕೇಂದ್ರ ಸರ್ಕಾರದ ಗೃಹ ಸಚಿವಾಲಯ, ಮೊಬೈಲ್ ಕರೆ ಸ್ವೀಕರಿಸುವ ಮುನ್ನ ಈ ಬಗ್ಗೆ ಜಾಗೃತಿ ಮೂಡಿಸುತ್ತಿದೆ.

ಸೈಬರ್ ಅಪರಾಧಿಗಳ ಮೋಸದ ಜಾಲಕ್ಕೆ ಸಿಲುಕಬೇಡಿ ಎಂದು ಎಚ್ಚರಿಕೆ ನೀಡಲಾಗುತ್ತಿದೆ. ಆದರೂ ಬಹಳಷ್ಟು ಮಂದಿ ಸೈಬರ್ ಅಪರಾಧಿಗಳ ಮಾತು ನಂಬಿ ಹಣ ಕಳೆದುಕೊಳ್ಳುತ್ತಿದ್ದಾರೆ.

ಎಫ್‌ಎಸ್‌ಎಸ್‌ಎಐ ಕಚೇರಿಯಿಂದ ಲೈಸೆನ್ಸ್ ನೋಂದಣಿಗೆ ಕರೆ ಮಾಡಲ್ಲ

“ ಎಫ್‌ಎಸ್‌ಎಸ್‌ಎಐ ಕೇಂದ್ರ ಕಚೇರಿ ಅಥವಾ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಕಚೇರಿಯಿಂದ ಯಾವುದೇ ಆಹಾರ ಉದ್ದಿಮೆದಾರರಿಗೆ ದೂರವಾಣಿ ಕರೆ ಮಾಡಿ ನವೀಕರಣ ಮಾಡುತ್ತಿಲ್ಲ. ಆಹಾರ ಉದ್ದಿಮೆದಾರರು ಯಾರ ಸಹಾಯವೂ ಇಲ್ಲದೆ ಇಲಾಖೆಯ ವೆಬ್‌ಸೈಟ್ www.foscos.fssai.gov.in ಸಂಪರ್ಕಿಸಿ, ನೋಂದಣಿ, ನವೀಕರಣ ಮಾಡಿಕೊಳ್ಳಬಹುದು. ಇದಕ್ಕೆ ಯಾರ ಸಹಾಯವೂ ಬೇಕಿಲ್ಲ. ಈ ಹಿನ್ನೆಲೆಯಲ್ಲಿ ಅನಾಮಧೇಯ ವ್ಯಕ್ತಿಗಳು ನೋಂದಣಿ ನವೀಕರಣ ಮಾಡಿಕೊಡುವುದಾಗಿ ದೂರವಾಣಿ ಕರೆ ಮಾಡಿದರೆ ನಂಬಬಾರದು.

–ಡಾ.ಎಸ್.ಎಲ್.ರವೀಂದ್ರ, ಅಂಕಿತ ಅಧಿಕಾರಿ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ

ಸೈಬರ್ ಅಪರಾಧಿಗಳ ಮಾತು ನಂಬಿ ಹಣ ಕಳೆದುಕೊಳ್ಳಬೇಡಿ

ಇತ್ತೀಚೆಗೆ ಸೈಬರ್ ಅಪರಾಧ ಕೃತ್ಯ ಅಥವಾ ಡಿಜಿಟಲ್ ಅರೆಸ್ಟ್ ಪ್ರಕರಣಗಳು ಸಾಮಾನ್ಯವಾಗಿ ಬಿಟ್ಟಿವೆ. ವಾಟ್ಸ್ ಆಪ್ ಹಾಗೂ ಇ–ಮೇಲ್ ಮೂಲಕ ಸಂಪರ್ಕ ಸಾಧಿಸುತ್ತಾರೆ. ಆನ್‌ಲೈನ್ ಬ್ಯಾಂಕಿಂಗ್ ಸೌಲಭ್ಯ ಬಳಸಿಕೊಳ್ಳಿ ಎಂದು ಮೊಬೈಲ್‌ಗೆ ಲಿಂಕ್ ಕಳುಹಿಸುವ ಸೈಬರ್ ಅಪರಾಧಿಗಳು ಬ್ಯಾಂಕ್‌ನ ರಹಸ್ಯ ಒಟಿಪಿ ಸೇರಿದಂತೆ ಹಲವು ಮಾಹಿತಿ ಪಡೆಯುತ್ತಾರೆ. ತರುವಾಯ ಕ್ಷಣ ಮಾತ್ರದಲ್ಲೇ ಬ್ಯಾಂಕ್‌ನಲ್ಲಿರುವ ಹಣವನ್ನು ಲಪಟಾಯಿಸುತ್ತಾರೆ. ತಾವು ಪೊಲೀಸ್ ಅಧಿಕಾರಿ, ಬ್ಯಾಂಕ್ ಅಧಿಕಾರಿ, ಸಿಬಿಐ ಅಧಿಕಾರಿ, ನ್ಯಾಯಾಧೀಶರು ಎಂದು ಪರಿಚಯ ಹೇಳಿಕೊಳ್ಳುವ ಸೈಬರ್ ಅಪರಾಧಿಗಳು ಭಯಪಡಿಸಿ ಹಣ ಅಥವಾ ಸೂಕ್ಷ್ಮ ಮಾಹಿತಿ ಪಡೆಯುತ್ತಿದ್ದಾರೆ. ಬಂಧನ ಅಥವಾ ದಂಡದ ಬೆದರಿಕೆ ಹಾಕಿ ಹಣ ವರ್ಗಾವಣೆ ಮಾಡಲು ಸೂಚಿಸುತ್ತಾರೆ.

ನಿಮ್ಮ ಕಂಪ್ಯೂಟರ್ ಅಥವಾ ಸ್ಮಾರ್ಟ್‌ಫೋನ್‌ಗೆ ಮಾಲ್ ವೇರ್ ಮತ್ತು ವೈರಸ್‌ಗಳನ್ನು ಕಳುಹಿಸಿ ಮಾಹಿತಿ ಕದಿಯುತ್ತಾರೆ ಇಲ್ಲವೇ ಹಾನಿ ಮಾಡುತ್ತಾರೆ.

ಈ ಹಿನ್ನೆಲೆಯಲ್ಲಿ ಅಪರಿಚಿತ ಲಿಂಕ್‌ಗಳನ್ನು ಕ್ಲಿಕ್ ಮಾಡಬಾರದು. ಸುರಕ್ಷಿತ ವೆಬ್‌ಸೈಟ್ ಮಾತ್ರ ಬಳಸಬೇಕು. ವೈಯಕ್ತಿಕ ಮಾಹಿತಿ ನೀಡಬೇಡಿ. ಪಾಸ್‌ವರ್ಡ್‌ಗಳನ್ನು ಆಗಾಗ ಬದಲಾಯಿಸಿ, ಸೈಬರ್ ವಂಚನೆಗೆ ಒಳಗಾಗುತ್ತಿದ್ದೇನೆ ಎಂಬ ಅನುಮಾನ ಬಂದರೆ ಪೊಲೀಸರಿಗೆ ಮಾಹಿತಿ ನೀಡಬೇಕು.

ಮಹಾವೀರ ವಿದ್ಯಾಮಂದಿರದಲ್ಲಿ ತಂದೆಯಂದಿರ ದಿನ ಆಚರಣೆ



ಮೈಸೂರಿನ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾಮಂದಿರದಲ್ಲಿ ತಂದೆಯಂದಿರ ದಿನ ಆಚರಿಸಲಾಯಿತು. ಈ ವೇಳೆ ಶಾಲಾ ಪ್ರಾಂಶುಪಾಲೆ ಅನಿತಾ, ಸಹ ಪ್ರಾಂಶುಪಾಲೆ ಆಶಾ, ಶಾಲೆಯ ನರ್ಸರಿ ಶಿಕ್ಷಕಿಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೊಬೈಲ್, ಇಂಟರ್‌ನೆಟ್ ಹಾವಳಿಯಿಂದ ಭಾರತೀಯ ಮೌಲ್ಯಗಳು ನಶಿಸುತ್ತಿವೆ

ಸಂಸ್ಕೃತಿ ಚಿಂತಕ ಶಂಕರ್ ದೇವನೂರು ವಿಷಾದ

ಮೈಸೂರು,ಜೂ.15(ಎಂಟಿವೈ)– ಆಧುನಿಕತೆಯ ಅರ್ಭಟ, ಮೊಬೈಲ್, ಇಂಟರ್‌ನೆಟ್ ಹಾವಳಿಯಿಂದ ಸಂಗೀತ, ಸಾಹಿತ್ಯ ಸೇರಿದಂತೆ ಭಾರತೀಯ ಮೌಲ್ಯಗಳು ನಶಿಸುತ್ತಿವೆ ಎಂದು ಸಂಸ್ಕೃತಿ ಚಿಂತಕ ಶಂಕರ್ ದೇವನೂರು ವಿಷಾದಿಸಿದ್ದಾರೆ.



‘ಕನ್ನಡ ಸಾಹಿತ್ಯ ಪರಂಪರೆ : ತತ್ವ–ಸತ್ವ’ ಎಂಬ ವಿಚಾರ ಸಂಕಿರಣದಲ್ಲಿ ಸಂಸ್ಕೃತಿ ಚಿಂತಕ ಶಂಕರ್ ದೇವನೂರು ಮಾತನಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ನಡೆದ ‘ಕನ್ನಡ ಸಾಹಿತ್ಯ ಪರಂಪರೆ : ತತ್ವ–ಸತ್ವ’ ಎಂಬ ವಿಚಾರ ಕುರಿತು ಮಾತನಾಡಿದ ಅವರು, ಆಧುನಿಕತೆಯ ವೈಭವದಿಂದ ಇಂದು ಜಗತ್ತು ಸಾಕಷ್ಟು ಬದಲಾಗಿದೆ. ಆಧುನಿಕ ಅರ್ಭಟ ಪಾಶ್ಚಿಮಾತ್ಯತೆ ಪ್ರಭಾವ, ಮೊಬೈಲ್, ಇಂಟರ್‌ನೆಟ್ ಹಾವಳಿಯಲ್ಲಿ ಸಾಕಷ್ಟು ಭಾರತೀಯ ಮೌಲ್ಯಗಳು ಅಳಿದು ನಶಿಸಿ ಹೋಗುತ್ತಿವೆ. ಅದರಲ್ಲಿ ಸಂಗೀತ ಮತ್ತು ಸಾಹಿತ್ಯವು ಸೇರಿದೆ. ಕನ್ನಡ ಸಾಹಿತ್ಯದಲ್ಲಿರುವ ಜೀವನ ಮೌಲ್ಯಗಳು ಇಂದಿನ ಪೀಳಿಗೆ ಅರ್ಥ ಮಾಡಿಕೊಳ್ಳುತ್ತಿಲ್ಲ ಎಂದರು.

ಬಳಿಕ ವಿದುಷಿ ಶುಭ ರಾಘವೇಂದ್ರ ಅವರು ಗಮಕ ಶೈಲಿಯಲ್ಲಿ ಪಂಪ, ರನ್ನ, ಕುಮಾರವ್ಯಾಸ ಮಹಾ ಭಾರತ, ವಾಲ್ಮೀಕಿ ರಾಮಾಯಣ, ಮಂಕುತಿಮ್ಮನ ಕಗ್ಗ, ಮುದ್ದು ರಾಮನ ಪದ್ಯಗಳು ಹಾಗೂ ವಿಭಿನ್ನ ಸಾಹಿತ್ಯವನ್ನು ಉಣಬಡಿಸಿದರು. ಅಲ್ಲದೆ, ಕುವೆಂಪು, ಬೇಂದ್ರೆ, ಶಿಶುನಾಳ ಶರೀಫ, ಅಕ್ಕಮಹಾದೇವಿ, ಅಲ್ಲಮ ಪ್ರಭು, ಮುಕ್ತಾಯಕ್ಕ, ಚನ್ನಬಸವಣ್ಣ ಸೇರಿದಂತೆ ಹಲವು ತತ್ವ ಪದಗಳ ವಚನ ಸಾರದ ಮೂಲಕ ಪ್ರೇಕ್ಷಕರ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಪ್ರಸಾರಾಂಗದ ನಿರ್ದೇಶಕ, ಶಿಬಿರದ ಸಂಚಾಲಕ ಡಾ.ನಂಜಯ್ಯ ಹೊಂಗನೂರು, ಮಾಳವಿಯ ಮಿಷನ್ ಶಿಕ್ಷಕ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ.ಜ್ಯೋತಿ ಹೆಚ್, ಸಹಾಯಕ ಪ್ರಾಧ್ಯಾಪಕ ಡಾ.ಎಲ್.ನಂಜುಂಡಸ್ವಾಮಿ, ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಪಾರಂಪರಿಕ ಮರಗಳ ರಕ್ಷಣೆ ಹೊಣೆ ಆಯಾಯ ರಾಜ್ಯಗಳದ್ದು

‘ಐಕಾನಿಕ್ ಟ್ರಿ ಆಫ್ ಇಂಡಿಯಾ’ ಕೃತಿ ಲೇಖಕ ಡಾ.ಎಸ್.ನಟೇಶ್ ಅಭಿಮತ

ಮೈಸೂರು, ಜೂ, 15 (ಎಸ್‌ಪಿಎನ್) –ದೇಶದ ನಾನಾ ಭಾಗದಲ್ಲಿರುವ ಪಾರಂಪರಿಕ ಮರಗಳನ್ನು ರಕ್ಷಿಸುವ ಹೊಣೆ ಆಯಾಯ ರಾಜ್ಯಗಳು ಮತ್ತು ಸಾರ್ವಜನಿಕರದ್ದು ಎಂದು ‘ಐಕಾನಿಕ್ ಟ್ರಿ ಆಫ್ ಇಂಡಿಯಾ’ ಕೃತಿಯ ಲೇಖಕ, ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆ ಮಾಜಿ ಸಲಹೆಗಾರ ಡಾ.ಎಸ್.ನಟೇಶ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಕಲಾಸುರುಚಿ ಮತ್ತು ಕುತೂಹಲಿ–ಕನ್ನಡ ಸಹಯೋಗದೊಂದಿಗೆ ಸೈನ್ಸ್ ಸಂಜೆ ಶೀರ್ಷಿಕೆಯಡಿ ನಡೆದ ‘ಗಡಿಗಲ್ಲನ್ನು ನುಂಗಿದ ಮರ ಮತ್ತು ಇತರೆ ಕಣ್ಮಣಿ ಮರಗಳು’ ವಿಷಯ ಕುರಿತು ಮಾತನಾಡಿದರು.

ದೇಶದ ಗಡಿ ಭಾಗ ಮತ್ತು ವಿವಿಧೆಡೆಯಲ್ಲಿ 100 ವರ್ಷ ಪೂರೈಸಿರುವ ಪಾರಂಪರಿಕ ಮರಗಳನ್ನು ಇಂದಿಗೂ ಗಡಿ ಭದ್ರತಾ ಪಡೆಗಳು ಪೋಷಿಸುತ್ತಿದ್ದು, ಈ ಮರಗಳು ಒಂದೊಂದು ಐತಿಹಾತಿಕ ಕಥೆಗಳನ್ನು ಹೇಳುತ್ತವೆ. ಉದಾಹರಣೆಗೆ ಚಂಡೀಗಢದಲ್ಲಿ ಹಲವು ಪಾರಂಪರಿಕ ಮರಗಳನ್ನು ಗುರುತಿಸಲಾಗಿದೆ.



ಈ ಮರಗಳ ಪೈಕಿ 1 ಮರ ಚಂಡೀಗಢದ ಸೆಕ್ಟರ್ 38ರ ಗುರುದ್ವಾರದ ಬಳಿ ಬೆಳೆದು ನಿಂತಿದೆ. ಈ ಆಲದಮರ ಸುಮಾರು 300ರಿಂದ 350 ವರ್ಷ ಹಳೆಯದು ಎನ್ನಲಾಗಿದೆ ಎಂದು ಹೇಳಿದರು.

ಇಂಡೋ–ಪಾಕ್ ಅಂತರರಾಷ್ಟ್ರೀಯ ಗಡಿರೇಖೆ ಬಳಿ ಬೃಹತ್ ಆಲದ ಮರವೊಂದು ಒಂದು ಕಂಬದ ಸುತ್ತಲೂ ಬೆಳೆದು ನಿಂತಿದೆ. 1947ರಿಂದಲೂ ಇದೇ ಸ್ಥಿತಿಯಲ್ಲಿದೆ. ಇದನ್ನು ಬಿಎಸ್‌ಎಫ್ ಚೆಕ್ ಪೋಸ್ಟ್‌ನಲ್ಲಿ ಹಾಗೆಯೇ ಉಳಿಸಿ ಕೊಂಡು ಆ ಕಂಬದ ಬಳಿ ‘ಕಂಬವನ್ನು ನುಂಗಿದ ಮರ’ ಎಂಬ ನಾಮಫಲಕ ಅಳವಡಿಸಲಾಗಿರುವ ಐತಿಹಾಸಿಕ ಘಟನೆ ವಿವರಿಸಿದರು.

ಗುಜರಾತಿನ ಸಂಜನ್ ಎಂಬ ಗ್ರಾಮದಲ್ಲಿ 1300 ವರ್ಷಕ್ಕೂ ಹಳೆಯದಾದ ಮಾವಿನ ಮರವೊಂದು ಇದೆ. ಇದಕ್ಕೆ ಸಂಜನ್ ಚಾಲ್ತೋ ಅಂಬೊ (ನಡೆಯುವ ಮಾವಿನ ಮರ) ಎಂದೇ ಹೆಸರುವಾಸಿಯಾಗಿದೆ. ಇದರ ಇತಿಹಾಸ ಬಹಳ ರೋಚಕವಾಗಿದೆ. 1300 ವರ್ಷಗಳ ಹಿಂದೆ ನೆಟ್ಟ ಸ್ಥಳದಿಂದ ಸುಮಾರು 200 ಮೀಟರ್ ದೂರಕ್ಕೆ ಸ್ಥಳಾಂತರಗೊಂಡಿದೆ ಎಂಬುದು ಸ್ಥಳೀಯರ ವಾದ. ಇಂತಹ ಅಪರೂಪದ ಮರಗಳು ನಿಮ್ಮ ಹಳ್ಳಿ, ನಗರದಲ್ಲಿದ್ದರೆ, ಅಂತಹ ಮರಗಳನ್ನು ಪೋಷಿಸಿ, ರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಈಶಾನ್ಯ ಭಾರತದಲ್ಲಿ ಕಾಣಿಸಿಕೊಳ್ಳುವ ನಾಗ ಸಾಧು ಜೀವನ ವೈಶಿಷ್ಟ ಪೂರ್ಣ. ನಾಗಾಲ್ಯಾಂಡ್, ಅಸ್ಸಾಂ, ಮಣಿಪುರ, ಅರುಣಾಚಲ ಪ್ರದೇಶದಲ್ಲಿ ಇವರ ಇರುವಿಕೆಯನ್ನು ಕಾಣಬಹುದು. ಇವರು ಅರಣ್ಯ ಪ್ರದೇಶದಲ್ಲಿ ವಾಸಿಸುತ್ತ, ಅನೇಕ ಗಿಡಮೂಲಿಕೆಗಳ ತಿಳಿವಳಿಕೆ ಇದೆ. ಇವರ ಇತಿಹಾಸ ಕುರಿತು ಅನೇಕ ವಿದ್ವಾಂಸರು ಸಂಶೋಧನೆಗಳನ್ನು ಕೈಗೊಂಡಿದ್ದಾರೆ ಎಂದರು. ಜಮ್ಮು–ಕಾಶ್ಮೀರದ ಟ್ಯಾಂಗ್ ಮಾರ್ಗ್ ಬಳಿಯ ಸಿಎಸ್‌ಐಆರ್ ಆವರಣದಲ್ಲಿರುವ ದೈತ್ಯ ಮರ ಸಿಕ್ವೊಯಾ ಪಾರಂಪರಿಕ ಮರವಾಗಿದೆ. ಈ ಮರವು ಆಗ್ನೇಯ ಏಷ್ಯದಲ್ಲಿ ಏಕೈಕ ಮರವಾಗಿದೆ ಎಂದರು.

ಎಂಐಟಿ ಕಾಲೇಜಲ್ಲಿ ರಕ್ತದಾನ ಶಿಬಿರ

ಮೈಸೂರು, ಜೂ.15– ಮೈಸೂರಿನ ನಾಯ್ಡುನಗರದಲ್ಲಿರುವ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ನಾರಾಯಣ ಹೃದಯಾಲಯ, ಮಹಾರಾಜ ಆಯುರ್ವೇದ ಆಸ್ಪತ್ರೆ ಹಾಗೂ ಜೀವದಾರ ರಕ್ತನಿಧಿ ಕೇಂದ್ರದ ಸಹಾಯದೊಂದಿಗೆ ಆರೋಗ್ಯ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರವನ್ನು ಆಯೋಜಿಸಿದ್ದು, 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ವಯಂಪ್ರೇರಿತ ರಕ್ತದಾನ ಮಾಡುವ ಮೂಲಕ ಅರ್ಥಪೂರ್ಣವಾಗಿ ರಕ್ತದಾನ ದಿನವನ್ನು ಆಚರಿಸಿದರು

ಕಾರ್ಯಕ್ರಮವನ್ನು ನಾರಾಯಣ ಹೃದಯಾಲಯದ ವೈದ್ಯ ಡಾ.ಎಂ.ಎನ್. ರವಿ ಉದ್ಘಾಟಿಸಿ ಮಾತನಾಡಿ, ರಕ್ತದಾನದ ಮಹತ್ವ ಹಾಗೂ ರಕ್ತದಾನಿಗಳಿಗೆ ಆಗುವಂತಹ ಪ್ರಯೋಜನಗಳ ಬಗ್ಗೆ ವಿವರವಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಎಂಐಟಿ ಕಾಲೇಜಿನ ಅಧ್ಯಕ್ಷ ಡಾ.ಮುರಳಿ ಮಾತನಾಡಿ, ಕಾಲೇಜಿನಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಿದ್ದಕ್ಕಾಗಿ ಹರ್ಷ ವ್ಯಕ್ತಪಡಿಸಿದರು ಹಾಗೂ ರಕ್ತದಾನಿಗಳನ್ನು ಪ್ರಶಂಶಿಸಿದರು. ರಕ್ತದಾನದ ಮಹತ್ವವನ್ನು ತಿಳಿಸುವುದಕ್ಕಾಗಿ ಹಾಗೂ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಲು ಮಹಾರಾಜ ಎಜುಕೇಶನ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಡಾ.ಎಸ್. ಮುರಳಿ, ಸ್ವತಃ ರಕ್ತದಾನ ನೀಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಹಾರಾಜ ಆಯುರ್ವೇದ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಕೃಷ್ಣಮೂರ್ತಿ ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಡಾ.ನರೇಶ್ ಕುಮಾರ್, ಡಾ.ಯಶ್ವಂತ್‌ರಾಜು, ಡಾ.ವಿಜಯಲಕ್ಷ್ಮಿ, ಡಾ.ವೈ.ಟಿ.ಕೃಷ್ಣೇಗೌಡ, ಜೀವದಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಡಾ.ಜಯರಾಜ್, ಡಾ.ಎನ್.ವಿ.ಕೃಷ್ಣಮೂರ್ತಿ ಹಾಗೂ ಕಾಲೇಜಿನ ಸಿಬ್ಬಂದಿ ಹಾಜರಿದ್ದರು.



ಮೈಸೂರಿನ ನಾಯ್ಡುನಗರದಲ್ಲಿರುವ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಆರೋಗ್ಯ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಸೌಹಾರ್ದಯುತ ಜಾತ್ರೆಗೆ ಸಲಹೆ



ಮೈಸೂರು ತಾಲೂಕು ಜಯಪುರ ಹೋಬಳಿಯ ಅರಸಿನಕೆರೆ ಗ್ರಾಮದಲ್ಲಿ ಜೂನ್ 20 ಮತ್ತು 21ರಂದು ನಡೆಯುವ ಗ್ರಾಮದೇವತೆ ದೊಡ್ಡತಾಯಮ್ಮ ಹಬ್ಬದ ಪ್ರಯುಕ್ತ ಜಯಪುರ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಪ್ರಕಾಶ್ ಯತ್ತಿನಮನಿ ಗ್ರಾಮದ ಲಿಂಗಾಯಿತ ಮತ್ತು ದಲಿತ ಮುಖಂಡರ ಶಾಂತಿಸಭೆ ನಡೆಸಿ, ಹಬ್ಬವನ್ನು ಸೌಹಾರ್ದಯುತವಾಗಿ ಆಚರಿಸುವಂತೆ ತಿಳಿಸಿದರು.

ಡಾ.ಫ.ಗು.ಹಳಕಟ್ಟಿ, ಹಡಪದ ಅಪ್ಪಣ್ಣ ಜಯಂತಿ ಅರ್ಥಪೂರ್ಣ ಆಚರಣೆ




ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಡಿಸಿ ಕಚೇರಿಯಲ್ಲಿ ಸಭೆ ನಡೆಸಿದರು.

ಮೈಸೂರು,ಜೂ.15–ಡಾ.ಫಗು ಹಳಕಟ್ಟಿ ಅವರ ಜನ್ಮ ದಿನಾಚರಣೆಯನ್ನು ಜು.2ರಂದು ಹಾಗೂ ಹಡಪದ ಅಪ್ಪಣ್ಣ ಜಯಂತಿಯನ್ನು ಜು.22ರಂದು ಬೆಳಗ್ಗೆ 11.30 ಗಂಟೆಗೆ ಕರ್ನಾಟಕದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ‘ಡಾ.ಫಗು.ಹಳಕಟ್ಟಿ ಹಾಗೂ ಹಡಪದ ಅಪ್ಪಣ್ಣ’ ಜಯಂತಿ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಈ ಸಂಬಂಧ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಿ, ಜಯಂತಿ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾ ತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು ಎಂದರು. ಸಭೆಯಲ್ಲಿ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು, ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಮೋಹನ್‌ಕುಮಾರ್, ಚಳುವಳಿಗಾರ ಅರವಿಂದ್ ಶರ್ಮಾ, ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ರಾಜ್ಯಾಧ್ಯಕ್ಷೆ ಯಮುನಾ, ಹಾಗೂ ಡಾ.ಫ.ಗು.ಹಳಕಟ್ಟಿ, ಹಡಪದ ಅಪ್ಪಣ್ಣ ಜಯಂತಿ ಸಮಿತಿ ಮುಖಂಡರು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.06.2025 ಸೋಮವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಶಿಬಿರ, ಸಂಧಿವಾತಕ್ಕೆ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವಿಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಇಂಗ್ವಾನಲ್ ಹರ್ನಿಯಾ ಮತ್ತು ಮೂಲವ್ಯಾಧಿ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ವೆರಿಕೋಸ್ ವೇನ್ಸ್, ಉಬ್ಬಿದ ರಕ್ತನಾಳ, ಹಸಿರುಂಬು, ಇಸಬು ರೋಗ, ಬಂಗು, ಅಲರ್ಜಿ ಚರ್ಮರೋಗ, ಮಕ್ಕಳಲ್ಲಿ ಕಂಡು ಬರುವ ಹಸಿವಾಗದೆ ಇರುವುದು, ಅಜೀರ್ಣ, ಹೊಟ್ಟೆನೋವು, ಜಂತು ಹುಳುವಿನ ಬಾಧೆ, ರುಮಟೈಕ್ ಆರ್ಥೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್‌ವ್ಹೀಲ್, ರೋಟರಿ ಭವನ, ವಿಜಯನಗರ, ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.
- **ಶಾರದಾ ವಿಲಾಸ್ ಶೈಕ್ಷಣಿಕ ಸಂಸ್ಥೆ, ಶಾರದಾ ವಿಲಾಸ್ ಫಾರ್ಮಸಿ ಕಾಲೇಜ್ :** ಅಂತರರಾಷ್ಟ್ರೀಯ ಯೋಗ ದಿನ–2025, ವಿಷಯ–ಯೋಗ ಫಾರ್ ಒನ್ ಅರ್ಥ್, ಒಲ್ ಹೆಲ್ತ್, ಸ್ಥಳ: ಪ್ರೊ.ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.
- **ಶಬರಿಮಲ ಶ್ರೀ ಅಯ್ಯಪ್ಪ ಸಮಿತಿ (ಶ್ರೀ ಅಯ್ಯಪ್ಪ ಸ್ವಾಮಿ ಹಾಗೂ ಶ್ರೀ ಗುರುವಾಯೂರಪ್ಪನ್ ದೇವಾಲಯ):** ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಸಂಜೆ 5.30ರಿಂದ ಶ್ರೀ ಗುರುವಾಯೂರಪ್ಪನಿಗೆ ಪ್ರಸಾದ ಶುದ್ಧಿ, ಅಸ್ತ್ರ ಕಳಸ ಪೂಜಾ, ವಾಸ್ತು ಹೋಮ, ವಾಸ್ತು ಕಳಸ ಪೂಜಾ, ವಾಸ್ತು ಕಳಶಾಭಿಷೇಕಂ, ವಾಸ್ತು ಬಲಿ ರಾಕ್ಷೋಘ್ನ ಹೋಮ, ಅತ್ತಾಳ ಪೂಜಾ, ಸ್ಥಳ: ದೇವಾಲಯದ ಸನ್ನಿಧಿ, ಚಾಮುಂಡಿಬೆಟ್ಟದ ಪಾದ.
- **ಶ್ರೀ ಕುದೇರು ಮಠ:** ಶ್ರೀ ಮನ್ನಿರಂಜನ ಮಹಾತ್ಮ ಶ್ರೀ ಗುರುಮಲ್ಲೇಶ್ವರ ಮಹಾ ಪ್ರಭುಗಳ 126ನೇ ಪ್ರಮಥರ ಗಣಾರಾಧನೆ ಮತ್ತು ಲಿಂಗೈಕ್ಯ ಶ್ರೀ ಗುರುಲಿಂಗಸ್ವಾಮಿಗಳವರ 34ನೇ ವಾರ್ಷಿಕ ಗಣಾರಾಧನಾ ಮಹೋತ್ಸವ, ಸಂಜೆ 6 ಗಂಟೆಗೆ ಶ್ರೀ ಬಸವೇಶ್ವರ ಮೂರ್ತಿ ಹಾಗೂ ಮಹಾತ್ಮೆ ಶ್ರೀ ಗುರುಮಲ್ಲೇಶ್ವರ ಮೂರ್ತಿಯ ಮೆರವಣಿಗೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕನಕಪುರ ಶ್ರೀ ದೇಗುಲ ಮಠಾಧ್ಯಕ್ಷ ಶ್ರೀ ಡಾ.ಮುಮ್ಮಡಿ ನಿರ್ವಾಣ ಮಹಾಸ್ವಾಮಿ, ಕುದೇರು ಮಠದ ಹಿರಿಯ ಶ್ರೀಗಳಾದ ಶ್ರೀ ಗುರುಶಾಂತ ಮಹಾಸ್ವಾಮಿಗಳು, ಉದ್ಘಾಟನೆ: ಶ್ರೀ ಮಹಾಂತ ಸ್ವಾಮಿಗಳು, ಶ್ರೀ ಸಾಂಬ ಸದಾಶಿವ ಸ್ವಾಮಿಗಳು, ಶ್ರೀ ಇಮ್ಮಡಿ ಬಸಪ್ಪ ಸ್ವಾಮಿಗಳು, ಸ್ಥಳ: ಕುದೇರು ಮಠ, 4ನೇ ಕ್ರಾಸ್, ಬಸವೇಶ್ವರ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಜಯಂತಿ ವಿ.ಭಟ್, ವ್ಯಾಖ್ಯಾನ–ಡಾ.ಜ್ಯೋತಿ ಶಂಕರ್, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು, ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಯೋಗ ಕುರಿತ ವಿಶೇಷ ಸರಣಿ, ಮಹಾಯೋಗ, 8.35–ಯೋಗದತ್ತ ಜಗತ್ತು, ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಶಿಕ್ಷಕರಾದ ಡಾ.ಪಿ.ಎನ್.ಗಣೇಶ್‌ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ದಿವಾಕರ ಹೆಗಡೆ, 8.50– ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಭರತ್ ಸುಂದರ್–ಹಾಡುಗಾರಿಕೆ, 10.30ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಗೇಮ್ ಷೋ–ಪ್ರಸ್ತುತಿ: ಬಿ.ದಿಗ್ವಿಜಯ್, 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ–ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, ಆರೋಗ್ಯ ರಕ್ಷಣೆ ಮತ್ತು ಹಠಯೋಗ ಕುರಿತು ಆಯುರ್ವೇದ ವೈದ್ಯರು ಹಾಗೂ ಆರೋಗ್ಯ ಭಾರತೀಯ ರಾಷ್ಟ್ರೀಯ ಕಾರ್ಯದರ್ಶಿ ಡಾ.ಟಿ.ಎನ್. ಮಂಜುನಾಥ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿವಾಕರ ಹೆಗಡೆ, 1.00–ಪ್ರಗತಿ ಪಥ –ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಸಾವರಿಂಗ್ ಗೋಲ್ಡ್ ಬಾಂಡ್ ಯೋಜನೆ ಕುರಿತು ಎನ್.ವಿ. ಫಣೀಶ್ ಅವರಿಂದ ಮಾಹಿತಿ, 1.20–ಭಾವಗೀತೆಗಳು, ಎಂ.ಡಿ.ಪಲ್ಲವಿ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಮಣಿ ಕೃಷ್ಣಸ್ವಾಮಿ–ಹಾಡುಗಾರಿಕೆ, 4.00–ಮಹಿಳಾರಂಗ, ಅಕ್ಕ ಕೇಳವ್ವ, ಪ್ರಸ್ತುತಿ: ಜಾಂಪಣ್ಣ ಆಶಿಹಾಳ್, 4.45–ಹಿಂದಿ ಪಾಠ, ಪ್ರಸ್ತುತಿ: ಶಾಂತ ಡಿ.ಕಿಣಿ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಮುಂಗಾರಿನ ಪ್ರಧಾನ ಬೆಳೆಗಳ ಸಮಗ್ರ ಕೀಟ ನಿರ್ವಹಣೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಎಲ್.ವಿಜಯ್‌ಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ, ಯುವಪ್ರತಿಭೆ, ಕಂಪನಿ ಸೆಕ್ರೆಟರಿ ಕೋರ್ಸ್ ಎಕ್ಸಿಕ್ಯುಟಿವ್ ಲೆವೆಲ್ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ RANK ಗಳಿಸಿದ ಮಂಡ್ಯ ಜಿಲ್ಲೆ ಹಾಲಹಳ್ಳಿಯ ಮೊನಿಷ ಕೆ ಮತ್ತು ಮೈಸೂರಿನ ಚಂದನ್ ಕುಮಾರ್ ಎಸ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ, ದಿಗ್ವಿಜಯ್. ಬಿ, 8.30–ಹಿಂದಿ ಚಿತ್ರಗೀತೆ, 9.30–ವಿಶೇಷ ಕಾರ್ಯಕ್ರಮ–ವಿಕಸಿತ ಭಾರತದ ಅಮೃತಕಾಲ ಸೇವೆ, ಉತ್ತಮ ಆಡಳಿತ ಹಾಗೂ ಗರೀಬ್ ಕಲ್ಯಾಣದ 11 ವರ್ಷಗಳು, 10.00–ಯಕ್ಷಸಂಪದ, ಬಡಗುತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ಪ್ರಸ್ತುತಿ: ದಿವಾಕರ ಹೆಗಡೆ, 10.30–ಸವಿನೆನಪು

ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೃದ್ಧೆಯ ಚಿನ್ನದ ಸರ, ಓಲೆ ಕಸಿದ ಖದೀಮ

ಮೈಸೂರು, ಜೂ.15– ಖದೀಮನೊಬ್ಬ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೃದ್ಧೆಯ ಚಿನ್ನದ ಮಾಂಗಲ್ಯ ಸರ ಹಾಗೂ ಓಲೆಯನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರು–ಬೆಂಗಳೂರು ಹೆದ್ದಾರಿ ಬಳಿ ನಡೆದಿದ್ದು, ಘಟನೆಯಲ್ಲಿ ವೃದ್ಧೆಯ ಕಿವಿಗಳಿಗೆ ಗಾಯವಾಗಿದೆ.

ನಾಗನಹಳ್ಳಿ ನಿವಾಸಿ ಶ್ರೀಮತಿ ವೆಂಕಟಮ್ಮ(75) ಅವರ ಸುಮಾರು 4.50 ಲಕ್ಷ ಮೌಲ್ಯದ ಚಿನ್ನಾಭರಣವನ್ನು ಕಿತ್ತುಕೊಂಡು ಬೈಕ್‌ನಲ್ಲಿ ಪರಾರಿಯಾದ ಖದೀಮ, ಕಪ್ಪು ಬಣ್ಣದ ಬಟ್ಟೆ ಜರ್ಕಿನ್ ಹಾಗೂ ಟೋಪಿ ಧರಿಸಿದ್ದ ಎಂದು ಹೇಳಲಾಗಿದೆ. ವೆಂಕಟಮ್ಮ ಅವರು ಶನಿವಾರ ಬೆಳಗ್ಗೆ 7.30ರ ಸಮಯದಲ್ಲಿ ಮೈಸೂರು–ಬೆಂಗಳೂರು ಹೆದ್ದಾರಿ ಸರ್ವೀಸ್ ರಸ್ತೆ ಪಕ್ಕದಲ್ಲಿರುವ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು. ಆ ವೇಳೆ ಬೈಕ್‌ನಲ್ಲಿ ಬಂದ ಸುಮಾರು 25 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಸರ್ವೀಸ್ ರಸ್ತೆ ಬದಿಯಲ್ಲಿ ಬೈಕ್ ನಿಲ್ಲಿಸಿ, ವೆಂಕಟಮ್ಮ ಬಳಿ ಬಂದು ಏಕಾಏಕಿ ಅವರ ಕೊರಳಿನಲ್ಲಿದ್ದ 37 ಗ್ರಾಂ ಮಾಂಗಲ್ಯ ಸರ ಹಾಗೂ 10 ಗ್ರಾಂ ಕಿವಿಯೋಲೆ–ಮಾಟಿಗಳನ್ನು ಕಿತ್ತುಕೊಂಡಿದ್ದಾನೆ. ಘಟನೆಯಿಂದ ಆಘಾತಕ್ಕೊಳಗಾದ ವೆಂಕಟಮ್ಮ ಕೂಗುವಷ್ಟರಲ್ಲಿ ಖದೀಮ ಬೈಕ್‌ನಲ್ಲಿ ಮೈಸೂರು ಕಡೆಗೆ ಪರಾರಿಯಾಗಿದ್ದಾನೆ. ಓಲೆಗಳನ್ನು ಕಿತ್ತುಕೊಂಡಿದ್ದರಿಂದ ವೆಂಕಟಮ್ಮ ಅವರ ಕಿವಿಗಳು ಹರಿದು, ಗಾಯವಾಗಿದೆ ಈ ಸುಬಂಧಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಯುವತಿಗೆ 5.80 ಲಕ್ಷ ವಂಚನೆ

ಕ್ರೈಂ ಬಾಕ್ಸ್

ಮೈಸೂರು, ಜೂ.15– ಮೈಸೂರಿನ ಯುವತಿಯೊಬ್ಬರು ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಹೂಡಿಕೆ ಮಾಡಿ, ಐದೂವರೆ ಲಕ್ಷಕ್ಕೂ ಹೆಚ್ಚು ಹಣ ಕಳೆದುಕೊಂಡಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಲಷ್ಕರ್ ಮೊಹಲ್ಲಾದ 24 ವರ್ಷದ ಯುವತಿ, ಅಧಿಕ ಲಾಭದಾಸೆಗೆ ಹಂತ ಹಂತವಾಗಿ 5.80 ಲಕ್ಷ ರೂ. ಹೂಡಿಕೆ ಮಾಡಿ, ವಂಚನೆಗೆ ಒಳಗಾಗಿದ್ದಾರೆ.

ಹೂಡಿಕೆ ಬಗ್ಗೆ ಯೂಟ್ಯೂಬ್ ಚಾನಲ್‌ನಲ್ಲಿ ವೀಕ್ಷಿಸುವಾಗ ಕಾಣಿಸಿದ 99 ವಿಂಗ್ ಡಿಸ್ಕಷನ್ ಗ್ರೂಪ್ ಎಂಬ ವಾಟ್ಸಾಪ್ ಗುಂಪಿಗೆ ಸೇರಿದ ಯುವತಿ, ಶೇ.50ರಷ್ಟು ಲಾಭ ಬರುವುದೆಂಬ ಮಾಹಿತಿ ನೋಡಿದ್ದಾರೆ. ನಂತರ ವಂಚಕರು ಸೂಚಿಸಿದ ಅಪ್ಲಿಕೇಷನ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಆರಂಭದಲ್ಲಿ 20 ಸಾವಿರ ಹೂಡಿಕೆ ಮಾಡಿದ್ದಾರೆ.

ನಂತರ ಹಂತ ಹಂತವಾಗಿ 5.80 ಲಕ್ಷ ರೂ. ವರ್ಗಾಯಿಸಿದ್ದಾರೆ. ಒಮ್ಮೆ 60 ಸಾವಿರ ರೂ. ವಿತ್‌ಡ್ರಾ ಮಾಡಿಕೊಂಡಿದ್ದು, ಇದರ ಲ್ಲೇನೋ ಮೋಸವಿದೆ ಎಂದು ತಿಳಿದು ಎಲ್ಲಾ ಹಣವನ್ನೂ ವಿತ್‌ಡ್ರಾ ಮಾಡಲು ಮುಂದಾದಾಗ 48 ಗಂಟೆ ನಂತರ ಹಣ ತಮ್ಮ ಖಾತೆಗೆ ಜಮೆ ಆಗುವುದಾಗಿ ಸಂದೇಶ ಬಂದಿದೆ. ಆದರೆ ಎಷ್ಟು ಬಾರಿ ಪ್ರಯತ್ನಿಸಿದರೂ ಹಣವೂ ಬರುತ್ತಿಲ್ಲ, ಯಾವ ನಂಬರ್‌ಗಳಲ್ಲೂ ಸಂಪರ್ಕಕ್ಕೆ ಸಿಗುತ್ತಿಲ್ಲ. ಮೋಸ ಹೋಗಿರುವುದು ಖಚಿತವಾದ ಮೇಲೆ ಪೊಲೀಸರಿಗೆ ದೂರು ನೀಡಿದ್ದಾರೆ.

ರಾಜ್ಯದ ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಜು.1ರಿಂದ ಮೊಬೈಲ್ ಆಧಾರಿತ ಹಾಜರಾತಿ ವ್ಯವಸ್ಥೆ

ಮೈಸೂರು, ಜೂ, 15(ಎಸ್‌ಪಿಎನ್)– ಕರ್ನಾಟಕದ ಎಲ್ಲಾ(12 ಸಾವಿರ) ಆರೋಗ್ಯ ಸಂಸ್ಥೆಗಳನ್ನೊಳಗೊಂಡಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮೊಬೈಲ್ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು 2025ರ ಜು.1ರಿಂದ ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು–1) ಅಧೀನ ಕಾರ್ಯದರ್ಶಿ ಬಿ.ಎಸ್. ಪ್ರದೀಪ್ ಕುಮಾರ್ ಆದೇಶಿಸಿದ್ದಾರೆ.

ಇಲಾಖೆಯಲ್ಲಿ ಪ್ರಸ್ತುತ ಬಳಸಲ್ಪಡುತ್ತಿರುವ ಹಾಜರಾತಿ ನಿರ್ವಹಣಾ ವ್ಯವಸ್ಥೆಯು ಮೀಸಲಾದ ಹಾರ್ಡ್‌ವೇರ್ ಸಾಧನಗಳ ಮೂಲಕ ಆಧಾರ್ ಆಧಾರಿತ ಬಯೋಮೆಟ್ರಿಕ್ ಪ್ರಮಾಣೀಕರಣವನ್ನು ಅವಲಂಭಿಸಿದೆ. ಹಾರ್ಡ್‌ವೇರ್ ಸಾಧನಗಳು ಪುನರಾವರ್ತಿತ ವೆಚ್ಚಗಳಿಗೆ ಕಾರಣವಾಗಿದೆ. ಬಯೋಮೆಟ್ರಿಕ್ ಸಾಧನಗಳ ಸ್ಥಿರ ಸ್ವರೂಪದಿಂದಾಗಿ ಅಧಿಕಾರಿಗಳು, ಸಿಬ್ಬಂದಿಗಳ ಹಾಜರಾತಿ ಗುರುತಿಸುವಿಕೆಯನ್ನು ನಿರ್ದಿಷ್ಟ ಸ್ಥಳಗಳಿಗೆ ಸೀಮಿತಗೊಳಿಸಿದೆ

ಕ್ಷೇತ್ರ ಸಿಬ್ಬಂದಿ ಮತ್ತು ದೂರದ ಪ್ರದೇಶಗಳಲ್ಲಿ ಕೆಲಸ ಮಾಡುವವರಿಗೆ ಅಸಮರ್ಥತೆಗಳನ್ನು ಸೃಷ್ಟಿಸುತ್ತದೆ. ಈ ವ್ಯವಸ್ಥೆಯು ಸೀಮಿತ ವಿಸ್ತರಣೆ, ಅಂದರೆ ಹೊಸ ಸೌಲಭ್ಯಗಳಿಗೆ ವಿಸ್ತರಿಸಲು ಹಾರ್ಡ್‌ವೇರ್ ಹೂಡಿಕೆಗಳು ಮತ್ತು ಭೌತಿಕ ಸ್ಥಾಪನಾ ಪ್ರಕ್ರಿಯೆಗಳ ಅಗತ್ಯವಿದೆ. ಇದಲ್ಲದೆ, ಹಾರ್ಡ್ ವೇರ್ ವೈಫಲ್ಯಗಳು ಮತ್ತು ಸಂಪರ್ಕ ಸಮಸ್ಯೆಗಳು ಆಗಾಗ್ಗ ವ್ಯವಸ್ಥೆಯು ಡೌನ್‌ಟೈಮ್‌ಗೆ ಕಾರಣವಾಗುತ್ತದೆ ಎಂದು ಇಲಾಖೆಯಲ್ಲಿನ ಅವ್ಯವಸ್ಥೆ ಕುರಿತು ವಿವರಿಸಿದ್ದಾರೆ.

ಮೊಬೈಲ್ ಆಧರಿತ ಹಾಜರಾತಿಯು ಆಧಾರ್ ಆಧಾರಿತ ಮುಖ ಪ್ರಮಾಣೀಕರಣ, ಭೌಗೋಳಿಕ ನಿರ್ದಿಷ್ಟಾಂಗಗಳೊಳಗೆ ಕ್ಷೇತ್ರದಲ್ಲಿನ ಹಾಜರಾತಿ ಗುರುತಿಸಲು ಸೌಲಭ್ಯವನ್ನು ನೀಡುತ್ತದೆ. ಮೊಬೈಲ್ ಆಧಾರಿತ ಪರಿಹಾರವು ಹಾರ್ಡ್‌ವೇರ್ ಅಗತ್ಯವನ್ನು ತೆಗೆದು ಹಾಕುತ್ತದೆ ಎಂಬ ತಜ್ಞರ ಅಭಿಪ್ರಾಯದ ಹಿನ್ನಲೆಯಲ್ಲಿ ಈ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ ಸಮರ್ಥಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.15(ಎಸ್‌ಪಿಎನ್)– ಬಸವ ಬಳಗ ಸೇವಾ ಟ್ರಸ್ಟ್ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಲಿಂಗಾಯತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಟ್ರಸ್ಟ್ ವ್ಯಾಪ್ತಿಗೆ ಬರುವ ಬೋಗಾದಿ ಗ್ರಾಮ, ಬೋಗಾದಿ 2ನೇ ಹಂತ(ಉತ್ತರ), ಪ್ರಶಾಂತನಗರ, ಸಿಎಫ್‌ಟಿಆರ್‌ಐ ಬಡಾವಣೆ, ಆರ್‌ಐಇ ಬಡಾವಣೆ, ಎಐಐಎಸ್‌ಎಚ್ ಬಡಾವಣೆ, ಬ್ಯಾಂಕ ಕಾಲೋನಿ, ಶಾರದ ರೈಲ್ವೆ ಬಡಾವಣೆ, ಎಸ್‌ಬಿಎಂ ಬಡಾವಣೆ, ಬಸವೇಶ್ವರ ನಗರ, ಕಾವೇರಿ ಬಡಾವಣೆ, ಖಜಾನೆ ಬಡಾವಣೆ, ರವಿಶಂಕರ್ ಬಡಾವಣೆ, ದಟ್ಟಗಳ್ಳಿ ಬಡಾವಣೆ, ರಾಜರಾಜೇಶ್ವರಿ ನಗರ, ಆರ್.ಟಿ.ನಗರದಲ್ಲಿ ವಾಸವಾಗಿರುವ ಲಿಂಗಾಯತ ಸಮುದಾಯ ಮಕ್ಕಳು ಅರ್ಜಿ ಸಲ್ಲಿಸಬಹುದು.

2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಸಿಬಿಎಸ್‌ಇ 10ನೇ ತರಗತಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಮೊ:9902642731 /9449007032 ಸಂಪರ್ಕಿಸಬಹುದು. ಅರ್ಹ ಅಭ್ಯರ್ಥಿಗಳು ಮೈಸೂರಿನ ಬೋಗಾದಿ 2ನೇ ಹಂತ(ದಕ್ಷಿಣ), ರೀಜನಲ್ ಬಡಾವಣೆಯ 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ ಸ್ನೇಹ ನಿಲಯ ಮನೆ ಸಂ: 50ಕ್ಕೆ ಅರ್ಜಿ ಕಳುಹಿಸಬಹುದು ಎಂದು ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ.15(ಎಸ್‌ಪಿಎನ್)– ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ ಪ್ರಯುಕ್ತ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಜೂ.17ರಂದು ಬೆಳಗ್ಗೆ 8 ಗಂಟೆಗೆ ವಿಜಯನಗರ ಒಂದನೆ ಹಂತದ ಯೋಗನರಸಿಂಹ ದೇವಸ್ಥಾನ ಮುಂಭಾಗ ಆಯೋಜಿಸಲಾಗಿದೆ.

ಪುಣ್ಯಕೋಟಿ ಸೇವಾ ಟ್ರಸ್ಟ್, ಶಾಂತವೇರಿ ಗೋಪಾಲಗೌಡ ಆಸ್ಪತ್ರೆ, ಗೋಕುಲಂ ಎಸ್.ಎಂ.ಕೃಷ್ಣ ಮೆಮೋರಿಯಲ್ ನ್ಯೂರೋಜೋನ್ ಸಹಯೋಗದೊಂದಿಗೆ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮವನ್ನು ಪ್ರೊ.ಭಾಷ್ಯಂ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪಸಿಂಹ, ಕವೀಶ್ ಗೌಡ, ಡಾ.ಶುಶ್ರೂತ್ ಗೌಡ ಸೇರಿದಂತೆ ಇತರರು ಉಪಸ್ಥಿತರಿರುತ್ತಾರೆ ಎಂದು ಟ್ರಸ್ಟ್‌ನ ಅಧ್ಯಕ್ಷ ಹನುಮಂತೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

17 ಮಂದಿ ತಹಶೀಲ್ದಾರರ ವರ್ಗಾವಣೆ

ಮೈಸೂರು, ಜೂ.15(ಎಸ್‌ಪಿಎನ್)– ಕಂದಾಯ ಇಲಾಖೆಯ ವಿವಿಧೆಡೆ ಕರ್ತವ್ಯ ನಿರ್ವಹಿಸುತ್ತಿದ್ದ 17 ಮಂದಿ ತಹಶೀಲ್ದಾರ್ ಅವರನ್ನು ವರ್ಗಾಯಿಸಿ ಕಂದಾಯ ಇಲಾಖೆ(ಸೇವೆಗಳು–3ಮತ್ತು ವಿ.ನಿ) ಅಧೀನ ಕಾರ್ಯದರ್ಶಿ ಹೆಚ್.ಜಿ.ಮುಕ್ತಾರ್ ಪಾಷ ಆದೇಶಿಸಿದ್ದಾರೆ.

ಕೊಡಗು ಜಿಲ್ಲಾಧಿಕಾರಿಗಳ ಕಚೇರಿಯ ಚುನಾವಣಾ ಕಚೇರಿಯ ತಹಸೀಲ್ದಾರ್ ಎಚ್.ಪಿ.ರವಿಪ್ರಸಾದ್ ಅವರನ್ನು ಎಂಡಿಎಯ ತಹಶೀಲ್ದಾರ್ ಹುದ್ದೆಗೆ, ದಕ್ಷಿಣ ಕನ್ನಡದ ಸುಳ್ಯ ತಾಲೂಕಿನ ತಹಶೀಲ್ದಾರ್ ಗ್ರೇಡ್–2 ಎಂ.ಮಂಜುನಾಥ್ ಅವರನ್ನು ಕೊಡಗು ಜಿಲ್ಲಾಧಿಕಾರಿಗಳ ಕಚೇರಿ ಚುನಾವಣಾ ತಹಶೀಲ್ದಾರ್ ಹುದ್ದೆಗೆ ವರ್ಗಾಯಿಸಲಾಗಿದ್ದು, ಇವರು ಸೇರಿದಂತೆ ಒಟ್ಟು 17 ಮಂದಿ ತಹಶೀಲ್ದಾರ್ ಅವರನ್ನು ವರ್ಗಾವಣೆ ಮಾಡಲಾಗಿದೆ ಎಂದಿದ್ದಾರೆ.

ನಾಲ್ವಡಿಯವರ ಅಪಾರ ಕೊಡುಗೆ, ಅದ್ವಿತೀಯ ಸಾಧನೆ ಕುರಿತು ಇಂದಿನ ಪೀಳಿಗೆಗೆ ತಿಳಿಸುವುದು ಅವಶ್ಯ

•ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯಲ್ಲಿ ಶಾಸಕ ಕೆ.ಹರೀಶ್‌ಗೌಡ ಅಭಿಮತ
•ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ •ಸಾಧಕರಿಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ



ಮೈಸೂರಿನ ಅಶೋಕಪುರಂನ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90ರಷ್ಟು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು,ಜೂ.15(ಪಿಎಂ)– ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಪಾರ ಕೊಡುಗೆ ಮತ್ತು ಅದ್ವಿತೀಯ ಸಾಧನೆ ಕುರಿತು ಇಂದಿನ ಪೀಳಿಗೆಗೆ ತಿಳಿಸುವುದು ಅವಶ್ಯ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಮೈಸೂರಿನ ಅಶೋಕಪುರಂನ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನದಲ್ಲಿ ಅಶೋಕಪುರಂನ ಬಿ.ಆರ್. ಶೈಕ್ಷಣಿಕ ಸಾಂಸ್ಕೃತಿಕ ಮತ್ತು ಕ್ರೀಡಾ ಪ್ರೋತ್ಸಾಹ ವೇದಿಕೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ನಾಡಿನ ಅಭಿವೃದ್ಧಿ, ಜನತೆಯ ಶ್ರೇಯೋಭಿವೃದ್ಧಿಗೆ ನಾಲ್ವಡಿಯವರು ನೀಡಿದ ಕೊಡುಗೆಗಳನ್ನು ಇಂದಿನ ನಮ್ಮ ಪೀಳಿಗೆಗೆ ತಿಳಿಸಿಕೊಡಬೇಕು. ಆ ಮೂಲಕ ಸೂರ್ಯ–ಚಂದ್ರ ಇರುವ ತನಕ ನಾಲ್ವಡಿಯವರ ಹೆಸರು ಶಾಶ್ವತವಾಗಿ ಉಳಿಯಬೇಕು. ನಾಲ್ವಡಿಯವರು ಸಮಾಜದಲ್ಲಿ ಸಮಾನತೆ ನೆಲಸಬೇಕೆಂಬ ನಿಟ್ಟಿನಲ್ಲಿ ಹಲವಾರು ಸುಧಾರಣೆಗಳನ್ನು ತಂದರು. ಕನ್ನೇಗೌಡನಕೊಪ್ಪಲು ಮತ್ತು ಅಶೋಕಪುರಂ ಜನತೆಗೆ ನಾಲ್ವಡಿಯವರ ಬಗ್ಗೆ ಹೇಳಿಕೊಡಬೇಕಿಲ್ಲ. ಏಕೆಂದರೆ ನಾಲ್ವಡಿಯವರು ಈ ಎರಡು ಪ್ರದೇಶದ ಜನತೆಗೆ ಚಿರಪರಿಚಿತರು. ನಾಲ್ವಡಿಯವರು ಮತ್ತು ಜಯಚಾಮರಾಜ ಒಡೆಯರ್ ಅವರ ಕಾಲದಲ್ಲಿ ಅಶೋಕಪುರಂ ಮತ್ತು ಕನ್ನೇಗೌಡನಕೊಪ್ಪಲಿನ ಜನತೆಗೆ ಅರಮನೆಯೊಂದಿಗೆ ಹೆಚ್ಚು ಒಡನಾಟ ಇತ್ತು ಎಂದು ತಿಳಿಸಿದರು.

ನಾಲ್ವಡಿ ಹಾಗೂ ಜಯಚಾಮರಾಜ ಒಡೆಯರ್ ಜಯಂತಿ ಕಾರ್ಯಕ್ರಮವನ್ನು ಅಶೋಕಪುರಂ ಹಾಗೂ ಕನ್ನೇಗೌಡನಕೊಪ್ಪಲು ಎರಡರಲ್ಲಿ ಮಾತ್ರ ಹೆಚ್ಚಾಗಿ ಮಾಡಲಾಗುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಕಾರಣಕ್ಕೆ ಮೈಸೂರಿಗರು ಮಾತ್ರವಲ್ಲದೇ ಇಡೀ ನಾಡಿನ ಜನ ಸಂತೃಪ್ತಿಯಿಂದ ಬದುಕಲು ಸಾಧ್ಯವಾಗಿದೆ. ನಾಲ್ವಡಿಯವರ ಸಾಧನೆ ಮತ್ತು ಕೊಡುಗೆಗಳ ಬಗ್ಗೆ ನಾವು ತಿಳಿದುಕೊಳ್ಳಬೇಕು. ಆ ಮೂಲಕ ಅವರನ್ನು ಸ್ಮರಿಸಬೇಕು ಎಂದರು.

ಮುಖ್ಯ ಭಾಷಣ ಮಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ನಾಲ್ವಡಿಯವರನ್ನು ಇಡೀ ಜಗತ್ತು ಕೊಂಡಾಡುತ್ತದೆ. ನಾಲ್ವಡಿಯವರನ್ನು ಸ್ಮರಣೆ ಮಾಡುವ ಹಾಗೂ ಅವರಿಗೆ ಅತೀವ ಗೌರವ ತೋರುವ ಯಾವುದಾದರೂ ಒಂದು ವರ್ಗವಿದ್ದರೆ, ಅದು ದಲಿತ ಸಮುದಾಯ. ಇದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿ. ಮೈಸೂರು ಅರಮನೆಗೂ ಮತ್ತು ಅಶೋಕಪುರಂಗೂ ಅವಿನಾಭಾವ ಸಂಬಂಧವಿದೆ. ಮೈಸೂರಿನ ಹಳೇ ಅರಮನೆಗೆ ಬೆಂಕಿ ಬಿದ್ದ ಸಂದರ್ಭದಲ್ಲಿ ಧೈರ್ಯ ಮಾಡಿ, ದೊಡ್ಡಕೆರೆಯಿಂದ ನೀರನ್ನು ತಂದು ಬೆಂಕಿ ನಂದಿಸುವ ಸಾಹಸ ಮಾಡಿದವರು ಮೈಸೂರಿನ ಅಶೋಕಪುರಂ ಜನತೆ. ಇದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಅಶೋಕಪುರಂ ಜನತೆಗೆ ನಾಲ್ವಡಿ ಮಹಾರಾಜರು ನಿರಂತರವಾಗಿ ಪ್ರೀತಿ ಮತ್ತು ಪ್ರೋತ್ಸಾಹ ನೀಡಿದರು ಎಂದು ಹೇಳಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90ರಷ್ಟು ಅಂಕ ಪಡೆದ 50 ವಿದ್ಯಾರ್ಥಿಗಳಿಗೆ (ಜಿಲ್ಲೆಯಾದ್ಯಂತ ಜಾತ್ಯಾತೀತವಾಗಿ ಗುರುತಿಸಿ) ಪ್ರತಿಭಾ ಪುರಸ್ಕಾರ ನೀಡಲಾಯಿತು. ಜೊತೆಗೆ ಹಲವರಿಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದಕ್ಕೂ ಮುನ್ನ ನಾಲ್ವಡಿಯವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಸಂಸದ ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರ ಪತ್ನಿ ಭಾಗ್ಯಲಕ್ಷ್ಮೀ ಶ್ರೀನಿವಾಸಪ್ರಸಾದ್, ಅಶೋಕಪುರಂ ದೊಡ್ಡಗರಡಿ ಅಧ್ಯಕ್ಷ ಆರ್.ಸಿ.ಮಹೇಶ್, ಮಾಜಿ ಉಪಮೇಯರ್ ಜಿ.ಲಿಂಗಣ್ಣ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಪಲ್ಲವಿ ಬೇಗಂ, ಭುವನೇಶ್ವರಿ, ಆದಿ ಕರ್ನಾಟಕ ಮಹಾಸಂಸ್ಥೆ ಅಧ್ಯಕ್ಷ ಸಿದ್ದರಾಜು (ಸುನಿಲ್), ಉಪಾಧ್ಯಕ್ಷ ಶಿವಸ್ವಾಮಿ, ಸಮಾಜ ಸೇವಕ ಎನ್.ಎಂ.ನವೀನ್‌ಕುಮಾರ್, ವಕೀಲ ಉಮೇಶ್ ಸೇರಿದಂತೆ ವೇದಿಕೆ ಪದಾಧಿಕಾರಿಗಳು ಮತ್ತಿತರರು ಹಾಜರಿದ್ದರು.

ಮೈಸೂರಲ್ಲಿ ಮಾವಿನ ಮಜಾ ಜೊತೆಗೆ ನೇರಳೆ ಆಕರ್ಷಣೆ

ಈ ಔಷಧಿಯ ಫಲಕ್ಕೆ ಬಾರೀ ಡಿಮ್ಯಾಂಡು!



ಮೈಸೂರು, ಜೂ.15(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿಗೆ ಹಣ್ಣುಗಳ ರಾಜನ ಜೊತೆಗೆ ಕಪ್ಪು ಸುಂದರಿ (ನೇರಳೆ)ಯ ಎಂಟ್ರಿ ಆಗಿದೆ...!

ಮಾವಿನ ಸಿಸನ್ ಬಂತೆಂದರೆ ಬಂಬೂ ಬಜಾರ್‌ನ ಹಳೇ ಎಪಿಎಂಸಿ ಹಣ್ಣುಗಳ ಸಗಟು ಮಾರುಕಟ್ಟೆ, ಎಂಜಿ ರಸ್ತೆ ಮಾರುಕಟ್ಟೆ, ದೇವರಾಜ ಮಾರುಕಟ್ಟೆ, ಮಂಡಿ ಮೊಹಲ್ಲಾ ಮಾರುಕಟ್ಟೆ, ಅಗ್ರಹಾರ ಮಾರುಕಟ್ಟೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳು ಹಾಗೂ ಬೆಂಗಳೂರು, ಹುಣಸೂರು, ಹೆಚ್.ಡಿ.ಕೋಟೆ, ಟಿ.ನರಸೀಪುರ, ಬನ್ನೂರು ಮುಖ್ಯರಸ್ತೆ ಸೇರಿದಂತೆ ಎಲ್ಲೆಡೆ ಮಾವಿನ ಘಮಲು ಮೂಗಿಗೆ ಬಡಿಯುತ್ತದೆ.

ಆರಂಭದಲ್ಲಿ ಮಾವಿನ ಹಣ್ಣು ಮಾರುಕಟ್ಟೆಯಲ್ಲಿ ಆಧಿಪತ್ಯ ಸಾಧಿಸಿತ್ತಾದರೂ, ದಿನ ಕಳೆದಂತೆ ನೇರಳೆ ಹಣ್ಣು, ಮಾವಿನ ಸ್ಥಾನವನ್ನು ಕ್ರಮೇಣ ಕಸಿದುಕೊಳ್ಳುತ್ತಿದೆ. ಅಂದಹಾಗೆ ಈಗ ಎಲ್ಲಿ ನೋಡಿದರು ಮಾವಿನ ಜೊತೆ ಕಡು ಕಪ್ಪಾಗಿ ಕಾಣುವ ರಸಭರಿತ ನೇರಳೆ ಹಣ್ಣಿನ ಹವಾ ಜೋರಾಗಿದೆ.

ರಸ್ತೆ ಬದಿಯ ತಳ್ಳುವ ಗಾಡಿಗಳಿಂದ ಹಿಡಿದು ಸ್ಥಳೀಯ ಮಾರುಕಟ್ಟೆಗಳವರೆಗೆ, ಎಲ್ಲೆಡೆ ನೇರಳೆ ಹಣ್ಣಿನ ಗುಂಗು ಕಾಣುತ್ತಿದೆ. ನೇರಳೆ ಕೇವಲ ರುಚಿಕರವಾದ ಹಣ್ಣು ಮಾತ್ರವಲ್ಲ, ಇದು ಆರೋಗ್ಯದ ಖಜಾನೆಯೂ ಆಗಿದೆ. ಇದರ ಸೇವನೆಯಿಂದ ಮಧುಮೇಹ ನಿಯಂತ್ರಣ, ಜೀರ್ಣಕ್ರಿಯೆ ಸುಧಾರಣೆ, ಗಂಟಲು ನೋವು, ಬಾಯಿ ದುರ್ವಾಸನೆ, ಉಬ್ಬಸ, ಮತ್ತು ತೊದಲುವಿಕೆಯಂತಹ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಇಷ್ಟೆಲ್ಲಾ ಗುಣ ವಿಶೇಷ ಹೊಂದಿರುವ ನೇರಳೆ ಎಲ್ಲರ ಬಾಯಲ್ಲಿ ನೀರೂರಿಸುತ್ತಿದೆ.

ನೋಡಲು ಕಪ್ಪಾದರೂ ಬಲು ದುಬಾರಿ!: ಈ ವರ್ಷ ನೇರಳೆ ಹಣ್ಣಿನ ಇಳುವರಿ ಕಡಿಮೆಯಾಗಿರುವುದರಿಂದ ಬೆಲೆ ಗಣನೀಯವಾಗಿ ಏರಿಕೆಯಾಗಿದೆ. ಕಳೆದ ವರ್ಷ ಕೆ.ಜಿಗೆ 250–300 ರೂ. ಇದ್ದ ನೇರಳೆ, ಈ ಬಾರಿ 300–350 ರೂ.ಗೆ ಮಾರಾಟವಾಗುತ್ತಿದೆ. ಆದರೂ, ಗ್ರಾಹಕರು ಈ ರುಚಿಕರ ಹಣ್ಣಿನ ಔಷಧೀಯ ಗುಣಗಳಿಗಾಗಿ ಖರೀದಿಗೆ ಹಿಂದೇಟು ಹಾಕುತ್ತಿಲ್ಲ.

ನೇರಳೆ ಮರಗಳು ಸಾಮಾನ್ಯವಾಗಿ ಫೆಬ್ರವರಿ–ಮಾರ್ಚ್‌ನಲ್ಲಿ ಹೂವು ಬಿಡಲು ಆರಂಭಿಸುತ್ತವೆ. ಏಪ್ರಿಲ್–ಮೇ ತಿಂಗಳಲ್ಲಿ ಕಾಯಿಗಳು ಕಟ್ಟಿ, ಜೂನ್–ಜುಲೈನಲ್ಲಿ ಹಣ್ಣಾಗಿ ಮಾರುಕಟ್ಟೆಗೆ ಸಿದ್ಧವಾಗುತ್ತವೆ. ಈ ವರ್ಷ ಕಡಿಮೆ ಇಳುವರಿಯ ಹೊರತಾಗಿಯೂ ನೇರಳೆಯ ಗುಣಮಟ್ಟ ಉತ್ತಮವಾಗಿದ್ದು, ಗ್ರಾಹಕರನ್ನು ಸೆಳೆಯುತ್ತಿದೆ.

ಕಳೆದ ಒಂದು ವಾರದಿಂದ ಮಾರುಕಟ್ಟೆಗೆ ನೇರಳೆ ಹಣ್ಣು ಬರುತ್ತಿದೆ. ಜಮ್ ನೇರಳೆ ಹಣ್ಣಿಗೆ ಅತೀ ಹೆಚ್ಚು ಬೇಡಿಕೆ ಇದೆ. ಮಾರುಕಟ್ಟೆ ಒಳಗೆ ಹಾಗೂ ಹೊರಗೂ ನೇರಳೆ ಹಣ್ಣಿನ ಮಾರಾಟ ಜೋರಾಗಿ ನಡೆಯುತ್ತಿದೆ ಎಂದು ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷರಾದ ಎಸ್.ಮಹದೇವ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಹಿರಿಯ ರಂಗಕರ್ಮಿ ನ.ರತ್ನ ರಂಗಭೂಮಿಯ ಭೀಷ್ಮ

ಹಿರಿಯ ಕಲಾವಿದೆ ಇಂದಿರಾ ನಾಯರ್ ಅಭಿಪ್ರಾಯ



ಹಿರಿಯ ರಂಗಕರ್ಮಿ ನ.ರತ್ನ ಸಂಸ್ಮರಣೆ ಮತ್ತು 'ಸೂತ್ರದ ಗೊಂಬೆ' ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಮೈಸೂರು, ಜೂ.15(ಎಸ್‌ಪಿಎನ್)– ಹಿರಿಯ ರಂಗಕರ್ಮಿ ದಿ.ನ.ರತ್ನ ಅವರು, ರಂಗಭೂಮಿಯ ಭೀಷ್ಮ ಎಂದರೆ ತಪ್ಪಾಗಲಾರದು ಎಂದು ಹಿರಿಯ ಕಲಾವಿದೆ ಇಂದಿರಾ ನಾಯರ್ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ವೃಕ್ಷ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಹಿರಿಯ ರಂಗಕರ್ಮಿ ನ.ರತ್ನ ಸಂಸ್ಮರಣೆ ಹಾಗೂ ವಿನೋಧ್ ರಂಗ ನಿರ್ದೇಶನದ ಪಿನಾಕಿ ಪ್ರಸ್ತುತಪಡಿಸಿರುವ ರಾಜಸ್ಥಾನಿ ಜಾನಪದ ಕಥೆ ಆಧಾರಿತ ನಾಟಕ ಸೂತ್ರದ ಗೊಂಬೆ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನ.ರತ್ನ ಅವರು ಮೊದಮೊದಲು ನನಗೆ ರಂಗಭೂಮಿಯಲ್ಲಿ ಅವಕಾಶ ಕಲ್ಪಿಸಿದ್ದರಿಂದ ಇಂದು ಇಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯವಾಗಿದೆ. ಅವರು ರಂಗಭೂಮಿಯಲ್ಲಿ ಪ್ರಾಮಾಣಿಕತೆ, ಸಮಯ ಪರಿಪಾಲನೆ ಹಾಗೂ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದರು. ಅದರಲ್ಲೂ ಗ್ರಾಮೀಣ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ದೊರಕಿಸಿ ಕೊಡಲು ಪ್ರಯತ್ನಿಸುತ್ತಿದ್ದ ಪ್ರಸಂಗಗಳನ್ನು ನೆನೆದರು.

ನ.ರತ್ನ ಮೈಸೂರಿನ ಆಯುಷ್‌ನಲ್ಲಿ ನಿರ್ದೇಶಕರಾಗಿ ಸುದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ. ಅದರಂತೆ ಹವ್ಯಾಸಿ ರಂಗಭೂಮಿಯಲ್ಲೂ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಸಮತೆಂತೋ ಸಂಸ್ಥೆ ಮೂಲಕ ರಂಗಭೂಮಿ ಬೆಳವಣಿಗೆಗೆ ಶ್ರಮಿಸಿದ್ದಾರೆ ಎಂದರು.

ಹಿರಿಯ ರಂಗಕರ್ಮಿ ಪ್ರೊ.ಎಚ್.ಎಸ್. ಉಮೇಶ್ ಮಾತನಾಡಿ, ನ.ರತ್ನ ಅವರು ಆತ್ಮೀಯ ಗೆಳೆಯರ ಬಳಗದಲ್ಲಿ ಗುರುತಿಸಿಕೊಂಡಿದ್ದರು. ರಂಗಭೂಮಿಯಲ್ಲಿ ತೊಡಗಿಸಿಕೊಂಡು ಹಲವಾರು ನಾಟಕಗಳನ್ನು ನಿರ್ದೇಶಿಸಿ, ಸಾಮಾಜಿಕ ಸಮಸ್ಯೆಗಳಿಗೆ ದನಿಯಾಗಿದ್ದರು. ಸಮತೆಂತೋ ಸಂಸ್ಥೆ ಮೂಲಕ ನೂರಾರು ನಾಟಕಗಳನ್ನು ನಿರ್ದೇಶಿಸಿ, ಪ್ರದರ್ಶಿಸಿದ್ದಾರೆ. ಇದು ಮೈಸೂರಿನ ಹವ್ಯಾಸಿ ರಂಗಭೂಮಿ ಬೆಳವಣಿಗೆಗೆ ಅವರ ಕೊಡುಗೆ ಅಪಾರ ಎಂದು ಬಣ್ಣಿಸಿದರು.

ವೇದಿಕೆಯಲ್ಲಿ ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಈ.ಸಿ.ನಿಂಗರಾಜೇಗೌಡ, ಉದ್ಯಮಿ ಧರ್ಮಪ್ರಸಾದ್, ಪಿನಾಕ ಥಿಯೇಟರ್ ಮುಖ್ಯಸ್ಥ ಎಸ್.ಹೇಮಂತ್, ವೃಕ್ಷ ಟ್ರಸ್ಟ್ ಕಾರ್ಯದರ್ಶಿ ಪಿ.ಶಾಂತಕುಮಾರ್ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ರಾಜಸ್ಥಾನಿ ಜಾನಪದ ಕಥೆ ಆಧಾರಿತ ನಾಟಕ 'ಸೂತ್ರದ ಗೊಂಬೆ' ಪ್ರದರ್ಶನಗೊಂಡು ಎಲ್ಲಾ ಗಮನಸೆಳೆಯಿತು.

ಇಂದು ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ್‌ಗೆ ಸನ್ಮಾನ

ಮೈಸೂರು, ಜೂ.15– ಲಾಗೈಡ್ ಕಾನೂನು ಮಾಸಪತ್ರಿಕೆ ಬಳಗ ಹಾಗೂ ಮೈಸೂರು ಪತ್ರಕರ್ತರ ಸ್ನೇಹಕೂಟದ ಸಹಯೋಗದಲ್ಲಿ ಖಾದ್ರಿ ಶಾಮಣ್ಣ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ್ ಅವರಿಗೆ ಸನ್ಮಾನ ಕಾರ್ಯಕ್ರಮವನ್ನು ಏರ್‌ಲೈನ್ಸ್ ಹೋಟೆಲ್ ಸಭಾಂಗಣದಲ್ಲಿ ನಾಳೆ(ಜೂ.16) ಮಧ್ಯಾಹ್ನ 1 ಗಂಟೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಮಾಜಿ ಸಂಸದ ಪ್ರತಾಪ್ ಸಿಂಹ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಿರಿಯ ವಕೀಲ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ಲಾಗೈಡ್ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

ಮುಂದಿನ ಪೀಳಿಗೆ ಕೃತಕ ಬುದ್ಧಿಮತ್ತೆ ಬರವಣಿಗೆಯ ಪ್ರಭಾವಕ್ಕೆ ಒಳಗಾಗಬಹುದು

ಮುಕ್ತ ವಿವಿಯ ಅಕ್ಕಮಹಾದೇವಿ ಅಧ್ಯಯನ ಪೀಠದ ನಿರ್ದೇಶಕಿ ಡಾ.ಕವಿತಾ ರೈ ಅಭಿಪ್ರಾಯ

ಮೈಸೂರು,ಜೂ.15(ಎಂಟಿವೈ)– ಕಂಪ್ಯೂಟರ್ ಯುಗದಿಂದಾಗಿ ಅನೇಕರು ಕೈ ಬರವಣಿಗೆಯಿಂದ ಅಂತರ ಕಾಯ್ದುಕೊಂಡಿದ್ದು, ಮುಂದಿನ ಪೀಳಿಗೆ ನಾಲ್ಕನೆ ಆಯಾಮವಾದ ಕೃತಕ ಬುದ್ಧಿಮತ್ತೆ (ಎಐ)ಯ ಬರವಣಿಗೆಯ ಪ್ರಭಾವಕ್ಕೆ ಒಳಗಾಗಬಹುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಕ್ಕಮಹಾದೇವಿ ಅಧ್ಯಯನ ಪೀಠದ ನಿರ್ದೇಶಕರಾದ ಡಾ.ಕವಿತಾ ರೈ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ ಡಾ.ಕಲ್ಪನಾ ಮುಕುಂದ ಅಯ್ಯಂಗಾರ್ ಹಾಗೂ 'ಅಮೇರಿಕಾದ ಟೆಕ್ಸಾಸ್ ವಿಶ್ವವಿದ್ಯಾನಿಲಯದ ಕಾಲೇಜ್ ಆಫ್ ಎಜುಕೇಷನ್ ಅಂಡ್ ಹ್ಯೂಮನ್ ಡೆವಲಪ್ಮೆಂಟ್' ವಿಭಾಗದ ಡಾ.ಹಾವರ್ಡ್ ಲೆಸ್ಲಿ ಸ್ಮಿತ್ ಅವರು ಸಂಪಾದಿಸಿ ಪ್ರಕಟಿಸಿರುವ 'ಟೀಚಿಂಗ್ ಇಂಗ್ಲಿಷ್ ರೈಟಿಂಗ್ ಟು ದಿ ಡಯಾಸ್ಪೊರಾ: ಸೋಷಿಯಲ್ ಅಂಡ್ ಕಲ್ಚರಲ್ ಪರ್ಸ್ಪೆಕ್ಟಿವ್ಸ್' ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಯುವ ಜನರು ಕೈ ಬರವಣಿಗೆಯನ್ನೇ ಮರೆತಿದ್ದಾರೆ. ಇದರಿಂದ ಸಹಿ ಮಾಡುವುದಕ್ಕೂ ಪರದಾಡುವಂತಾಗಿದೆ. ಎಲ್ಲಾ ಬರವಣಿಗೆಯನ್ನು ಕಂಪ್ಯೂಟರ್‌ನಲ್ಲಿಯೇ ಮಾಡುವಂತಾಗಿದೆ. ಕಂಪ್ಯೂಟರ್ ಬರವಣಿಗೆ ಭಾವನಾತ್ಮಕವಾಗಿಯೂ ಪರಿಣಾಮಕಾರಿಯಾಗಿಯೂ ಇರುವುದಿಲ್ಲ. ಮುಂದಿನ ಪೀಳಿಗೆ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದ ಬರವಣಿಗೆಯನ್ನೇ ಅವಲಂಬಿಸುವ ಸಾಧ್ಯತೆ ಇದೆ ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಕಾರ್ಯಕ್ರಮದಲ್ಲಿ 'ಟೀಚಿಂಗ್ ಇಂಗ್ಲಿಷ್ ರೈಟಿಂಗ್ ಟು ದಿ ಡಯಾಸ್ಪೊರಾ: ಸೋಷಿಯಲ್ ಅಂಡ್ ಕಲ್ಚರಲ್ ಪರ್ಸ್ಪೆಕ್ಟಿವ್ಸ್' ಕೃತಿಯನ್ನು ಕವಿ ಜ್ಯೋತಿ ಗುರುಪ್ರಸಾದ ಬಿಡುಗಡೆ ಮಾಡಿದರು.

ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಬರವಣಿಗೆ ಅವಶ್ಯಕವಾಗಿದೆ. ಯಾವುದೇ ಬರವಣಿಗೆ ನಮ್ಮ ವ್ಯಕ್ತಿತ್ವವನ್ನು ತೋರ್ಪಡಿಸುತ್ತದೆ. ಸೃಜನಶೀಲ ಅಥವಾ ಸೃಜನೇತರ ಬರವಣಿಗೆಯಾಗಬಹುದು, ಅದು ಕೈಬರಹದಿಂದ ರಚನೆ ಮಾಡಿದಾಗ ಮಾತ್ರ ಪರಿಣಾಮಕಾರಿಯಾಗಿರುತ್ತದೆ. ಯಾವುದೇ ಬರವಣಿಗೆಯಲ್ಲಿ ಪದಗಳ ಚೌಕಟ್ಟು ಇರಬೇಕು. ಬರವಣಿಗೆ ಬರೆಯುವವರಿಗೆ ಸಿರಿತನವಾಗಿರುತ್ತದೆ. ಪದ ಬಳಕೆ, ವಾಕ್ಯ ರಚನೆಗೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದು ಸಲಹೆ ನೀಡಿದರು.

ಯಾವುದೇ ಭಾಷೆಯಾಗಿರಲಿ ಅದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶ, ಒಂದು ಜಾತಿ, ಧರ್ಮದಿಂದ ಮತ್ತೊಂದು ಜಾತಿ, ಧರ್ಮಕ್ಕೆ ವಿಭಿನ್ನವಾಗಿರುತ್ತದೆ. ಪ್ರತಿ 8 ಕಿ.ಮಿ ವ್ಯಾಪ್ತಿಗೆ ಭಾಷಾ ಶೈಲಿ ಬದಲಾಗುತ್ತದೆ. ಪ್ರತಿಯೊಬ್ಬರಿಗೂ ಕೈ ಬೆರಳಿನ ಗುರುತಿನಂತೆ ಭಾಷೆ ವಿಭಿನ್ನವಾಗಿರುತ್ತದೆ ಎಂದರು.

ತಮಿಳು ನಟ ಕಮಲ್ ಹಾಸನ್ ಅವರು ನೀಡಿದ ಹೇಳಿಕೆಯಿಂದ ಕನ್ನಡ ಭಾಷೆಯ ಜನನ ಹಾಗೂ ಇತಿಹಾಸದ ಬಗ್ಗೆ ಸಾಕಷ್ಟು ಪಂಡಿತರು ಚರ್ಚೆ ಮಾಡಿದ್ದಾರೆ. ಕಮಲ್ ಹಾಸನ್ ಅವರ ಅಭಿಪ್ರಾಯ ಆಧಾರ ರಹಿತವಾದುದು. ಒಂದು ಭಾಷೆಯ ನಂತರ ಮತ್ತೊಂದು ಭಾಷೆ ಹುಟ್ಟಿಕೊಂಡಿಲ್ಲ. ಒಂದೇ ಕಾಲಘಟ್ಟದಲ್ಲಿ ಅನೇಕ ಭಾಷೆಗಳು ಹುಟ್ಟಿಕೊಂಡಿವೆ ಎಂದು ನುಡಿದರು.

ಇದೇ ವೇಳೆ ಕೃತಿ ಬಿಡುಗಡೆ ಮಾಡಿದ ಕವಿ ಜ್ಯೋತಿ ಗುರುಪ್ರಸಾದ ಮಾತನಾಡಿ, ಇತ್ತೀಚೆಗೆ ಕೃತಿಚೌರ್ಯ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಕೃತಿಚೌರ್ಯದಿಂದ ಓದು ಮತ್ತು ಆಲೋಚನೆಯ ನಡುವಿನ ಕೊಂಡಿ ಕಳಚಿಹೋಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಯಾರದೋ ಬರವಣಿಗೆಯನ್ನು ಕದ್ದು ಪ್ರಕಟಿಸುತ್ತಿದ್ದಾರೆ. ಇದಕ್ಕೆ ಶಾಲಾ–ಕಾಲೇಜುಗಳಲ್ಲಿ ಚಾಲ್ತಿಯಲ್ಲಿರುವ ಬೋಧನಾ ಪದ್ಧತಿಯಲ್ಲಿನ ದೋಷವೇ ಕಾರಣ. ವಿದ್ಯಾರ್ಥಿಗಳು ಸಂತಸದಿಂದ ಕಲಿಯುವ ರೀತಿಯಲ್ಲಿ ಬೋಧನಾ ವಿಧಾನ ಇರಬೇಕು. ಆಗ ವಿದ್ಯಾರ್ಥಿಗಳು ಸ್ವತಂತ್ರವಾಗಿ ಬರೆಯುವುದನ್ನು ರೂಢಿಸಿಕೊಳ್ಳುತ್ತಾರೆ. ಇದರಿಂದ ಕೃತಿಚೌರ್ಯ ಆಗುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ.ಸಿ.ನಾಗಣ್ಣ ಕೃತಿ ಕುರಿತು ಮಾತನಾಡಿದರು. ಡಾ.ಜಯಗೌರೀ ಶಿವಕುಮಾರ್ ಕೃತಿ ಕುರಿತು ಅನಿಸಿಕೆ ಹಂಚಿಕೊಂಡರು. ಇದೇ ವೇಳೆ ಚಿತ್ರ ಕಥನ ಕಲಾವಿದೆ ವೈಷ್ಣವೀ ಜಯಸಿಂಹ ಅವರನ್ನು ಗೌರವಿಸಲಾಯಿತು. ಲೇಖಕಿ ಡಾ.ಕಲ್ಪನಾ ಮುಕುಂದ ಅಯ್ಯಂಗಾರ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪತ್ರಕರ್ತ ಮೈಸೂರು ರಂಗನಾಥ್ ವಹಿಸಿದ್ದರು. ಉಷಾ ನರಸಿಂಹನ್ ಸ್ವಾಗತಿಸಿ, ವಂದಿಸಿದರು. ಸಾಗರಿ ಸುನಾಗ್ ಪ್ರಾರ್ಥಿಸಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : ನಾನು ಸತ್ತ ಮೇಲೆ ನೀನು ಇನ್ನೊಂದು ಮದುವೆ ಆಗ್ತೀಯಾ?

ಪತ್ನಿ : ಇಲ್ಲ, ನನ್ನ ತಂಗಿ ಜೊತೆ ಇದ್ದು ಬಿಡ್ತೀನಿ. ಒಂದು ವೇಳೆ ನಾನು ಸತ್ತರೆ ನೀವು ಬೇರೆ ಮದುವೆ ಆಗ್ತೀರಾ?

ಗುಂಡ : ಇಲ್ಲ. ನಾನೂ ಕೂಡ ನಿನ್ನ ತಂಗಿ ಜೊತೆ ಇದ್ದು ಬಿಡ್ತೀನಿ!

ಮೈಸೂರು ಮಿತ್ರ

ಸೋಮವಾರ, 16 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

'ನಮ್ಮೊಳಗಿನ ಬೆಳಕು ಹೇಗಿರಬೇಕೆಂದರೆ
ಅದು ಇನ್ನೊಬ್ಬರ ಬಾಳನ್ನು ಬೆಳಗಬೇಕು'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆದ್ರೆ ಒಂದು ಅಡಿಕೆ ಮರ, ಹೋದ್ರೆ ಒಂದು ಗೋಟಣೆ

ನಿಮ್ಮ ಪತ್ರಗಳು

ಪೊಲೀಸ್ ಆಯುಕ್ತರು, ಪಾಲಿಕೆ ಆಯುಕ್ತರಿಗೆ ಬಹಿರಂಗ ಪತ್ರ

ಮಾನ್ಯರೆ,

ಇಂದಿನ 'ಮೈಸೂರು ಮಿತ್ರ' ದಿನಪತ್ರಿಕೆ ನೋಡಿ ನಮಗೆ ನಿಜಕ್ಕೂ ತುಂಬಾ ಸಂತೋಷವಾಯಿತು. ಕಾರಣ ಶತಮಾನದ 'ಅಶೋಕ ರಸ್ತೆಗೆ ಸುರಕ್ಷಿತ, ಸುಂದರ ರೂಪ' ಶೀರ್ಷಿಕೆಯೊಂದಿಗೆ ಮೂಡಿಬಂದ ಸುದ್ದಿ.

ಆದರೆ ನಮಗೆ ತಿಳಿದಿರುವಂತೆ ಅಶೋಕ ರಸ್ತೆ ಏಕಮುಖ ಸಂಚಾರವಾಗಿ ಸುಮಾರು ಮೂರು ನಾಲ್ಕು ದಶಕಗಳೇ ಕಳೆದಿವೆ. ಈ ರಸ್ತೆಯಲ್ಲಿ ಇಲ್ಲಿಯತನಕ ಯಾವುದೇ ವಿಧವಾದ ಅಪಘಾತಗಳು ಅಥವಾ ಫುಟ್‌ಪಾತ್ ಅತಿಕ್ರಮಣ ನಡೆದಿಲ್ಲ. ಆದರೆ ತಾವು ಈ ರಸ್ತೆಯನ್ನು ಆಯ್ಕೆ ಮಾಡಿಕೊಂಡ ಕಾರಣ ತಿಳಿಯುತ್ತಿಲ್ಲ. ಇಷ್ಟೇ ಹಳೆಯದಾದ ಶತಮಾನಗಳನ್ನು ಕಂಡ ಸಯ್ಯಾಜಿರಾವ್ ರಸ್ತೆಯು ರಾಜಮಾರ್ಗ, ಹೆರಿಟೇಜ್ ರೋಡ್, ವಿಶ್ವ ವಿಖ್ಯಾತ ದಸರಾ ಮೆರವಣಿಗೆ ಸಾಗುವ ರಸ್ತೆ ಎಂದೇ ಖ್ಯಾತಿ ಹೊಂದಿದ್ದು, ಈ ರಸ್ತೆಯಲ್ಲಿ ಹತ್ತು-ಹಲವು ಸಮಸ್ಯೆಗಳನ್ನು ಸಾರ್ವಜನಿಕರು ಪ್ರತಿನಿತ್ಯ ಅನುಭವಿಸುತ್ತಾ ನರಕಯಾತನೆಯಲ್ಲಿ ಓಡಾಡುತ್ತಿದ್ದಾರೆ.

ಸಯ್ಯಾಜಿರಾವ್ ರಸ್ತೆ ಪೂರ್ವ ಫುಟ್‌ಪಾತ್ ಮತ್ತು ಬೋಟಿ ಬಜಾರ್ ರಸ್ತೆ, ಚಿಕ್ಕ ಗಡಿಯಾರ ಸುತ್ತಮುತ್ತ ಸೇರಿದಂತೆ ಒಲಂಪಿಯಾ ಚಿತ್ರಮಂದಿರದ ಪಕ್ಕದ ಮತ್ತು ಹಿಂಭಾಗದ ರಸ್ತೆಗಳು ಫುಟ್‌ಪಾತ್ ವ್ಯಾಪಾರಿಗಳಿಂದ ಅತಿಕ್ರಮಣಗೊಂಡು ಸಾರ್ವಜನಿಕರು ನಡೆದುಕೊಂಡು ಓಡಾಡುವುದೇ ದುಸ್ತರವಾಗಿದೆ.

ಕೆ.ಆರ್.ವೃತ್ತದ ನೈರುತ್ಯಕ್ಕೆ ಅಂದರೆ ಚಿಕ್ಕ ಗಡಿಯಾರದ ಮುಂಭಾಗದ ರಸ್ತೆಯಲ್ಲಿ ವ್ಯಾಪಾರ ವಹಿವಾಟುಗಳು ಯಾವುದೇ ಅಡ್ಡಿ-ಆತಂಕಗಳಿಲ್ಲದೆ ನಿರಂತರವಾಗಿ ನಡೆಯುತ್ತಿದೆ. ಪಾದಚಾರಿಗಳಿಗೆ ಮೀಸಲಿಟ್ಟ ಫುಟ್‌ಪಾತ್ ಅನ್ನು ಅತಿಕ್ರಮಣಗೊಳಿಸಿರುವುದರಿಂದ ಪಾದಚಾರಿಗಳು ವಿಧಿ ಇಲ್ಲದೆ ರಸ್ತೆಯ ಮೇಲೆ ಓಡಾಡುವಂತಾಗಿದೆ. ಇದರಿಂದ ಪ್ರತಿನಿತ್ಯ ಕೆ.ಆರ್.ಆಸ್ಪತ್ರೆಗೆ ಬರುವ ಹಾಗೂ ಕೆ.ಆರ್.ಆಸ್ಪತ್ರೆಯಿಂದ ಬೇರೆ ಆಸ್ಪತ್ರೆಗಳಿಗೆ ರೋಗಿಗಳನ್ನು ಸಾಗಿಸುವ ಆಂಬುಲೆನ್ಸ್‌ಗಳಿಗೆ ತೊಂದರೆಯಾಗುತ್ತಿದೆ.

ಸಯ್ಯಾಜಿರಾವ್ ರಸ್ತೆಯಲ್ಲಿರುವ ಒಂದು ಸುಪ್ರಸಿದ್ಧ ಸಿಹಿ ಅಂಗಡಿಗೆ ಬರುವ ಹೊರ ರಾಜ್ಯದ ಅಥವಾ ಪರ ಊರಿನಿಂದ ಬರುವ ನಾಲ್ಕು ಚಕ್ರದ ವಾಹನಗಳು ಸಯ್ಯಾಜಿರಾವ್ ರಸ್ತೆಯ ಪಶ್ಚಿಮದ ರಸ್ತೆಯನ್ನೇ ಆಕ್ರಮಿಸಿಕೊಂಡಿರುತ್ತವೆ.

ಇನ್ನು ಒಲಂಪಿಯಾ ಚಿತ್ರಮಂದಿರದ ಪಕ್ಕದ ರಸ್ತೆ ಮತ್ತು ಹಿಂಭಾಗದ ರಸ್ತೆಯನ್ನು ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುವವರು ಮತ್ತು ಇತರೆ ಫುಟ್‌ಪಾತ್ ವ್ಯಾಪಾರಿಗಳು ಇಡೀ ರಸ್ತೆಯನ್ನೇ ಆಪೋಷಣ ಮಾಡಿಕೊಂಡಿದ್ದಾರೆ.

ಪೊಲೀಸ್ ಹಾಗೂ ಪಾಲಿಕೆ ಆಯುಕ್ತರುಗಳಲ್ಲಿ ನಮ್ಮ ಮನವಿ ಇಷ್ಟೇ; ತಾವೇ ನಿಗದಿಪಡಿಸಿದ ದಿನಾಂಕ ಮತ್ತು ಸಮಯವನ್ನು ನಮಗೆ ತಿಳಿಸಿದರೆ ನಾವುಗಳು ಖುದ್ದಾಗಿ ಬಂದು ಈ ಎಲ್ಲಾ ಸಮಸ್ಯೆಗಳ ಜೊತೆ ಇನ್ನೂ ಹತ್ತು-ಹಲವು ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇವೆ. ನಮ್ಮನ್ನೇ ಖುದ್ದಾಗಿ ಆಹ್ವಾನಿಸಲು ಕಾರಣವೇನೆಂದರೆ ನಾನೂ ಸೇರಿದಂತೆ ಇನ್ನಷ್ಟು ಜನ ಸಾರ್ವಜನಿಕರು ಮೈಸೂರಿನಲ್ಲಿಯೇ ಹುಟ್ಟಿ ಈ ಸಮಸ್ಯೆಗಳನ್ನು ಪ್ರತಿನಿತ್ಯ ಕಂಡವರಾಗಿರುತ್ತೇವೆ. ಆದ್ದರಿಂದ ನಮ್ಮನ್ನೇ ಸ್ಥಳ ಪರಿಶೀಲನೆಗೆ ಕರೆಯಬೇಕೆಂದು ಒತ್ತಾಯಿಸುತ್ತೇವೆ.

–ಮೈ.ಕಾ.ಪ್ರೇಮ್‌ಕುಮಾರ್ ಮೈಸೂರು ರಕ್ಷಣಾ ವೇದಿಕೆ, ಮೈಸೂರು.

ಅಪಾಯಕ್ಕೆ ಕೈಬೀಸಿ ಕರೆಯುತ್ತಿರುವ ಮಳೆ ನೀರಿನ ಚರಂಡಿ ಮುಚ್ಚಳ

ಮಾನ್ಯರೆ,

ಮೈಸೂರು ನಗರದ ಹೃದಯ ಭಾಗದಲ್ಲಿರುವ ಪ್ರತಿಷ್ಠಿತ ಕಮರ್ಷಿಯಲ್ ಸ್ಟ್ರೀಟ್ ಎಂದೇ ಖ್ಯಾತಿ ಪಡೆದ ಡಿ.ದೇವರಾಜ ಅರಸ್ ರಸ್ತೆಗೆ ಹೋಗುವ ಕೆ.ಆರ್.ಸರ್ಕಲ್ ಸಿಗ್ನಲ್ ಪಕ್ಕದಲ್ಲಿರುವ ಮಳೆ ನೀರು ಹೋಗುವ ಚರಂಡಿಗೆ ಕಬ್ಬಿಣದ ಸಲಾಕೆ ನಿರ್ಮಿತ ಮುಚ್ಚಳವಿದ್ದು ಈ ಮುಚ್ಚಳ ತುಕ್ಕು ಹಿಡಿದು ಶಿಥಿಲಗೊಂಡು ಒಳಗೆ ರಾಡು ಚಾಚಿಕೊಂಡು ಬೀಳುವ ಸ್ಥಿತಿಯಲ್ಲಿದೆ.

ಈ ಪ್ರದೇಶ ಅತ್ಯಂತ ಜನನಿಬಿಡ ಹಾಗೂ ವಾಹನ ಸಂಚಾರ ಅಧಿಕವಾಗಿರುವ ರಸ್ತೆಯಾಗಿದ್ದು, ಈ ಚರಂಡಿ ಮುಚ್ಚಳದ ಮೇಲೆ ವಾಹನ ಸವಾರರು ಹಾದು ಹೋಗುವಾಗ ಆಯತಪ್ಪಿ ಬಿದ್ದಂತಹ ನಿದರ್ಶನಗಳಿವೆ. ಮಳೆ ಬಂದರೆ ಕೆರೆಯಂತಾಗುವ ಈ ರಸ್ತೆಯಲ್ಲಿ ವಾಹನ ಸವಾರರು ಪರದಾಡುವ ಸ್ಥಿತಿ ಹೇಳತೀರದು. ಈ ವೃತ್ತದಲ್ಲಿ ಸಂಚಾರ ನಿರ್ವಹಣೆಗೆ ನಿತ್ಯ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗೆ ಇದರ ಅಪಾಯದ ಅರಿವಿದ್ದರೂ ಮುಚ್ಚಳದ ಮೇಲೆ ಅಡ್ಡಲಾಗಿ ಬ್ಯಾರಿಕೇಡ್ ಹಾಕಿಲ್ಲ. ಇನ್ನು ಮಹಾನಗರಪಾಲಿಕೆ ಅಧಿಕಾರಿಗಳು ಇದೇ ಪ್ರದೇಶದ ಶಿವರಾಂಪೇಟೆ, ದೇವರಾಜ ಮಾರುಕಟ್ಟೆ, ಸಂತೇಪೇಟೆಯಲ್ಲಿರುವ ಅಂಗಡಿ ಮಳಿಗೆಗಳ ಮೇಲೆ ನಿಷೇಧಿತ ಪ್ಲಾಸ್ಟಿಕ್ ಬಳಕೆ ವಿರುದ್ಧ ತಪಾಸಣೆ ಹಾಗೂ ಇನ್ನಿತರ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ಆದರೆ ಈ ಸ್ಥಳದಲ್ಲಿ ಕಿತ್ತು ಬಿದ್ದಿರುವ ಚರಂಡಿ ಮುಚ್ಚಳದ ಬಗ್ಗೆ ಗಮನಹರಿಸದಿರುವುದು ವಿಷಾದನೀಯ.

ಈ ಕೂಡಲೇ ಮೈಸೂರು ಮಹಾನಗರ ಪಾಲಿಕೆ ಆಯುಕ್ತರು ಸೂಕ್ತ ಕ್ರಮ ಕೈಗೊಂಡು ಅಪಾಯಕ್ಕೆ ಕಾದಿರುವ ತುಕ್ಕು ಹಿಡಿದ ಮಳೆ ನೀರು ಚರಂಡಿಯ ಮುಚ್ಚಳವನ್ನು ಬದಲಾಯಿಸಿ ಮುಂದಾಗುವ ಅನಾಹುತವನ್ನು ತಪ್ಪಿಸಬೇಕೆಂದು ಈ ಮೂಲಕ ಮನವಿ. **–ಎಸ್.ರಾಜಗೋಪಾಲ್, ಗಾಂಧಿನಗರ, ಮೈಸೂರು.**

ಸಿಎಂ ಕ್ಷೇತ್ರದಲ್ಲೇ ಸಿಗುತ್ತಿಲ್ಲ ಬಿತ್ತನೆ ಬೀಜ

ಮಾನ್ಯರೆ,

ಕೃಷಿ ಇಲಾಖೆ, ಮೈಸೂರು ವಿಭಾಗದ ಜಂಟಿ ನಿರ್ದೇಶಕರು ರೈತರಿಗೆ ಬಿತ್ತನೆ ಬೀಜಕ್ಕೆ ಅಭಾವ ಇಲ್ಲ ಎಷ್ಟು ಬೇಕಾದರೂ ಸಿಗುತ್ತದೆ ಎಂದು ಪತ್ರಿಕಾ ಪ್ರಕಟಣೆ ನೀಡಿದ್ದಾರೆ. ಆದರೆ ಮುಖ್ಯಮಂತ್ರಿಗಳ ಕ್ಷೇತ್ರ ಮೈಸೂರು ತಾಲೂಕು ವರುಣಾ ಕೃಷಿ ಕೇಂದ್ರದಲ್ಲಿ ಹುರುಳಿ ಬಿತ್ತನೆ ಬೀಜ ಇಲ್ಲ. ಕೇಳಿದರೆ ಇಂಡೆಂಟ್ ಹಾಕಿದ್ದೇವೆ. ಬರಬೇಕು ಎಂದು ಹೇಳುತ್ತಾರೆ. ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ ಸಿಗದೆ ತಡವಾದರೆ ಬೆಳೆ ಇಳುವರಿ ಕಡಿಮೆಯಾಗುವುದಲ್ಲದೆ, ಆರ್ಥಿಕವಾಗಿ ನಷ್ಟ ಉಂಟಾಗುತ್ತದೆ. ಆದುದರಿಂದ, ಇದಕ್ಕೆ ಸಂಬಂಧಪಟ್ಟವರು ಕೂಡಲೇ ವರುಣಾ ಕೃಷಿ ಕೇಂದ್ರದಲ್ಲಿ ರೈತರಿಗೆ ಬಿತ್ತನೆ ಬೀಜ ಪೂರೈಸಿ ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ಮನವಿ. **–ಎಸ್.ಸಿದ್ದೇಗೌಡ, ಕುಪ್ಪೇಗಾಲ, ಮೈಸೂರು ತಾ.**



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಅರಿವು

ಅಪ್ಪ-ಮಗಳು, 150 ರೂಪಾಯಿ...!


ನನ್ನ ಮಗಳು ಮೈಸೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೂರನೇ ವರ್ಷದ ಇಂಜಿನಿಯರಿಂಗ್ ಪೂರೈಸುತ್ತಿದ್ದಾಳೆ. ನಮ್ಮ ಮನೆಯಿಂದ ಕಾಲೇಜು ಸುಮಾರು 14 ಕಿ.ಮೀ. ದೂರದಲ್ಲಿದೆ. ನಿತ್ಯವೂ ದ್ವಿಚಕ್ರ ವಾಹನವಾದ ಸ್ಕೂಟಿಯಲ್ಲಿ ಹೋಗಿ ಬರುತ್ತಾಳೆ. ಎರಡು ದಿನಕ್ಕೊಮ್ಮೆ ಅವಳು ಪೆಟ್ರೋಲ್‌ಗಾಗಿ 150/-ರೂಪಾಯಿ ಕೇಳುವುದು ವಾಡಿಕೆ. ಆದರೆ ಕೆಲ ದಿನಗಳ ಹಿಂದೆ ಅವಳು ಒಟ್ಟಿಗೆ 3,000/- ರೂ. ಕೊಡಿ ಅಪ್ಪ, ಅಥವಾ ಆನ್‌ಲೈನ್‌ನಲ್ಲಿ ಕಳುಹಿಸಿ. ಪದೇ ಪದೇ ಹಣ ಕೇಳುವುದು ತಪ್ಪುತ್ತದೆ? ಎಂದಳು. ಆದರೆ ನಾನು ಒಟ್ಟಿಗೆ ಹಣ ಕೊಡುವುದಿಲ್ಲ ಎಂದೆ. ಅದರಿಂದ ಅವಳಿಗೆ ಬೇಸರವಾಯಿತು, ತುಸು ಕೋಪವು ಬಂತು. ಬೆಳೆದು ನಿಂತ ಮಗಳು ಅಪ್ಪನ ಹತ್ತಿರ ದಿನ ತಪ್ಪಿ ದಿನ ಹಣಕ್ಕಾಗಿ ಕೈಒಡ್ಡುವುದು ಅವಳಿಗೆ ಸ್ವಲ್ಪ ಹಿಂಸೆ ಎನಿಸಿರಬೇಕು. ಶಾಲಾ ಮಕ್ಕಳಂತೆ ಪದೇ ಪದೇ ಹಣ ಕೇಳಲು ಬೇಸರವಾಗುತ್ತದೆ ಎಂದಳು. ಆದರೆ ನಾನು ಆಕೆಗೆ ನೀಡಿದ ಕಾರಣವೇ ಬೇರೆ ಆಗಿತ್ತು.

ಇಂಜಿನಿಯರಿಂಗ್ ಓದುವ ವಿದ್ಯಾರ್ಥಿಗಳು ಸಹಜವಾಗಿ ಬ್ಯುಸಿ ಇರುತ್ತಾರೆ. ನಾನು ಮನೆಯಲ್ಲಿದ್ದಾಗ, ನನ್ನ ಕೆಲಸದ ಒತ್ತಡದಿಂದಲೋ, ಅವಳ ಓದಿನ ಒತ್ತಡದಿಂದಲೋ ಅವಳೊಂದಿಗೆ ಹೆಚ್ಚು ಸಮಯ ಕಳೆಯಲು ಆಗುತ್ತಿಲ್ಲ. ಎಷ್ಟೋ ದಿನ ಬೆಳಗ್ಗೆ ಗುಡ್ ಮಾರ್ನಿಂಗ್ ಹೇಳುವುದು ಬಿಟ್ಟರೆ ಬೇರೆ ಮಾತುಕತೆಯೇ ಇರುವುದಿಲ್ಲ. ಆದರೆ ರಾತ್ರಿ ಊಟದ ಸಮಯದಲ್ಲಿ ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡುವ ಸೌಭಾಗ್ಯವಂತೂ ಇದೆ. ಅದು ನನ್ನ ಪುಣ್ಯ ಎಂದು ಭಾವಿಸುತ್ತೇನೆ. ಮಗಳಿಗೆ ನಾನು ಹಣದ ವಿಚಾರಕ್ಕೆ ನಾನು ಹೇಳಿದ್ದು ಇಷ್ಟು, ಒಟ್ಟಿಗೆ ಹಣ ನೀಡಿದರೆ ನಿನ್ನೊಂದಿಗೆ ಮಾತನಾಡುವ ಅವಕಾಶಗಳೇ ಕಡಿಮೆ ಇರುತ್ತದೆ. ಹಣ ಕೇಳುವ ನೆಪದಲ್ಲಾದೂ ಆಗಾಗ್ಗೆ ನೀನು ನನ್ನನ್ನು ಮಾತನಾಡಿಸುವೆ. ನಿನಗೆ ಹಣ ಕೊಟ್ಟು, ನಿನ್ನನ್ನು ವಿಚಾರಿಸಿಕೊಂಡು, ನಿಧಾನವಾಗಿ ಗಾಡಿ ಓಡಿಸು ಎಂಬ ಬುದ್ಧಿ ಮಾತು ಹೇಳಿ ಕಳಿಸುವ ಕಾರಣಕ್ಕೆ ಒಮ್ಮೆಗೆ ಹಣ ನೀಡುವುದಿಲ್ಲ ಎಂದೆ. ಅದಕ್ಕೆ ಅವಳು ನಕ್ಕಳು, ನಾನು ಸಹ ನಕ್ಕೆ. ಮಕ್ಕಳು ಮನೆಯಲ್ಲಿದ್ದರೆ ಮಾತ್ರ ಸಾಲುವುದಿಲ್ಲ. ಮನೆಯ ಸದಸ್ಯರೊಟ್ಟಿಗೆ ಬೆರೆಯುತ್ತಿರಬೇಕು. ಎಷ್ಟೋ ಜನರ ಮನೆಯಲ್ಲಿ ಕಾಲೇಜಿನಲ್ಲಿ ಓದುವ ಮಕ್ಕಳು ಪೇಯಿಂಗ್ ಗೆಸ್ಟ್ ಮಾದರಿಯಲ್ಲಿ ಬದುಕುತ್ತಿದ್ದಾರೆ. ಪರಸ್ಪರ ಕುಳಿತು ಕಷ್ಟಸುಖ ಹಂಚಿಕೊಳ್ಳುವಷ್ಟು ಪುರುಸೊತ್ತು ಮಾಡಿಕೊಳ್ಳುವುದಿಲ್ಲ. ಎಷ್ಟೇ ಆದರೂ ರೆಕ್ಕೆ ಬಲಿತ ಹಕ್ಕಿಗಳಂತೆ ಮಕ್ಕಳು ಮುಂದೊಂದು ದಿನ ಗೂಡು ಬಿಟ್ಟು ಹಾರಿ ಹೋಗುವುದು ಇದ್ದೇ ಇದೆ. ನಮ್ಮ ಗೂಡಿನಲ್ಲಿ ಇರುವಷ್ಟು ದಿನವಾದರೂ ಅವರೊಂದಿಗೆ ಉತ್ತಮ ಸಂವಹನದ ಮೂಲಕ ಅವರೊಟ್ಟಿಗೆ ಬಾಂಧವ್ಯ ಹೊಂದುವುದು ಅಗತ್ಯವಿದೆ, ಅಲ್ಲವೇ?

ನನಗೆ ಈ ಮನೋಭಾಗ ಮೂಡಿದ್ದು, ನಾನು ಇತ್ತೀಚಿಗೆ ಸಾಮಾಜಿಕ ಜಾಲತಾಣದಲ್ಲಿ ಓದಿದ ಕಥೆಯಿಂದ. ಹಳ್ಳಿಯಲ್ಲಿ ಶ್ರೀಮಂತರಾಗಿದ್ದ ಜಮೀನ್ದಾರ ಅಪ್ಪ ಇರುವ ಒಬ್ಬನೇ ಮಗನಿಗೆ ಉತ್ತಮ ಶಿಕ್ಷಣ ಕೊಡಿಸುತ್ತಾರೆ. ಮಗನಿಗೆ ಒಂದೊಳ್ಳೆ ಕಂಪನಿಯಲ್ಲಿ ತಿಂಗಳಿಗೆ 2 ಲಕ್ಷ ರೂ. ಸಂಬಳದ ಕೆಲಸ ಸಿಗುತ್ತದೆ. ಅವನು ನಗರದಲ್ಲಿಯೇ ನೆಲೆಸುತ್ತಾನೆ. ಕೆಲಸ ಸಿಕ್ಕು, ಮದುವೆಯಾದ ಮೇಲೆ ಮಗ ಮಹಾಶಯ ಹೆತ್ತವರನ್ನು ನೋಡಲು ಹಳ್ಳಿಗೆ ಬರುವುದೇ ಕಡಿಮೆಯಾಗುತ್ತದೆ. ಅಪ್ಪನಿಗೆ ಇದರಿಂದ ತುಂಬಾ ನೋವಾಗುತ್ತದೆ. ಇರುವ ಒಬ್ಬ ಮಗ ಅಪರೂಪಕ್ಕಾದರೂ ಬಂದು ನೋಡುವುದಿಲ್ಲವಲ್ಲ ಎಂದು ವ್ಯಥೆ ಪಡುತ್ತಿರುತ್ತಾರೆ. ಇದರಿಂದ ಬೇಸತ್ತು, ಕೋರ್ಟಿಗೆ ಒಂದು ಮೊಕದ್ದಮೆ ದಾಖಲಿಸುತ್ತಾರೆ. ಕೋರ್ಟಿನಲ್ಲಿ ವಿಚಾರಣೆಗೆ ಕರೆದಾಗ ತನ್ನ ಮಗನಿಂದ ಪ್ರತಿ ತಿಂಗಳು ನಿರ್ವಹಣೆ ವೆಚ್ಚ ಕೊಡಿಸಬೇಕಾಗಿ ನ್ಯಾಯಮೂರ್ತಿಗಳಿಗೆ ಕೋರುತ್ತಾರೆ. ಇದನ್ನು ಒಪ್ಪಿದ ನ್ಯಾಯಮೂರ್ತಿಗಳು ಪ್ರತಿ ತಿಂಗಳು ಎಷ್ಟು ಹಣ ಬೇಕು ಎಂದು ಕೇಳಿದಾಗ. ತಿಂಗಳಿಗೆ ನೂರು ರೂಪಾಯಿ ನಿರ್ವಹಣ ವೆಚ್ಚ ಬೇಕೆನ್ನುತ್ತಾರೆ. ಇದನ್ನು ಕೇಳಿದ ನ್ಯಾಯಮೂರ್ತಿಗಳು ನಗುತ್ತಾರೆ. ನೂರು ರೂಪಾಯಿಗೆ ಏನು ಬರುತ್ತದೆ ಎನ್ನುತ್ತಾರೆ. ಆಗ ಆ ಜಮೀನ್ದಾರರು ಹೇಳುತ್ತಾರೆ, ನನಗೆ ಹತ್ತಾರು ಎಕರೆ ಜಮೀನಿದೆ, ಲಕ್ಷಾಂತರ ರೂ. ಬ್ಯಾಂಕ್ ಬ್ಯಾಲೆನ್ಸ್ ಇದೆ. ನೂರು ರೂಪಾಯಿ ನಿರ್ವಹಣಾ ವೆಚ್ಚ ನೀಡಬೇಕಾದ ಮಗನಿಗೆ ಒಂದು ಷರತ್ತಿದೆ. ಅದೇನೆಂದರೆ ಪ್ರತಿ ತಿಂಗಳು ನೂರು ರೂಪಾಯಿಗಳನ್ನು ನಮ್ಮ ಊರಿಗೆ ಬಂದು ನೀಡಬೇಕು, ಯಾವುದೇ ಕಾರಣಕ್ಕೂ ಆನ್‌ಲೈನ್‌ನಲ್ಲಿ ಕಳುಹಿಸುವಂತಿಲ್ಲ ಎನ್ನುತ್ತಾರೆ. ಅದೇಕೆ ಹಾಗೆ ಎಂದು ನ್ಯಾಯಮೂರ್ತಿಗಳು ಕೇಳಿದಾಗ, ಅವರು ಹೇಳುತ್ತಾರೆ., ನೂರು ರೂಪಾಯಿ ಕೊಡುವ ನೆಪದಲ್ಲಾದರೂ ನಮ್ಮನ್ನು ನೋಡಲು ಊರಿಗೆ ಬರಬೇಕು ಎಂಬುದು ನಮ್ಮ ಇಚ್ಛೆ. ಅವನು ಊರಿಗೆ ಬರುವುದನ್ನೇ ನಿಲ್ಲಿಸಿದ್ದಾನೆ. ಕೊನೆಪಕ್ಷ ತಿಂಗಳಿಗೆ ಒಮ್ಮೆಯಾದರೂ ಮಗನನ್ನು ನೋಡುವ ಭಾಗ್ಯ ಸಿಗುತ್ತದೆ, ಅವನೊಟ್ಟಿಗೆ ನಮ್ಮ ಕಷ್ಟಸುಖ ಹಂಚಿಕೊಳ್ಳಲು ಸಾಧ್ಯವಾಗುತ್ತದೆ? ಎಂದಾಗ ನ್ಯಾಯಮೂರ್ತಿಗಳು ಮೌನವಾಗುತ್ತಾರೆ. ಜಮೀನ್ದಾರರ ಇಚ್ಛೆಯಂತೆ ನಿರ್ಣಯ ನೀಡಿ. ತಮ್ಮ ಚೇಂಬರ್‌ಗೆ ಬಂದವರೆ ಮರುದಿನಕ್ಕೆ ರಜೆ ಹಾಕಿ, ಅಂದು ಅವರ ಅಪ್ಪನನ್ನು ನೋಡಲು ಊರಿಗೆ ಹೋಗಲು ನಿರ್ಧರಿಸುತ್ತಾರೆ. ಈ ಕಥೆ ಓದಿದ ನನಗೆ ನನ್ನ ಬದುಕಿನಲ್ಲೂ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದ್ದೇನೆ ಅಷ್ಟೆ.

ನಿನ್ನೆ ಭಾನುವಾರ ಜುಲೈ 15. ಅಪ್ಪನ ದಿನವಾಗಿ ಆಚರಿಸುವ ದಿನ. ಎಲ್ಲೆಡೆ ಅಪ್ಪನ ತ್ಯಾಗ, ಪರಿಶ್ರಮ, ಸರಳತೆ, ಸಜ್ಜನಿಕೆ, ಕುಟುಂಬದ ಮೇಲಿನ ಕಾಳಜಿ ಕುರಿತಾಗಿ ಕೊಂಡಾಡುವ ದಿನ. ಕುಟುಂಬ ವ್ಯವಸ್ಥೆಯಲ್ಲಿ ಅಪ್ಪ ಮನೆಯ ಯಜಮಾನ ಎಂದು ನಮ್ಮ ಭಾರತೀಯ ಸಂಸ್ಕೃತಿ ಹೇಳುತ್ತದೆ. ಕಾಲಘಟ್ಟ ಬದಲಾದಂತೆಲ್ಲಾ ಅಪ್ಪನ ಸ್ಥಾನವೂ ಸಹ ಪಲ್ಲಟವಾಗುತ್ತಲೇ ಇದೆ ಎನ್ನಬಹುದು. ಅಪ್ಪ ಎಷ್ಟೇ ತ್ಯಾಗಿಯಾದರೂ, ಮನೆಯಲ್ಲಿ ಅಮ್ಮನಿಗೆ ಸಿಗುವ ಗೌರವ, ಸ್ಥಾನಮಾನ ಅಪ್ಪನಿಗೆ ಸಿಗದೇ ಇರುವುದು ದುರಷ್ಟಕರ. ನನ್ನ ಚೌಪದಿಯೊಂದರ ಸಾಲುಗಳು ಇಂತಿವೆ.

ಹಾಲು ಕೊಡುವವರೆವಿಗೆ ಮಾತ್ರ ಆಕಳಿಗೆ ಆರಾಧನ
ದುಡಿದು ತರುವವರೆವಿಗೆ ಮಾತ್ರ ಅಪ್ಪ ಮನೆಯ ಯಜಮಾನ
ಪ್ರಯೋಜನ ಇದ್ದರೆ ಮಾತ್ರ ಸಮಾಜದಲ್ಲಿ ಸ್ಥಾನಮಾನ
ಎಂದ ನಮ್ಮ ಅರಿವಿನ ಅಪ್ರಮೇಯ?



> ಮಾನವ ಮೂಲಭೂತವಾಗಿ ಸಂಘಜೀವಿ. ಮನೆಯಲ್ಲಿ ಎಲ್ಲಾ ಸದಸ್ಯರೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು ಅತ್ಯಗತ್ಯ. ಮನೆಯಲ್ಲಿ ಎಲ್ಲರೂ ಇದ್ದೂ ಮನುಷ್ಯ ಒಂಟಿತನ ಅನುಭವಿಸುವುದು ಯಾವ ಜೈಲು ಶಿಕ್ಷೆಗೂ ಕಡಿಮೆ ಏನಿಲ್ಲ. ಅಪ್ಪ ಸತ್ತ ಮೇಲೆ ಗೋಳಾಡುವುದು, ಪತ್ರಿಕೆಯಲ್ಲಿ ಫೋಟೋ ಹಾಕಿಸುವುದು, ಕಲರ್ ಕಲರ್ ಪುಣ್ಯತಿಥಿ ಕಾರ್ಡ್ ಮಾಡಿಸುವುದು, ದೊಡ್ಡದಾಗಿ ಉತ್ತರಾಧಿ ಕ್ರಿಯೆಗಳನ್ನು ಮಾಡುವುದು, ಸತ್ತ ಮೇಲೆ ಪ್ರತಿ ವರ್ಷ ಪುಣ್ಯತಿಥಿ ಮಾಡಿ ಅವರ ಆತ್ಮಕ್ಕೆ ಶಾಂತಿ ಕೋರುವುದಕ್ಕಿಂತ ಅಪ್ಪ ಇದ್ದಾಗಲೇ ಶಾಂತಿ, ನೆಮ್ಮದಿಯಿಂದ ಇರುವ ವಾತಾವರಣ ಸೃಷ್ಟಿಸಿ, ಅಪ್ಪನಿಗೆ ಅಗತ್ಯ ಸಮಯ ಕೊಟ್ಟು, ಅವರ ಆರೋಗ್ಯ ನೋಡಿಕೊಂಡು ಸೇವೆ ಮಾಡುವುದು ಶ್ರೇಷ್ಠ ಕೆಲಸ. ವರ್ಷಕ್ಕೊಮ್ಮೆ ಹ್ಯಾಪಿ ಫಾದರ್ಸ್ ಡೇ ಎಂದು ಶುಭಾಶಯ ಕೋರಿ, ಒಂದೊಳ್ಳೆ ಗಿಫ್ಟ್ ಕೊಟ್ಟು ಕೈ ತೊಳೆದುಕೊಂಡು ಮರೆತುಬಿಡುವುದಕ್ಕಿಂತ ನಿತ್ಯದ ಬದುಕಿನಲ್ಲಿ ಅಪ್ಪನಿಗೆ ಆಸರೆಯಾಗಿ ಬದುಕಿದರೆ ಅದೇ ಸಾರ್ಥಕ ಬದುಕು.

ಈ ಸಾಲುಗಳು ಅಪ್ಪನ ನೈಜ ಸ್ಥಿತಿಯನ್ನು ತೋರುತ್ತದೆ. ಎಲ್ಲಾ ಅಪ್ಪಂದಿರಿಗೂ ಈ ಪರಿಸ್ಥಿತಿ ಇರುತ್ತದೆ ಅಂತಲ್ಲ. ಕೆಲವರ ಮನೆಯಲ್ಲಿ ಅಪ್ಪನಿಗೆ ದೇವರ ಸ್ಥಾನ ನೀಡಿರುತ್ತಾರೆ.

ಅಪ್ಪ ಎಂದರೆ ಆಕಾಶ, ಅಪ್ಪ ಎಂದರೆ ಅದೃಷ್ಟ, ಅಪ್ಪ ಎಂದರೆ... ಎಂಬ ಎಷ್ಟೇ ಪದಪುಂಜಗಳನ್ನು ಕಟ್ಟಿ ಹೊಗಳಿದರೂ, ತಾಯಿಯೇ ಮೊದಲ ಗುರು ಎಂಬುದು ಸರ್ವವೇದ್ಯವಾಗಿದೆ. ಅಪ್ಪ ಮಕ್ಕಳಿಗೆ ಪ್ರಪಂಚವನ್ನು ಎಷ್ಟೇ ಪರಿಚಯಿಸಿದರೂ ಅವನು ಎರಡನೇ ಗುರುವಾಗಿಯೂ ಸಹ ಗುರುತಿಸಿಕೊಂಡಿಲ್ಲ. ಎಷ್ಟೋ ಮನೆಗಳಲ್ಲಿ ಅಪ್ಪ ಎಂಬ ಜೀವಿ ಕುಟುಂಬ ಸದಸ್ಯರ ಅಗತ್ಯಗಳನ್ನು ಪೂರೈಸುವ ಒಂದು ಕಾರ್ಖಾನೆಯಂತೆ ಕಾಣಲಾಗುತ್ತಿದೆ. ಬಾಲ್ಯದಲ್ಲಿ ಅಪ್ಪನ ತೊಡೆಯ ಮೇಲೆ ಕುಳಿತು, ಹೆಗಲ ಮೇಲೆ ಕುಳಿತು ಖುಷಿ ಪಡುತ್ತಿದ್ದ ಮಕ್ಕಳು, ನನ್ನ ಬದುಕಿನ ನಿಜವಾದ ಹೀರೋ ಅಪ್ಪ ಎಂದು ಹೆಮ್ಮೆಯಿಂದ ಬೀಗುತ್ತಿದ್ದ ಮಕ್ಕಳು, ಅವರು ಬೆಳೆಯುತ್ತಿದ್ದಂತೆ, ಅಪ್ಪನಿಗೆ ವಯಸ್ಸಾಗುತ್ತಿದ್ದಂತೆ ಅಪ್ಪ ಎಂಬುವನು ಒಂದು ಎಟಿಎಂ ಮೆಷಿನ್ ಆಗಿ ಮನೆಯಲ್ಲಿ ಇರುವುದನ್ನು ಕಾಣಬಹುದು. ಎಲ್ಲರ ಯೋಗಕ್ಷೇಮ ನೋಡಿಕೊಳ್ಳುವ ಅಪ್ಪ, ತನ್ನ ಕ್ಷೇಮವನ್ನು ನೋಡಿಕೊಳ್ಳಲಾಗದೇ ಅವಧಿಗೂ ಮೊದಲು ಬಿ.ಪಿ. ಹಾಗೂ ಶುಗರ್‌ನೊಂದಿಗೆ ಬದುಕಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿಕೊಂಡಿರುತ್ತಾನೆ. ಒಂದು ಮೇಣದ ದೀಪ ತಾನು ಉರಿದು, ಎಲ್ಲರಿಗೂ ಬೆಳಕು ಕೊಡುವಂತೆ ಅಪ್ಪ ಎಂಬುವನು ತನ್ನನ್ನು ದಹಿಸಿಕೊಂಡು ಕುಟುಂಬಕ್ಕೆ ಭರವಸೆಯ ಬೆಳಕಾಗುತ್ತಾನೆ.

ಪೀಳಿಗೆಯಿಂದ ಪೀಳಿಗೆಗೆ ಅಪ್ಪನ ಸ್ಥಾನಮಾನವೂ ಬದಲಾಗುತ್ತದೆ ಎನ್ನಬಹುದು. ನಮ್ಮ ಪೀಳಿಗೆಯ ಮಂದಿಗೆ ಇಂದಿಗೂ ಅಪ್ಪ ಎಂದರೆ ಒಂದು ಅವರ್ಣನೀಯ ಭಯ, ವಿಶೇಷ ಗೌರವ, ಕಾಳಜಿ ಎಲ್ಲವನ್ನು ಕಾಣಬಹುದು. ನನಗೆ ಈಗ 50 ವರ್ಷ, ನಮ್ಮ ತಂದೆಗೆ 82 ವರ್ಷ. ಇಂದಿಗೂ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದರೆ ಅಪ್ಪನಿಗೆ ಮೊದಲು ಹೇಳುತ್ತೇನೆ. ಅವರ ಅಣತಿ ಹಾಗೂ ಅನುಮತಿಯಂತೆ ನಡೆಯುತ್ತೇನೆ. ಆದರೆ ಇಂದಿನ ಪೀಳಿಗೆಯ ಮಕ್ಕಳಿಗೆ ಹಣ ಸಂಪಾದನೆ ಮಾಡುವ ವಯಸ್ಸು ಬಂದಾಕ್ಷಣ ಮನೆಯ ಯಜಮಾನರಾಗಿ ರೂಪಾಂತರಗೊಳ್ಳುತ್ತಾರೆ. ಅಪ್ಪನಿಗೆ ಮಾಹಿತಿಗಾಗಿ ವಿಚಾರಗಳನ್ನು ಹೇಳುತ್ತಾರೇ ಹೊರತು, ಅನುಮತಿಗಾಗಿ ಅಲ್ಲ. ಅಪ್ಪಂದರಿಗೆ ಮನಸ್ಸಿಗೆ ನೋವಾದರೂ, ಮಕ್ಕಳ ಮೇಲಿನ ಮಮತೆಯಿಂದ ಸಹಿಸಿಕೊಂಡಿರುತ್ತಾರೆ.

ಎಷ್ಟೋ ಮನೆಗಳಲ್ಲಿ ಬೇಜವಾಬ್ದಾರಿ ಅಪ್ಪನು ಇರಬಹುದು. ಮಕ್ಕಳಿಗೆ ಜನ್ಮ ನೀಡಿದರೂ ಸ್ವಲ್ಪವೂ ಜವಾಬ್ದಾರಿ ತೆಗೆದುಕೊಳ್ಳದೆ ಹೆಂಡತಿ ಮೇಲೆ ಅವಲಂಭಿತನಾಗಿ ಮನೆಯನ್ನು ನರಕ ಮಾಡಿ ಬಿಡುವ ವೇಸ್ಟ್‌ಬಾಡಿ ಅಪ್ಪಂದಿರು ಇರುತ್ತಾರೆ. ಮಕ್ಕಳಿಗೆ ಜನ್ಮ ನೀಡಿ ಅಪ್ಪ ಆದರೆ ಸಾಲದು, ಅಪ್ಪನ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ನಿರ್ವಹಿಸಬೇಕಾದ ಅನಿವಾರ್ಯತೆ ಇರುತ್ತದೆ. ಅದನ್ನು ಅರಿಯಬೇಕಷ್ಟೆ.

ಮಾನವ ಮೂಲಭೂತವಾಗಿ ಸಂಘಜೀವಿ. ಮನೆಯಲ್ಲಿ ಎಲ್ಲಾ ಸದಸ್ಯರೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು ಅತ್ಯಗತ್ಯವಾಗಿದೆ. ಮನೆಯಲ್ಲಿ ಎಲ್ಲರೂ ಇದ್ದೂ ಮನುಷ್ಯ ಒಂಟಿತನ ಅನುಭವಿಸುವುದು ಯಾವ ಜೈಲುಶಿಕ್ಷೆಗೂ ಕಡಿಮೆ ಏನಿಲ್ಲ. ಅಪ್ಪ ಸತ್ತ ಮೇಲೆ ಗೋಳಾಡುವುದು, ಪತ್ರಿಕೆಯಲ್ಲಿ ಫೋಟೋ ಹಾಕಿಸುವುದು, ಕಲರ್ ಕಲರ್ ಪುಣ್ಯತಿಥಿ ಕಾರ್ಡ್ ಮಾಡಿಸುವುದು, ದೊಡ್ಡದಾಗಿ ಉತ್ತರಾಧಿ ಕ್ರಿಯೆಗಳನ್ನು ಮಾಡುವುದು, ಸತ್ತ ಮೇಲೆ ಪ್ರತಿವರ್ಷ ಪುಣ್ಯತಿಥಿ ಮಾಡಿ ಅವರ ಆತ್ಮಕ್ಕೆ ಶಾಂತಿ ಕೋರುವುದಕ್ಕಿಂತ ಅಪ್ಪ ಇದ್ದಾಗಲೇ ಶಾಂತಿ, ನೆಮ್ಮದಿಯಿಂದ ಇರುವ ವಾತಾವರಣ ಸೃಷ್ಟಿಸಿ, ಅಪ್ಪನಿಗೆ ಅಗತ್ಯ ಸಮಯಕೊಟ್ಟು, ಅವರ ಆರೋಗ್ಯ ನೋಡಿಕೊಂಡು ಸೇವೆ ಮಾಡುವುದು ಶ್ರೇಷ್ಠ ಕೆಲಸ. ವರ್ಷಕ್ಕೊಮ್ಮೆ ಹ್ಯಾಪಿ ಫಾದರ್ಸ್ ಡೇ ಎಂದು ಶುಭಾಶಯ ಕೋರಿ, ಒಂದೊಳ್ಳೆ ಗಿಫ್ಟ್ ಕೊಟ್ಟು ಕೈತೊಳೆದುಕೊಂಡು ಮರೆತುಬಿಡುವುದಕ್ಕಿಂತ ನಿತ್ಯದ ಬದುಕಿನಲ್ಲಿ ಅಪ್ಪನಿಗೆ ಆಸರೆಯಾಗಿ ಬದುಕಿದರೆ ಅದೇ ಸಾರ್ಥಕ ಬದುಕಲ್ಲವೇ?

ಹೂರಣ: ಮಕ್ಕಳು ಅಪ್ಪನಿಗೆ ಆಸ್ತಿ ಮಾಡಬೇಕಿಲ್ಲ,
ಉತ್ತಮ ಬಾಂಧವ್ಯ ಹೊಂದಿದ್ದರೆ ಅದೇ ಅಪ್ಪನಿಗೆ ಆಸ್ತಿ.

ಅಪ್ರಾಪ್ತರ ರಕ್ಷಾಸ್ತ್ರ ಪೋಕ್ಸೋ



ಕೆ.ವಿ. ವಾಸು
ವಕೀಲರು ಮತ್ತು ನೋಟರಿ ಮೈಸೂರು.
ಮೊ:9341731661

> ಇಂದು ದೇಶಾದ್ಯಂತ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಲೈಂಗಿಕ ಹಲ್ಲೆ, ಅತ್ಯಾಚಾರ ಎಲ್ಲೆ ಮೀರುತ್ತಿದೆ. ವಿದ್ಯಾರ್ಥಿನಿಲಯಗಳಲ್ಲಿ, ಆಶ್ರಮಗಳಲ್ಲಿ, ಶಾಲೆಗಳಲ್ಲಿ, ಮಠ-ಮಂದಿರಗಳಲ್ಲಿ, ಮಕ್ಕಳ ಮೇಲೆ ಅದರಲ್ಲೂ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದು, ಇಂತಹ ವಿಷಯಗಳನ್ನು ಮಕ್ಕಳು ತಮ್ಮ ತಂದೆ ಇಲ್ಲವೇ ತಾಯಂದಿರ ಬಳಿ ಹೇಳಿಕೊಳ್ಳಲು ನಾಚಿಕೆ ಅಥವಾ ಭಯಪಟ್ಟುಕೊಳ್ಳುತ್ತಾರೆ. ಹೀಗಾಗಿ ಇಂತಹ ನೂರಾರು ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ. ಕೆಲವು ಕಾವಿಧಾರಿ ಸ್ವಾಮೀಜಿಗಳು ತಮ್ಮ ವಿಕೃತ ಕಾಮವನ್ನು ಅಥವಾ ಅತೃಪ್ತ ಬಯಕೆಯನ್ನು ತೀರಿಸಿಕೊಳ್ಳಲು ಮಕ್ಕಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ತೀರಾ ಖಂಡನೀಯ.

ಸಾಮಾಜಿಕ ದೇಶದಲ್ಲಿ ಅಪ್ರಾಪ್ತ ಬಾಲಕ-ಬಾಲಕಿಯರ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ ಅಥವಾ ಕಿರುಕುಳ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಅಪ್ರಾಪ್ತ ಬಾಲಕ-ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯಗಳನ್ನು ನಡೆಸುವವರ ಶಿಕ್ಷೆಗೆ ಒಳಪಡಿಸುವ ಪೋಕ್ಸೋ ಕಾಯಿದೆ ಜಾರಿ ಹಾಗೂ ಅನುಸರಣೆ ಹಿಂದೆಂದಿಗಿಂತ ಈಗ ಅವಶ್ಯವಾಗಿದೆ.

ಪೋಕ್ಸೋ ಕಾಯಿದೆಯ ವಿಸ್ತೃತ ರೂಪ ಎಂದರೆ; The Protection of Children from Sexual Offences Act, 2012. (ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಕಾಯಿದೆ). ಈ ಕಾಯಿದೆಯು ನಮ್ಮ ದೇಶದಲ್ಲಿ 19.06.2012 ರಿಂದ ಜಾರಿಗೆ ಬಂದಿದೆ. ಇದು ಕೇಂದ್ರ ಸರ್ಕಾರ ರೂಪಿಸಿರುವ ಕಾಯಿದೆಯಾಗಿರುವುದರಿಂದ ಅದೇ ವರ್ಷದ ನವಂಬರ್ ತಿಂಗಳಲ್ಲಿ, ಈ ಕಾಯ್ದೆಗೆ ಕೇಂದ್ರ ಸರ್ಕಾರವೇ ನಿಯಮಗಳನ್ನು ರೂಪಿಸಿದೆ.

ಭಾರತದ ಸಂವಿಧಾನದ 15ನೇ ವಿಧಿಯ 3ನೇ ಕಲಂ ಮಕ್ಕಳ ಹಿತರಕ್ಷಿಸಲು ದೇಶ, ವಿಶೇಷವಾದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತದೆ. ಅದೇ ರೀತಿ ನಮ್ಮ ದೇಶದ ಸಂವಿಧಾನದ 21ನೇ ವಿಧಿಯು ಮಕ್ಕಳ ರಕ್ಷಣೆಯ ಬಗ್ಗೆ ಉಲ್ಲೇಖ ಮಾಡುತ್ತದೆ. 11ನೇ ಡಿಸೆಂಬರ್ 1992ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಆಶ್ರಯದಲ್ಲಿ ನಡೆದ ಮಕ್ಕಳ ಹಕ್ಕುಗಳ ಸಮಾವೇಶವು ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅಂಗೀಕರಿಸಿತು. ಇವುಗಳೆಂದರೆ:

- **ಯಾವುದೇ ಅಪ್ರಾಪ್ತ ವಯಸ್ಸಿನ ಮಗುವನ್ನು ಕಾನೂನು ವಿರೋಧಿಯಾದ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತೆ ಪ್ರಚೋದಿಸುವುದು ಅಥವಾ ಬಲಾತ್ಕಾರ ಪಡಿಸುವುದು ಸಲ್ಲದು**
- **ವೇಶ್ಯಾವಾಟಿಕೆ ಅಥವಾ ಇನ್ನಿತರ ಕಾನೂನು ವಿರೋಧಿಯಾದ ಲೈಂಗಿಕ ಕ್ರಿಯೆಗಳಲ್ಲಿ ಬಳಸಿಕೊಳ್ಳಕೂಡದು.**
- **ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಅಶ್ಲೀಲ ಚಿತ್ರಗಳಲ್ಲಿ ಅಥವಾ ಭಿತ್ತಿಪತ್ರಗಳಲ್ಲಿ ಶೋಷಣಾತ್ಮಕವಾಗಿ ಬಳಸಿಕೊಳ್ಳುವುದು ಸಲ್ಲದು.**

ಈ ಮಾರ್ಗದರ್ಶಿ ಸೂತ್ರಗಳಿಗೆ ಅಂದಿನ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದ ಹಿನ್ನೆಲೆಯಲ್ಲಿ ಪೋಕ್ಸೋ ಕಾಯಿದೆಯನ್ನು ಜೂನ್ 19, 2012 ರಿಂದ ದೇಶದಲ್ಲಿ ಅಧಿಕೃತವಾಗಿ ಜಾರಿಗೆ ತರಲಾಗಿದೆ.

ಈ ಕಾಯ್ದೆಯ ಪ್ರಕಾರ: ಯಾವುದೇ ವ್ಯಕ್ತಿ, ಲೈಂಗಿಕ ಉದ್ದೇಶವನ್ನು ಹೊಂದಿ ಯಾವುದೇ ಅಪ್ರಾಪ್ತ ವಯಸ್ಸಿನ ಮಗುವಿನ ಗುಪ್ತಾಂಗಗಳನ್ನು ಸ್ಪರ್ಶಿಸಿದರೆ, ಅಥವಾ ಮಗುವು ಬೇರೆಯವರ ಗುಪ್ತಾಂಗಗಳನ್ನು ಮುಟ್ಟುವಂತೆ ಪ್ರಚೋದಿಸಿದರೆ, ಅಥವಾ ಲೈಂಗಿಕ ಉದ್ದೇಶವನ್ನು ಹೊಂದಿರುವ ಇನ್ನಾವುದೇ ಕ್ರಿಯೆಯಲ್ಲಿ ತೊಡಗಿಸಿದರೆ, ಅಂತಹ ಕ್ರಿಯೆ ಲೈಂಗಿಕ ದೌರ್ಜನ್ಯ ಅಥವಾ ಲೈಂಗಿಕ ಕಿರುಕುಳ ಎಂದು ಪರಿಗಣಿತವಾಗುತ್ತದೆ. ಅರೋಪಿಗೆ, ಸದರಿ ಕಾಯ್ದೆಯ ಸೆಕ್ಷನ್ 07ರ ಪ್ರಕಾರ, 03 ವರ್ಷಗಳಿಗೆ ಕಡಿಮೆ ಇಲ್ಲದಂತೆ ಹಾಗೂ 07 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆಯನ್ನು ವಿಧಿಸಬಹುದಾಗಿದೆ ಹಾಗೂ ಜುಲ್ಮಾನೆಯನ್ನು ಸಹ ವಿಧಿಸಬಹುದು.



ಸದರಿ ಕಾಯ್ದೆಗೆ 2019ರಲ್ಲಿ ವ್ಯಾಪಕ ತಿದ್ದುಪಡಿ ಮಾಡಲಾಗಿದೆ. ಇದರ ಪ್ರಕಾರ ದೌರ್ಜನ್ಯಕ್ಕೆ ಒಳಪಟ್ಟ ಮಗು 16ರಿಂದ 18 ವರ್ಷಗಳ ಒಳಗೆ ಇದ್ದರೆ, ಅಪರಾಧಿಗಳಿಗೆ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ಹಾಗೂ ಜೀವಾವಧಿ ಶಿಕ್ಷೆ (ಜೀವಿತದ ಉಳಿದ ಭಾಗ) ವಿಧಿಸಬಹುದಾಗಿದೆ. ನ್ಯಾಯಯುತ ಜುಲ್ಮಾನೆಯನ್ನು ಸಹ ವಿಧಿಸಬಹುದಾಗಿದ್ದು ದಂಡದ ಹಣವನ್ನು ಸಂತ್ರಸ್ತ ಮಗುವಿನ ವೈದ್ಯಕೀಯ ಖರ್ಚು ಮತ್ತು ಪುನರ್ವಸತಿಗೆ ಬಳಸಿಕೊಳ್ಳಬಹುದಾಗಿದೆ. ತಿದ್ದುಪಡಿ ಕಾಯ್ದೆಯ ಪ್ರಕಾರ ಮಗುವಿನ ವಯಸ್ಸು 16 ವರ್ಷಕ್ಕಿಂತ ಕಡಿಮೆ ಇದ್ದರೆ, 20 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೆರೆಮನೆ ವಾಸ ಹಾಗೂ ಜೀವನದ ಉಳಿದ ಭಾಗವನ್ನು ಸೆರೆಮನೆಯಲ್ಲಿ ಕಳೆಯುವಂತಹ ಶಿಕ್ಷೆಯನ್ನು ವಿಧಿಸಬಹುದು. ಕೆಲವು ವಿರಳ ಪ್ರಸಂಗಗಳಲ್ಲಿ, ಅಪರಾಧಿಗೆ ಮರಣದಂಡನೆ ಕೂಡ ವಿಧಿಸಬಹುದು. ಹೀಗಾಗಿ ಪೋಕ್ಸೋ ಕಾಯಿದೆಗೆ ಮಹತ್ವ ಲಭಿಸಿದೆ. ಹಿಂದಿನ ಭಾರತೀಯ ದಂಡ ಸಂಹಿತೆಯ ಕಲಂ 354 ಹಾಗೂ ಪೋಕ್ಸೋ ಕಾಯಿದೆಯ ಸೆಕ್ಷನ್ ಎಂಟರ ಅಡಿಯಲ್ಲಿ ಬರುವ ಅಪರಾಧಗಳು ಜಾಮೀನು ರಹಿತವಾದ ಅಪರಾಧಗಳಾಗಿವೆ. ಉಳಿದ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ನೀಡಬಹುದು.

ಈ ರೀತಿಯಲ್ಲಿ ಪೋಕ್ಸೋ ಕಾಯಿದೆಯು ಅತ್ಯಾಚಾರಿಗಳ ಹಾಗೂ ವಿಕೃತ ಕಾಮಿಗಳ ಪಾಲಿಗೆ ಸಿಂಹ ಸ್ವಪ್ನವಾಗಿದ್ದು, ಈ ಕಾಯಿದೆಯ ಅಡಿಯಲ್ಲಿ ದೇಶಾದ್ಯಂತ ಸಾವಿರಾರು ಪ್ರಕರಣಗಳು ದಾಖಲಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿದೆ. ಆದ್ದರಿಂದ ಇದು ಅತ್ಯಂತ ಪ್ರಬಲ ಕಾಯಿದೆಯಾಗಿದೆ. ಇಂದು ದೇಶಾದ್ಯಂತ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಲೈಂಗಿಕ ಹಲ್ಲೆ, ಅತ್ಯಾಚಾರ ಎಲ್ಲೆ ಮೀರುತ್ತಿದೆ. ವಿದ್ಯಾರ್ಥಿನಿಲಯಗಳಲ್ಲಿ, ಆಶ್ರಮಗಳಲ್ಲಿ, ಶಾಲೆಗಳಲ್ಲಿ, ಮಠ-ಮಂದಿರಗಳಲ್ಲಿ, ಮಕ್ಕಳ ಮೇಲೆ ಅದರಲ್ಲೂ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲೆ ವ್ಯಾಪಕವಾಗಿ ಲೈಂಗಿಕ ದೌರ್ಜನ್ಯ ನಡೆಸಲಾಗುತ್ತಿದ್ದು, ಇಂತಹ ವಿಷಯಗಳನ್ನು ಮಕ್ಕಳು ತಮ್ಮ ತಂದೆ ಇಲ್ಲವೇ ತಾಯಂದಿರ ಬಳಿ ಹೇಳಿಕೊಳ್ಳಲು ನಾಚಿಕೆ ಅಥವಾ ಭಯಪಟ್ಟುಕೊಳ್ಳುತ್ತಾರೆ. ಹೀಗಾಗಿ ಇಂತಹ ನೂರಾರು ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ. ಕೆಲವು ಕಾವಿಧಾರಿ ಸ್ವಾಮೀಜಿಗಳು ತಮ್ಮ ವಿಕೃತ ಕಾಮವನ್ನು ಅಥವಾ ಅತೃಪ್ತ ಬಯಕೆಯನ್ನು ತೀರಿಸಿಕೊಳ್ಳಲು ಮಕ್ಕಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ತೀರಾ ಖಂಡನೀಯ.

ಇಂತಹ ದೌರ್ಜನ್ಯಗಳನ್ನು ನಡೆಸುವವರು ಸಾಮಾನ್ಯವಾಗಿ ಪ್ರಭಾವಶಾಲಿಗಳಾಗಿರುವುದರಿಂದ ಅಂತಹವರ ಮೇಲೆ ಪ್ರಕರಣ ದಾಖಲಾಗುವುದೇ ಇಲ್ಲ. ಒಂದು ವೇಳೆ ದಾಖಲಾದರೂ ಹಣ ಇಲ್ಲವೇ ರಾಜಕೀಯ ಪ್ರಭಾವ ಬೀರಿ ಆರೋಪಿಗಳು ಕಾನೂನಿನ ಕಬಂಧ ಬಾಹುಗಳಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಪೋಕ್ಸೋ ಕಾಯ್ದೆಯನ್ನು ಸಹ ಇತರ ಕಾಯಿದೆಗಳ ರೀತಿಯಲ್ಲಿ ನಿಷ್ಕ್ರಿಯಗೊಳಿಸುವ ಪ್ರವೃತ್ತಿ ಕೂಡ ಹೆಚ್ಚಾಗುತ್ತಿದೆ.

ಈ ಹಿಂದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾಗಿದ್ದ ಸ್ಮೃತಿ ಇರಾನಿ, ಲೋಕಸಭೆಗೆ ಮಾಹಿತಿ ನೀಡಿರುವ ಪ್ರಕಾರ, 2020ನೇ ಇಸವಿಯಲ್ಲಿ ಈ ಕಾಯ್ದೆ ಅಡಿಯಲ್ಲಿ ದೇಶಾದ್ಯಂತ 47,221 ಪ್ರಕರಣಗಳು ದಾಖಲಾಗಿತ್ತು, ಶಿಕ್ಷೆಯ ಪ್ರಮಾಣ ಶೇ.39.6 ರಷ್ಟಿತ್ತು. ಉತ್ತರ ಪ್ರದೇಶದಲ್ಲಿ 6898 ಪ್ರಕರಣಗಳು ದಾಖಲಾಗಿ, ಶಿಕ್ಷೆಯ ಪ್ರಮಾಣ ಶೇ.70.7ರಷ್ಟಿತ್ತು. ಅದೇ ರೀತಿ ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ ಇದ್ದು 5687 ಪ್ರಕರಣಗಳು ದಾಖಲಾಗಿ, ಶಿಕ್ಷೆಯ ಪ್ರಮಾಣ ಶೇ.30.9ರಷ್ಟಿತ್ತು. ಈಶಾನ್ಯ ಭಾರತದಲ್ಲಿನ ಒಂದು ಪುಟ್ಟ ರಾಜ್ಯವಾದ ಮಣಿಪುರದಲ್ಲಿ ಮಾತ್ರ ಶಿಕ್ಷೆಯ ಪ್ರಮಾಣ ಶೇ.109 ರಷ್ಟಿತ್ತು ಎಂದು ಸಚಿವೆ ಲೋಕಸಭೆಗೆ ಮಾಹಿತಿ ನೀಡಿದ್ದರು. 2020ನೇ ವರ್ಷದ ಅಂತ್ಯದಲ್ಲಿ ದೇಶಾದ್ಯಂತ 1,70,000 ಪ್ರಕರಣಗಳು ಪೋಕ್ಸೋ ಕಾಯ್ದೆ ಅಡಿ ದಾಖಲಾಗಿದ್ದವು ಎಂದು ಸಚಿವೆ ತಿಳಿಸಿದ್ದರು. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಮಧ್ಯಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶ, ಹರಿಯಾಣ ಮತ್ತು ದೆಹಲಿ ರಾಜ್ಯಗಳಲ್ಲಿ ದೇಶದ ಒಟ್ಟಾರೆ ಶೇಕಡಾ 51 ಪೋಕ್ಸೋ ಪ್ರಕರಣಗಳು ಸಂಭವಿಸಿವೆ. ಆದರೆ ಶಿಕ್ಷೆಯ ಪ್ರಮಾಣ ಶೇಕಡಾ 30ರಿಂದ 64 ಆಗಿದೆ. ಈ ರೀತಿ ಪೋಕ್ಸೋ ಕಾಯಿದೆ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವವರ ವಿರುದ್ಧ ಬೀಸುವ ಗದಾ ಪ್ರಹಾರವಾಗಿದೆ. ಈ ಕಾಯ್ದೆಯ ಅಡಿಯಲ್ಲಿ ಹಲವಾರು ಮಹತ್ವದ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ.

ಪೋಕ್ಸೋ ಕಾಯಿದೆ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ಅತ್ಯಾಚಾರ ಸೇರಿದಂತೆ ಲೈಂಗಿಕ ದೌರ್ಜನ್ಯ ಕಿರುಕುಳ ನಡೆಸುವ ಅಪರಾಧಿಗಳ ವಿರುದ್ಧ ವಿಶೇಷವಾಗಿ ವಿಕೃತ ಕಾಮಿಗಳ ವಿರುದ್ಧ ಸೂಕ್ತ ಹಾಗೂ ನ್ಯಾಯಬದ್ಧ ಕಾನೂನು ಕ್ರಮ ಜರುಗಿಸಲು ಸ್ವಲ್ಪಮಟ್ಟಿನ ಯಶಸ್ಸು ಗಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜೂ.19ರಂದು ರಂಗಕರ್ಮಿ ನ.ರತ್ನರ ಸ್ಮರಣಾ ಕಾರ್ಯಕ್ರಮ

•ರತ್ನರ 'ಕೈಯಲ್ಲಿ ಕೈಲಾಸಂ' ಕೃತಿ ಬಿಡುಗಡೆ •'ರಂಗ ರತ್ನ' ಪ್ರಶಸ್ತಿ ಪ್ರದಾನ

ಮೈಸೂರು,ಜೂ.15(ಪಿಎಂ)– ನ.ರತ್ನ ಬಳಗದ ವತಿಯಿಂದ ಜೂ.19ರಂದು 'ರತ್ನ ಎಂದೆಂದಿಗೂ ರತ್ನ' ಶೀರ್ಷಿಕೆಯಡಿ ರಂಗಕರ್ಮಿ ನ.ರತ್ನ ಅವರ ಸ್ಮರಣಾ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಶಾಲೆಯ ದೇವೇಗೌಡ ಸಭಾಂಗಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಸಾಹಿತಿ ಎಂ.ಸತ್ಯನಾರಾಯಣ ರಾವ್ ಪಾಲ್ಗೊಳ್ಳಲಿದ್ದಾರೆ.



ಇದೇ ವೇಳೆ 'ರಂಗ ರತ್ನ 2024' ಪ್ರಶಸ್ತಿಯನ್ನು ನಾಟಕ ರಂಗಕ್ಕೆ ಅನುಪಮ ಕೊಡುಗೆ ನೀಡುತ್ತಿರುವ ಎನ್.ಧನಂಜಯ ಅವರಿಗೆ ಎನ್.ಎಸ್.ಆನಂದ್ ಪ್ರದಾನ ಮಾಡಲಿದ್ದಾರೆ. ಇದೇ ಸಂದರ್ಭದಲ್ಲಿ ನ.ರತ್ನ ಅವರ 'ಕೈಯಲ್ಲಿ ಕೈಲಾಸಂ' ಪುಸ್ತಕವನ್ನು ಎಂ.ಸತ್ಯನಾರಾಯಣರಾವ್ ಬಿಡುಗಡೆ ಮಾಡಲಿದ್ದಾರೆ. ಪುಸ್ತಕದ ಕುರಿತು ರಂಗಕರ್ಮಿ ಶಶಿಧರ್ ಡೋಂಗ್ರೆ ಮಾತನಾಡಲಿದ್ದಾರೆ.

ನ.ರತ್ನ ಅವರು ಕೈಲಾಸಂರವರ ಇಂಗ್ಲಿಷ್ ಭಾಷೆಯ ಹಲವು ಕಾವ್ಯ, ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ, ಜೊತೆಗೆ ಕೈಲಾಸಂರವರ ಸಾಹಿತ್ಯದ ಬಗ್ಗೆ ತಮಗಿರುವ ಹೊಳಹುಗಳೊಂದಿಗೆ ಬರೆದಿರುವ ಪುಸ್ತಕವೇ 'ಕೈಯಲ್ಲಿ ಕೈಲಾಸಂ' ಆಗಿದ್ದು, ಇದನ್ನು ಅನಿಕೇತನ ಪ್ರಕಾಶನ ಪ್ರಕಟಿಸಿದೆ. ನ.ರತ್ನ ಅವರ ನಾಟಕದ ತೆಲುಗು ಅನುವಾದದ 'ಅಯಾನ್ ಶಾಂತಿ ಕುಟೀರಂ' ಪುಸ್ತಕದ ಬಿಡುಗಡೆಯನ್ನು ನ.ರತ್ನರವರ ಪತ್ನಿ ಪ್ರೇಮಲತಾ ರತ್ನ ನೆರವೇರಿಸಲಿದ್ದಾರೆ. ಬಳಿಕ ಈ ಕೃತಿಯ ಬಗ್ಗೆ ಅನುವಾದಕ ಮಲ್ಲಿಕಾರ್ಜುನ ಕೊಂಡೂರಿ ಮಾತನಾಡಲಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ವಾಕ್ ಶ್ರವಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬೋಧನೆ, ಸಂಶೋಧನೆ, ಪ್ರಕಟಣೆ, ಪ್ರಸಾರ, ಸಂಸ್ಥೆಗಳ ಕಟ್ಟುವಿಕೆ ಮುಂತಾದ ಕೆಲಸಗಳಲ್ಲಿ ನಿರಂತರ ಶ್ರೇಷ್ಠ ಸೇವೆ ಸಲ್ಲಿಸಿದ ಹಿರಿಮೆಯು ಸಂವಹನ ತಜ್ಞ ಡಾ.ನ.ರತ್ನ ಅವರಿಗೆ ಸಲ್ಲುತ್ತದೆ. ಸಾಹಿತ್ಯ, ಸಾಮಾಜಿಕ ಸೇವೆ ಜೊತೆಗೆ ಮೈಸೂರು ಭಾಗದ ರಂಗಭೂಮಿಗೆ ಅವರು ನೀಡಿದ ಕೊಡುಗೆ ಮಹತ್ತರವಾದುದು ಎಂದು ಪ್ರಕಟಣೆ ತಿಳಿಸಿದೆ

ಗೌತಮ್ ಅದಾನಿ ಗ್ರೂಪ್‌ನ ಇಸ್ರೇಲಿನ 'ಹೈಫಾ ಬಂದರು' ಮೇಲೆ ಇರಾನ್ ಕ್ಷಿಪಣಿ ದಾಳಿ

ಟೆಹ್ರಾನ್: ಈ ವಾರದ ಆರಂಭದಲ್ಲಿ ಇರಾನ್ ದೇಶದ ಪರಮಾಣು ಘಟಕಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿಗೆ ಪ್ರತೀಕಾರವಾಗಿ ಶನಿವಾರ ರಾತ್ರಿ ಭಾರತೀಯ ಉದ್ಯಮಿ ಗೌತಮ್ ಅದಾನಿ ಗ್ರೂಪ್‌ನ ಇಸ್ರೇಲಿನ ಹೈಫಾ ಬಂದರು ಮತ್ತು ಅದರ ಸಮೀಪದ ತೈಲ ಸಂಸ್ಕರಣಾಗಾರವನ್ನು ಗುರಿಯಾಗಿಸಿ ಇರಾನ್ ಖಂಡಾಂತರ ಕ್ಷಿಪಣಿ ದಾಳಿ ನಡೆಸಿದೆ. ಆದರೆ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ. ಅಡೆತಡೆಯಿಲ್ಲದೆ ಸರಕು ಕಾರ್ಯಾಚರಣೆಗಳು ಮುಂದುವರೆದಿವೆ ಎಂದು ಮೂಲಗಳು ತಿಳಿಸಿವೆ.

ಬಂದರಿನಲ್ಲಿರುವ ರಾಸಾಯನಿಕ ಟರ್ಮಿನಲ್‌ನಲ್ಲಿ ಶಾರ್ಪ್‌ನೆಲ್ ಶೆಲ್‌ಗಳು ಬಿದ್ದಿದ್ದರೆ, ತೈಲ ಸಂಸ್ಕರಣಾಗಾರದಲ್ಲಿ ಇತರ ಕೆಲವು ಸ್ಫೋಟಕಗಳು ಬಿದ್ದಿರುವುದಾಗಿ ಎರಡು ಮೂಲಗಳು ತಿಳಿಸಿವೆ. ಆದರೆ ಯಾವುದೇ ಗಾಯಗಳಾಗಿಲ್ಲ, ಅದಾನಿ ಬಂದರಿಗೆ ಯಾವುದೇ ಹಾನಿಯಾಗಿಲ್ಲ ಎಂದು ಅವುಗಳು ತಿಳಿಸಿವೆ.

ಕಿಶನ್ ವೆಸ್ಟ್ (ಹೈಫಾ ಬಂದರು)ನಲ್ಲಿ ಶಾರ್ಪ್ ನೆಲ್ ಚೂರುಗಳು ಕಂಡು ಬಂದಿವೆ. ಆದರೆ ಯಾವುದೇ ಗಾಯದ ಕುರಿತು ವರದಿಯಾಗಿಲ್ಲ. ಅದಾನಿ–ಚಾಲಿತ ಬಂದರಿನಲ್ಲಿ ಸರಕು ಕಾರ್ಯಾಚರಣೆಗೆ ಯಾವುದೇ ಅಡ್ಡಿಯಾಗಿಲ್ಲ. ಬಂದರಿನಲ್ಲಿ ಈಗ ಎಂಟು ಹಡಗುಗಳಿವೆ, ಸರಕು ಸಾಗಣೆ ಕಾರ್ಯಾಚರಣೆ ಎಂದಿನಂತೆ ನಡೆದಿದೆ. ಇರಾನಿನ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಯು ಅದಾನಿ ಬಂದರು ಅಥವಾ ಅದರ ಕಾರ್ಯಾಚರಣೆಗಳಿಗೆ ಯಾವುದೇ ಹಾನಿ ಉಂಟು ಮಾಡಿಲ್ಲ ಎಂದು ಮೂಲಗಳು ಹೇಳಿವೆ.

ಅದಾನಿ ಗ್ರೂಪ್ ಈ ಕುರಿತು ತತ್‌ಕ್ಷಣದ ಪ್ರತಿಕ್ರಿಯೆ ನೀಡಿಲ್ಲ. ಇಸ್ರೇಲ್ ಸರ್ಕಾರದ ಅಧಿಕಾರಿಗಳಿಂದಲೂ ಯಾವುದೇ ಹೇಳಿಕೆ ಬಂದಿಲ್ಲ. ಹೈಫಾ ಬಂದರು ನಿರ್ಣಾಯಕ ಕಡಲ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ. ಇಸ್ರೇಲ್ ಆಮದುಗಳಲ್ಲಿ ಶೇ. 30 ರಷ್ಟನ್ನು ನಿರ್ವಹಿಸುತ್ತದೆ. ಇದು ಅದಾನಿ ಪೋರ್ಟ್ಸ್ ಒಡೆತನದಲ್ಲಿದ್ದು, ಶೇ. 70 ರಷ್ಟು ಪಾಲನ್ನು ಹೊಂದಿದೆ. ಕ್ಷಿಪಣಿಗಳು ಬಂದರಿನ ಸಮೀಪವಿರುವ ಪ್ರಮುಖ ತೈಲ ಸಂಸ್ಕರಣಾಗಾರಕ್ಕೆ ಹಾನಿ ಯನ್ನುಂಟು ಮಾಡಿರಬಹುದು ಆದರೆ ಬಂದರಿನ ಮೇಲಿನ ಹಾನಿ ಬಗ್ಗೆ ಯಾವುದೇ ಅಧಿಕೃತ ಪ್ರತಿಕ್ರಿಯೆಗಳು ಬಂದಿಲ್ಲ.

ಕೇರಳ ವಿಮಾನ ನಿಲ್ದಾಣದಲ್ಲಿ ಬ್ರಿಟನ್ ಸೇನೆಯ ಯುದ್ಧ ವಿಮಾನ ತುರ್ತು ಭೂಸ್ಪರ್ಶ

ತಿರುವನಂತಪುರಂ, ಜೂ.15– ಅತ್ತ ಇಸ್ರೇಲ್ ಮತ್ತು ಇರಾನ್ ನಡುವೆ ಸೇನಾ ಸಂಘರ್ಷ ತೀವ್ರವಾಗಿರುವಂತೆಯೇ ಇತ್ತ ಕೇರಳದ ವಿಮಾನ ನಿಲ್ದಾಣದಲ್ಲಿ ಬ್ರಿಟನ್ ಸೇನೆಯ ಎಫ್–35 ಯುದ್ಧ ವಿಮಾನ ತುರ್ತು ಭೂಸ್ಪರ್ಶ ಮಾಡಿ ಆತಂಕ ಸೃಷ್ಟಿಸಿತ್ತು.

ಕೇರಳ ರಾಜಧಾನಿ ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬ್ರಿಟನ್ ನೌಕಾಪಡೆಗೆ ಸೇರಿದ ಎಫ್–35 ಯುದ್ಧ ತುರ್ತು ಭೂಸ್ಪರ್ಶ ಮಾಡಿದೆ. ಯುದ್ಧ ವಿಮಾನ ತುರ್ತು ಭೂಸ್ಪರ್ಶ ಮಾಡಿರುವುದು ಆರಂಭದಲ್ಲಿ ಆತಂಕಕ್ಕೆ ಕಾರಣವಾಗಿತ್ತಾದರೂ ಬಳಿಕ ಅದು ಇಂಧನ ಖಾಲಿಯಾಗಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ತಿಳಿದುಬಂದಿದೆ.

ಬ್ರಿಟನ್ ರಾಯಲ್ ನೇವಿಯ 5ನೇ ತಲೆಮಾರಿನ ಸ್ಟೆಲ್ತ್ ಫೈಟರ್ ಎಫ್–35 ಯುದ್ಧ ವಿಮಾನ ತುರ್ತು ಭೂಸ್ಪರ್ಶ ಮಾಡಿದೆ. ಇದು ಬ್ರಿಟನ್‌ನ ಹೆಚ್‌ಎಂಎಸ್ ಪ್ರಿನ್ಸ್ ಆಫ್ ವೇಲ್ಸ್ ಕ್ಯಾರಿಯರ್ ಸ್ಟ್ರೈಕ್ ಗ್ರೂಪ್‌ನ ಭಾಗವಾಗಿದೆ. ಈ ಯುದ್ಧ ವಿಮಾನವು ಪ್ರಸ್ತುತ ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇತ್ತೀಚೆಗೆ ಭಾರತೀಯ ನೌಕಾಪಡೆಯೊಂದಿಗೆ ಜಂಟಿ ಸಮರಾಭ್ಯಾಸ ನಡೆಸಿತ್ತು ಎಂದು ರಾಷ್ಟ್ರೀಯ ಮಾಧ್ಯಮ ವರದಿ ಮಾಡಿದೆ.

ಸುಗಮ ಮತ್ತು ಸುರಕ್ಷಿತ ಭೂಸ್ಪರ್ಶವನ್ನು ಖಚಿತಪಡಿಸಿಕೊಳ್ಳಲು ವಿಮಾನ ನಿಲ್ದಾಣದ ಅಧಿಕಾರಿಗಳು ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ವಿಮಾನದಲ್ಲಿ ಇಂಧನ ಕಡಿಮೆಯಾಗಿರುವ ಬಗ್ಗೆ ಪೈಲಟ್ ಗಮನಕ್ಕೆ ತಂದಿದ್ದರು. ಕೂಡಲೇ ವಿಮಾನದ ಸುರಕ್ಷಿತ ಲ್ಯಾಂಡಿಂಗ್‌ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀಮತಿ ಮಹದೇವಮ್ಮ ನಿಧನ

ಮೈಸೂರು, ಜೂ.15– ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ, ನಿವೃತ್ತ ಎಎಸ್‌ಐ ದಿವಂಗತ ಬಿ.ಮಾದೇಗೌಡ ಅವರ ಪತ್ನಿ ಶ್ರೀಮತಿ ಮಹದೇವಮ್ಮ(80) ಭಾನುವಾರ ಸಂಜೆ ನಿಧನರಾದರು.



ಮೃತರು ಪುತ್ರರಾದ 'ಮೈಸೂರು ಮಿತ್ರ' ಸುದ್ದಿ ಸಂಪಾದಕ ಎನ್.ಎಂ.ಮಹದೇವ, ಹಿರಿಯ ಪತ್ರಕರ್ತ ಎನ್.ಎಂ.ಬಸವರಾಜು, ಪುತ್ರಿಯರಾದ ಎನ್.ಎಂ.ಕಮಲ, ಎನ್.ಎಂ.ಶಾಂತ, ಎನ್.ಎಂ.ಗಾಯತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜೂ.16) ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಅನಿಲ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಛಾಯಾಚಿತ್ರಕಾರ ನವೀನ್ ಕುಮಾರ್ ಕಜೆ

ಮೈಸೂರು, ಜೂ.15– ಮೈಸೂರಿನ ಯರಗನಹಳ್ಳಿ ನಿವಾಸಿ, ಛಾಯಾಚಿತ್ರಕಾರ ನವೀನ್ ಕುಮಾರ್ ಕಜೆ(58) ಅವರು ಭಾನುವಾರ ಹೃದಯಾಘಾತದಿಂದ ನಿಧನರಾದರು. ಇವರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನವೀನ್‌ಕುಮಾರ್ ಅವರ ಅಂತ್ಯಕ್ರಿಯೆ ಹುಟ್ಟೂರಾದ ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲೂಕು, ಪಂಜಾದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಪತ್ರಿಕಾ ಛಾಯಾಗ್ರಾಹಕರಾಗಿ ವೃತ್ತಿ ಆರಂಭಿಸಿದ್ದ ನವೀನ್ ಕುಮಾರ್ ಕಜೆ, ನಂತರ ಮೂರು ದಶಕಗಳ ಕಾಲ ಖಾಸಗಿ ಛಾಯಾಚಿತ್ರಕಾರರಾಗಿ ಕಾರ್ಯ ನಿರ್ವಹಿಸಿದ್ದರು. ಇತ್ತೀಚೆಗೆ ಹಲವು ಕಿರುಚಿತ್ರಗಳನ್ನು ನಿರ್ದೇಶಿಸಿದ್ದರು. ನವೀನ್ ಕುಮಾರ್ ಕಜೆ ಅಕಾಲಿಕ ನಿಧನಕ್ಕೆ ಹಿರಿಯ ಪತ್ರಕರ್ತ ಕೆ.ಜೆ.ಕುಮಾರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಇನ್ನೂ 3 ದಿನ ಮಳೆ

ಬೆಂಗಳೂರು, ಜೂ.15– ಬೆಂಗಳೂರಿನಲ್ಲಿ ಶನಿವಾರ ಹಗುರದಿಂದ ಸಾಧಾರಣ ಮಳೆಯಾಗಿದ್ದು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಜೂನ್ 16 ರವರೆಗೆ ಮಧ್ಯಂತರ ಮಳೆಯಾಗುವ ಸಾಧ್ಯತೆಯಿದೆ ಭಾರತ ಹವಾಮಾನ ಇಲಾಖೆ (ಐಎಂಡಿ) ಮಾಹಿತಿ ನೀಡಿದೆ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣ ಕಂಡುಬರುವ ಸಾಧ್ಯತೆಯಿದೆ. ಜೂನ್ 17 ರಿಂದ ಮಳೆಯ ತೀವ್ರತೆ ಸ್ವಲ್ಪ ಕಡಿಮೆಯಾಗುವ ನಿರೀಕ್ಷೆಯಿದ್ದು, ಜೂನ್ 18 ರವರೆಗೆ ಹಗುರದಿಂದ ಮಧ್ಯಮ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಮತ್ತು ಅಲ್ಲಲ್ಲಿ ಮಳೆಯಾಗಲಿದೆ ಎಂದು ಮಾಹಿತಿ ನೀಡಿದೆ.

ಕರ್ನಾಟಕದ ಇತರ ಸ್ಥಳಗಳಿಗೆ ವಿಶೇಷವಾಗಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡದಂತಹ ಕರಾವಳಿ ಜಿಲ್ಲೆಗಳಿಗೆ ಭಾರೀ ಮಳೆಯಾಗಲಿದ್ದು, ರೆಡ್ ಅಲರ್ಟ್ ಘೋಷಿಸಿದೆ. ಶನಿವಾರ ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ ಅತಿ ಹೆಚ್ಚು 11 ಸೆಂ.ಮೀ ಮಳೆಯಾಗಿದೆ. ಕೊಡಗು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲೂ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಮುಂದಿನ ವಾರ ಕರಾವಳಿ ಕರ್ನಾಟಕದಾದ್ಯಂತ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ.

ಜೂನ್ 17 ರವರೆಗೆ ಭಾರೀ ಮಳೆ ಮತ್ತು ಬಲವಾದ ಗಾಳಿ ಬೀಸಲಿದೆ. ಉತ್ತರ ಒಳನಾಡಿನ ಜಿಲ್ಲೆಗಳಾದ ಬೆಳಗಾವಿ, ಧಾರವಾಡ ಮತ್ತು ಗದಗದಲ್ಲಿ ಮುಂದಿನ ಮೂರು ದಿನಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ ಎಂದು ಮಾಹಿತಿ ನೀಡಿದೆ.

ಜೂನ್ 19 ಮತ್ತು 20 ರ ವೇಳೆಗೆ ಮಳೆ ಕಡಿಮೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಶಿವಮೊಗ್ಗ, ಕೊಡಗು ಮತ್ತು ಚಿಕ್ಕಮಗಳೂರಿನಲ್ಲಿ ವಾರದ ಮಧ್ಯಭಾಗದವರೆಗೆ ಭಾರೀ ಮಳೆಯಾಗುವ ನಿರೀಕ್ಷೆಯಿದ್ದು, ವಾರಾಂತ್ಯದವರೆಗೆ ಸಾಧಾರಣ ಮಳೆ ಮುಂದುವರಿಯಬಹುದು. ಜೂನ್ 21 ರಿಂದ ರಾಜ್ಯಾದ್ಯಂತ ಮಳೆ ಕ್ರಮೇಣ ಕಡಿಮೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.

ಮೈಸೂರು ಮಿತ್ರ ಸೋಮವಾರ 16 ಜೂನ್ 2025

ಮುರುಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ಕಾಂಗ್ರೆಸ್ ತೆಕ್ಕೆಗೆ



ತಾಲೂಕಿನ ಮುರುಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ಆಯ್ಕೆಯಾದ ನೂತನ ನಿರ್ದೇಶಕರು ವಿಜಯೋತ್ಸವ ಆಚರಿಸಿದರು

ಕೆ.ಆರ್.ಪೇಟೆ, ಜೂ.15– ತಾಲೂಕಿನ ಮುರುಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು 8 ಸ್ಥಾನಗಳಲ್ಲಿ ಭರ್ಜರಿ ಜಯಗಳಿಸುವ ಮೂಲಕ ಅಧಿಕಾರದ ಗದ್ದುಗೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಕೂಟದ ಅಭ್ಯರ್ಥಿಗಳು ಕೇವಲ 3 ಸ್ಥಾನಗಳಿಗೆ ತೃಪ್ತಿ ಪಟ್ಟುಕೊಳ್ಳುವಂತಾಗಿದೆ.

ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಂ.ಪಿ.ಪ್ರತಾಪ್, ಯೋಗೇಗೌಡ, ಎಂ.ಸಿ.ಶಿವಕುಮಾರ್, ಎಂ.ದಿವಾಕರ್, ಎಸ್.ಶಿವಪ್ರಕಾಶ್, ಬಿಸಿಎಂಎ ಮೀಸಲು ಕ್ಷೇತ್ರದಿಂದ ಎಂ.ಸುನಿಲ್‌ಕುಮಾರ್, ಬಿಸಿಎಂಬಿ ಮೀಸಲು ಕ್ಷೇತ್ರದಿಂದ ಎಂ.ಆರ್.ರಾಜೇಶ್, ಮಹಿಳಾ ಮೀಸಲು ಕ್ಷೇತ್ರದಿಂದ ಲಲಿತಮ್ಮ, ಪದ್ಮ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ರಮೇಶ್ ಅವರು ನಿರ್ದೇಶಕರುಗಳಾಗಿ ಗೆಲುವು ಸಾಧಿಸಿದ್ದಾರೆ. ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಪ್ರೇಮ ಐಯ್ಯಣ್ಣನಾಯಕ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್‌ಕುಮಾರ್ ಘೋಷಣೆ ಮಾಡಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ದೇವೇಗೌಡ ಕಾರ್ಯನಿರ್ವಹಣೆ ಮಾಡಿದರು.

ನೂತನ ನಿರ್ದೇಶಕರುಗಳನ್ನು ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ಜಿ.ಪಂ.ಮಾಜಿ ಉಪಾಧ್ಯಕ್ಷ ಶೀಳನೆರೆ ಅಂಬರೀಶ್, ಕಾಂಗ್ರೆಸ್ ಮುಖಂಡರಾದ ವಿಜಯ್‌ರಾಮೇಗೌಡ, ತಾ.ಪಂ.ಮಾಜಿ ಸದಸ್ಯ ಎಂ.ಎನ್. ವಿಜಯ್ ಕುಮಾರ್, ಗ್ರಾಮ ಪಂಚಾಯಿತಿ ಶಿವಸಾಗರ್, ಶಿವಕುಮಾರ್, ಪರಮೇಶ್, ರಮೇಶ್, ಪುನೀತ್, ಬಿ.ಜಯರಾಂ, ಬಳ್ಳೇಕೆರೆ ಗ್ರಾ.ಪಂ.ಮಾಜಿ ಅಧ್ಯಕ್ಷ ವಿಜಯ್‌ಕುಮಾರ್ ಸೇರಿದಂತೆ ಹಲವು ಮುಖಂಡರು ಅಭಿನಂದಿಸಿದರು.

ಕಾಂಗ್ರೆಸ್ ಮುಖಂಡ ಪರಮೇಶ್ ಮಾತನಾಡಿ ನಮ್ಮ ಕಾಂಗ್ರೆಸ್ ಪಕ್ಷದ 8ಮಂದಿ ನಿರ್ದೇಶಕರು ಗೆಲ್ಲಲು ಕಾರಣರಾದ ಸಂಘದ ಶೇರುದಾರ ಮತದಾರರಿಗೆ, ಗ್ರಾಮದ ಮುಖಂಡರಿಗೆ ಹಾಗೂ ಗೆಲುವಿಗೆ ಸಹಕಾರ ನೀಡಿದ ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ಜಿ.ಪಂ.ಮಾಜಿ ಉಪಾಧ್ಯಕ್ಷ ಶೀಳನೆರೆ ಅಂಬರೀಶ್, ಕಾಂಗ್ರೆಸ್ ಮುಖಂಡ ವಿಜಯ್‌ರಾಮೇಗೌಡ, ತಾ.ಪಂ.ಮಾಜಿ ಸದಸ್ಯ ಎಂ.ಎನ್. ವಿಜಯ್ ಕುಮಾರ್‌ರವರುಗಳಿಗೆ ಗ್ರಾಮದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ನೀರು ಬಳಕೆದಾರರ ಸಂಘಕ್ಕೆ ಸದಸ್ಯರಾಗಿ

ಶಾಸಕ ನರೇಂದ್ರಸ್ವಾಮಿ



ಮಳವಳ್ಳಿ, ಜೂ.15– ಪೂರಿಗಾಲಿ ಹನಿ ನೀರಾವರಿ ಯೋಜನೆ ಯಶಸ್ವಿಗೊಳಿಸಲು ಭೂಮಾಲೀಕರು ನೀರು ಬಳಕೆದಾರರ ಸಂಘಕ್ಕೆ ಸದಸ್ಯರಾಗಬೇಕೆಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮನವಿ ಮಾಡಿದರು.

ತಾಲೂಕಿನ ಬಿಜಿಪುರ ಹೋಬಳಿಯ ಪಂಡಿತಹಳ್ಳಿ ಗ್ರಾಮ ಪಂಚಾಯತಿ ಆವರಣದಲ್ಲಿ ಕೃಷಿ ಇಲಾಖೆ, ಜಲಾಯನ ಇಲಾಖೆ, ಬೆಂಗಳೂರು, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ, ಜಲಾಯನ ಅಭಿವೃದ್ಧಿ ಘಟಕ, 2025–26ನೇ ಸಾಲಿನ ಅರಣ್ಯಘಟಕ ಮತ್ತು ತೋಟಗಾರಿಕೆ ಘಟಕ ಹಾಗೂ ಉತ್ಪಾದನಾ ವ್ಯವಸ್ಥೆ ಘಟಕದಡಿ ಸಸಿಗಳು ಮತ್ತು ಯಾತ್ರಿಕರಣ ಸವಲತ್ತು ವಿತರಣೆ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಸಸಿಗಳು ಮತ್ತು ಯಂತ್ರೋಪಕರಣಗಳನ್ನು ವಿತರಿಸಿ ಮಾತನಾಡಿದ ಅವರು ಬಿಜಿಪುರ ಹೋಬಳಿಗೆ ನೀರಾವರಿಯನ್ನು ಕಲ್ಪಿಸಬೇಕೆಂಬ ಆಕಾಂಕ್ಷೆಯೊಂದಿಗೆ 593 ಕೋಟಿ ರೂ ವೆಚ್ಚದಲ್ಲಿ ಪೂರಿಗಾಲಿ ಹನಿ ನೀರಾವರಿ ಯೋಜನೆಯನ್ನು ಜಾರಿಗೆ ತಂದು ಕಾಮಗಾರಿ ಅಂತಿಮಗೊಳ್ಳುತ್ತಿದ್ದರೂ ಕೂಡ ರೈತರ ಸ್ಪಂದನೆ ಸರಿಯಾಗಿ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮನ್‌ಮುಲ್ ನಿರ್ದೇಶಕ ಕೃಷ್ಣೇಗೌಡ, ವಿಶ್ವಾಸ್, ಕೃಷಿ ಇಲಾಖೆಯ ಉಪ ಕೃಷಿ ನಿರ್ದೇಶಕ ಮುನ್ನೇಗೌಡ, ಎಸಿಎಫ್ ದಿನೇಶ್ ಕುಮಾರ್, ಸಹಾಯಕ ಕೃಷಿ ನಿರ್ದೇಶಕ ದೀಪಕ್, ಕೃಷಿ ಅಧಿಕಾರಿ ರಾಜೇಶ್, ಮನ್‌ಮುಲ್ ಉಪಾಧ್ಯಕ್ಷ ಕೃಷ್ಣೇಗೌಡ, ಕೆಪಿಸಿಸಿ ಸದಸ್ಯ ಪುಟ್ಟಸ್ವಾಮಿ, ಗ್ರಾ.ಪಂ. ಅಧ್ಯಕ್ಷ ಶ್ರೀನಿವಾಸ್, ಸದಸ್ಯ ನಾಗರಾಜು, ಪಿಡಿಓ ಎನ್.ಎಂ.ಯಶಸ್ವಿನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಪಿ.ರಾಜು, ಚೆಸ್ಕಾಂ ಎಇಇ ಪ್ರೇಮ್ ಕುಮಾರ್, ವಡ್ಡರಹಳ್ಳಿ ಸೊಸೈಟಿ ಅಧ್ಯಕ್ಷ ದೀಪು, ನಿರ್ದೇಶಕ ಮಂಚನಹಳ್ಳಿ ಸಿದ್ದರಾಜು, ಮುಖಂಡ ದೇವರಾಜು, ಸುರೇಶ್, ರವೀಂದ್ರ ಕುಮಾರ್, ಪಿಡಬ್ಲ್ಯುಡಿ ಎಇಇ ಸೋಮಶೇಖರ್, ಬಬ್ರುವಾಹನ ಸೇರಿದಂತೆ ಹಲವರು ಹಾಜರಿದ್ದರು.

ನಾಗಮಂಗಲದಲ್ಲಿ ಇಂದು ವಿದ್ಯುತ್ ವ್ಯತ್ಯಯ



ನಾಗಮಂಗಲ, ಜೂ.15– ನಾಗಮಂಗಲ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ನಾಳೆ ನಾಗಮಂಗಲ ಅರ್ಬನ್, ಟಿ.ಬಿ ಅರ್ಬನ್, ಎಸಿ.ಹಳ್ಳಿ ಎನ್‌ಜೆವೈ, ಮೈಲಾರ ಪಟ್ಟಣ, ಶ್ರೀರಾಮನಹಳ್ಳಿ ಕೋಟೆಬೆಟ್ಟ, ಪಂಪ್‌ಸೆಟ್ ವ್ಯಾಪ್ತಿಗಳಾದ ಬಸರಾಳು, ಬೆಳ್ಳೂರು, ರೂರಲ್ ಐ.ಪಿ ಬಿಂಡಿಗನ ವಿಲೆ, ಮೇಲುಕೋಟೆ, ಜೋಡಿ ನೇರಲ ಕೆರೆ, ತುಪ್ಪದ ಮಡು ಹಾಗೂ ಮುಳಕಟ್ಟೆ ಐ.ಪಿ, 11ಕೆ.ವಿ ಮಾರ್ಗಗಳಿಗೆ ಒಳಪಡುವ ನಾಗಮಂಗಲ ಪುರಸಭೆ ವ್ಯಾಪ್ತಿ, ಅಂಚೆ ಚಿಟ್ಟನಹಳ್ಳಿ ಗ್ರಾಪಂ ವ್ಯಾಪ್ತಿ, ಹುಲಿಕೆರೆ ಗ್ರಾ.ಪಂ ವ್ಯಾಪ್ತಿ, ಪಾಲಗ್ರಹಾರ ಗ್ರಾಪಂ ವ್ಯಾಪ್ತಿ ಹಾಗೂ ತುಪ್ಪದ ಮಡು ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲವೆಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಡಗನಹಳ್ಳಿ ಸೊಸೈಟಿ ಜೆಡಿಎಸ್ ತೆಕ್ಕೆಗೆ



ಭಾರತೀನಗರ, ಜೂ.15–ಯಡಗನಹಳ್ಳಿ ವಿವಿಧೋದ್ದೇಶ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ವೈ.ಪಿ.ಮಧುಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಚಿಕ್ಕಚುಂಚಯ್ಯ ಅವರು ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ.

ಸಂಘದಲ್ಲಿ 11 ಸದಸ್ಯರ ಬಲಾಬಲ ಹೊಂದಿದ್ದು, 6 ಜೆಡಿಎಸ್ ಬೆಂಬಲಿತ ಹಾಗೂ 5 ಕಾಂಗ್ರೆಸ್ ಬೆಂಬಲಿತರು ಹಾಗೂ ಒಬ್ಬ ಸೂಪರ್‌ವೈಸರ್ ಹೊಂದಿದ್ದು, ಇಂದು ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಅಧ್ಯಕ್ಷ ಸ್ಥಾನಕ್ಕೆ ವೈ.ಪಿ. ಮಧುಕುಮಾರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಚಿಕ್ಕಚುಂಚಯ್ಯ ಅವರು ನಾಮಪತ್ರ ಸಲ್ಲಿಸಿದ್ದರು. ಅವರ ವಿರುದ್ಧ ಕಾಂಗ್ರೆಸ್‌ನಿಂದ ಅಧ್ಯಕ್ಷ ಸ್ಥಾನಕ್ಕೆ ವೈ.ಎಸ್. ನಾಗರಾಜು ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ವೈ.ಬಿ. ಮನುಕುಮಾರ್ ನಾಮಪತ್ರ ಸಲ್ಲಿಸಿದ್ದರು.

ಚುನಾವಣೆಯಲ್ಲಿ ವೈ.ಪಿ.ಮಧುಕುಮಾರ್ ಹಾಗೂ ಚಿಕ್ಕಚುಂಚಯ್ಯ ತಲಾ ಏಳು ಮತ ಪಡೆದು ಜಯಶಾಲಿಯಾದರೆ, ವಿರುದ್ಧ ಅಭ್ಯರ್ಥಿಗಳಾದ ನಾಗರಾಜು ಹಾಗೂ ಮನುಕುಮಾರ್ ತಲಾ 5 ಮತ ಪಡೆಯುವ ಮೂಲಕ ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಮುತ್ತುರಾಜು ಕಾರ್ಯನಿರ್ವಹಿಸಿದರು.

ನೂತನ ಅಧ್ಯಕ್ಷ–ಉಪಾಧ್ಯಕ್ಷರಾಗಿ ಆಯ್ಕೆಯಾದ ವೈ.ಪಿ.ಮಧುಕುಮಾರ್ ಹಾಗೂ ಚಿಕ್ಕಚುಂಚಯ್ಯ ಅವರನ್ನು ನಿರ್ದೇಶಕರಾದ ರಮೇಶ್, ಲಕ್ಷ್ಮೀ, ಪ್ರಕಾಶ್, ಕೃಷ್ಣ, ಪುಟ್ಟಸ್ವಾಮಿ ಸೇರಿದಂತೆ ಮುಖಂಡರು ಅಭಿನಂದಿಸಿದರು.

ನಾಯಿ ಮಾಂಸ ಮಾರಾಟ ಆರೋಪ ಸುಳ್ಳು: ಕ್ರಮಕ್ಕೆ ಆಗ್ರಹ



ಸುದ್ದಿಗೋಷ್ಠಿಯಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿದರು.

ಚಿನಕುರಳಿ, ಜೂ.15–ಇಲ್ಲಿನ ಹೋಟೆಲ್‌ನಲ್ಲಿ ಮಾಂಸದೊಂದಿಗೆ ನಾಯಿ ಮಾಂಸ ಮಿಶ್ರಣ ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂಬುದು ಸುಳ್ಳು ಸುದ್ದಿಯಾಗಿದ್ದು, ಅದು ಕೋಳಿಮಾಂಸವೆಂದು ತನಿಖೆಯಲ್ಲಿ ಧೃಡಪಟ್ಟಿದೆ ಎಂದು ಚಿನಕುರಳಿ ಗ್ರಾಪಂ ಸದಸ್ಯ, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ಚಿನಕುರಳಿ ಗ್ರಾಪಂನಲ್ಲಿ ಗ್ರಾಪಂ ಆಡಳಿತ ಮಂಡಳಿ ಹಾಗೂ ಗ್ರಾಮದ ಯಜಮಾನರು ನಡೆಸಿದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ನಾಯಿ ಮಾಂಸ ಮಾರಾಟ ಮಾಡುತ್ತಿದ್ದಾರೆ ಎಂಬುದಾಗಿ ಸುಳ್ಳು ಮಾಹಿತಿಯೊಂದಿಗೆ ವಿಡಿಯೋ ಹರಿಬಿಟ್ಟ ವ್ಯಕ್ತಿಗಳನ್ನು ಪೊಲೀಸರು ಪತ್ತೆ ಮಾಡಿ ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮಜರುಗಿಸುವಂತೆ ಆಗ್ರಹಿಸಿದರು.

ಇಲ್ಲಿನ ಹೋಟೆಲ್ ವಿರುದ್ಧ ಕಿಡಿಗೇಡಿಗಳು ಸುಳ್ಳುಸುದ್ದಿ ಹಬ್ಬಿಸಿರುವ ಪರಿಣಾಮ ಗ್ರಾಮಕ್ಕೆ ಕೆಟ್ಟ ಹೆಸರು ಬಂದಂತಾಗಿದೆ. ಶಾಸಕ ಪುಟ್ಟರಾಜು ನೇತೃತ್ವದಲ್ಲಿ ಗ್ರಾಮದ ಯಜಮಾನರ ಸಮ್ಮುಖದಲ್ಲಿ ಪೊಲಿಸರು ಮಾಂಸದ ಪರಿಶೀಲನೆ ನಡೆಸಿದಾಗ ಅದು ಅಪ್ಪಟ ಕೋಳಿ ಮಾಂಸವೆಂದು ಸಾಬೀತಾಗಿದೆ. ಈ ಪರಿಸ್ಥಿತಿಗೆ ಕಾರಣರಾದವರ ವಿರುದ್ಧ ಸೂಕ್ತ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಿ.ಶಿವಕುಮಾರ್ ಒತ್ತಾಯಿಸಿದ್ದಾರೆ.

ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ, ಉಪಾಧ್ಯಕ್ಷ ನರಸಿಂಹಶೆಟ್ಟಿ, ಸೊಸೈಟಿ ಅಧ್ಯಕ್ಷ ಸಿ.ಎಸ್. ಗೋಪಾಲಗೌಡ, ಮಾಜಿ ಅಧ್ಯಕ್ಷ ಮಂಜುನಾಥ್, ಡೈರಿ ಮಾಜಿ ಅಧ್ಯಕ್ಷ ರಮೇಶ್, ಗ್ರಾ.ಪಂ ಅಧ್ಯಕ್ಷ ಸಿ.ಎ. ಲೋಕೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ರಸ್ತೆಯಲ್ಲೆಲ್ಲಾ ಗುಂಡಿಗಳ ದರ್ಬಾರ್



ಚಿನಕುರಳಿ, ಜೂ.15–ಗ್ರಾಮದಲ್ಲಿ ಹಾದು ಹೋಗುವ ಶ್ರೀರಂಗಪಟ್ಟಣ–ಕೆ.ಆರ್.ಪೇಟೆ ಮುಖ್ಯರಸ್ತೆ ಸಂಪೂರ್ಣವಾಗಿ ಅಧ್ವಾನಗೊಂಡಿದೆ. ರಸ್ತೆ ತುಂಬೆಲ್ಲ ಬರೀ ಗುಂಡಿಗಳ ದರ್ಬಾರ್. ಪಾಂಡವಪುರದಿಂದ ಕೆ.ಆರ್. ಪೇಟೆ ಕೊನೆ ಭಾಗದವರೆಗೂ ರಸ್ತೆ ತುಂಬೆಲ್ಲ ಮಂಡಿಯುದ್ದ ಗುಂಡಿ ಬಿದ್ದು ಅಧ್ವಾನಗೊಂಡಿದೆ. ಜನರು ರಸ್ತೆಯಲ್ಲಿ ವಾಹನದಲ್ಲಿ ಓಡಾಡಲು ಸರ್ಕಸ್ ಮಾಡುವಂಥ ಸ್ಥಿತಿ ನಿರ್ಮಾಣವಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ಗುಂಡಿಮುಚ್ಚಿ ರಸ್ತೆಯನ್ನು ಅಭಿವೃದ್ಧಿಪಡಿಸದಿದ್ದರೆ ಲೋಕೋಪಯೋಗಿ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸುವುದಾಗಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ

ಪೊಲೀಸ್ ಠಾಣೆಗೆ ಒತ್ತಾಯ

ಚಿನಕುರಳಿ, ಜೂ.15– ಹೋಬಳಿ ಕೇಂದ್ರ ಸ್ಥಾನವಾಗಿರುವ ಗ್ರಾಮದಲ್ಲಿ ಪೋಲೀಸ್ ಠಾಣೆಯ ಉದ್ಘಾಟನೆ ಮಾಡಿಸುವಂತೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಆಗ್ರಹಿಸಿದ್ದಾರೆ.

ಬ್ರಿಟಿಷರ ಕಾಲದಿಂದಲೂ ಔಟ್ ಪೋಸ್ಟ್ (ಪೊಲೀಸ್ ಹೊರಠಾಣೆ) ಪೊಲೀಸ್ ಠಾಣೆ ಇತ್ತು ಇದೀಗ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು ಒತ್ತಾಯದ ಮೇರೆಗೆ ಚಿನಕುರಳಿ ಗ್ರಾಮದ ಉಪ ಪೊಲೀಸ್ ಹೊಸ ಠಾಣೆಯನ್ನು ಪೊಲೀಸ್ ಠಾಣೆಯನ್ನಾಗಿ ಉನ್ನತೀಕರಿಸುವಂತೆ ಮಾಡಿದ್ದಾರೆ.

ಗ್ರಾಮದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಸಂಬಂಧಪಟ್ಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತ್ವರಿತವಾಗಿ ಪೊಲೀಸ್ ಠಾಣೆಯನ್ನು ಉದ್ಘಾಟಿಸಲು ಅನುಕೂಲ ಮಾಡಿಕೊಡಬೇಕು ಎಂದು ಅವರು ಆಗ್ರಹಿಸಿದರು.

ಒಂದನೇ ಪುಟದಿಂದ

ರೂಪಾನಿ ಸೇರಿ 42 ಮೃತದೇಹಗಳ ಗುರುತು

ಮುಖ್ಯಮಂತ್ರಿ ವಿಜಯ್ ರೂಪಾನಿ ಅವರ ಡಿಎನ್‌ಎ ಹೊಂದಾಣಿಕೆ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಅವರು ದೃಢಪಡಿಸಿದರು. ಅನೇಕ ಶವಗಳು ಸುಟ್ಟು ಹೋಗಿವೆ ಅಥವಾ ಗುರುತು ಸಿಗದಷ್ಟು ಹಾನಿಗೊಳಗಾಗಿವೆ, ಮೃತದೇಹಗಳ ಗುರುತು ಪತ್ತೆಹಚ್ಚಲು ಅಧಿಕಾರಿಗಳು ಡಿಎನ್‌ಎ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರವು ಮೃತ ಪ್ರತಿಯೊಬ್ಬ ವ್ಯಕ್ತಿಗೂ ಮೀಸಲಾದ ಬೆಂಬಲ ತಂಡಗಳನ್ನು ನಿಯೋಜಿಸಿದೆ. ಹಿರಿಯ ಆಡಳಿತ ಅಧಿಕಾರಿ, ಪೊಲೀಸ್ ಅಧಿಕಾರಿ ಮತ್ತು ತರಬೇತಿ ಪಡೆದ ವೃತ್ತಿಪರ ಸಲಹೆಗಾರರನ್ನು ಒಳಗೊಂಡ ಈ ಮೂವರು ಸದಸ್ಯರ ತಂಡಗಳು ಕುಟುಂಬಗಳೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿವೆ.

ಕುಸಿದು 30 ಪ್ರವಾಸಿಗರು ನೀರುಪಾಲು

ನದಿಯಲ್ಲಿ ಬಿದ್ದಿದ್ದಾರೆ. ಕೆಲ ಪ್ರವಾಸಿಗರು ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಕೆಲವರನ್ನು ರಕ್ಷಿಸಲಾಗಿದೆ ಎಂದು ಮಾಹಿತಿ ಲಭ್ಯವಾಗಿದೆ.

ಘಟನೆಯ ಬಗ್ಗೆ ಮಾಹಿತಿ ತಿಳಿದ ತಕ್ಷಣ ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಈ ಅಪಘಾತದಲ್ಲಿ ಎಷ್ಟು ಜನರು ಮೃತಪಟ್ಟಿದ್ದಾರೆ ಎಂಬುವುದು ನಿಖರವಾಗಿ ತಿಳಿದುಬಂದಿಲ್ಲ. ಆದಾಗ್ಯೂ, ಪ್ರಾಥಮಿಕ ಮಾಹಿತಿಯ ಪ್ರಕಾರ ಈ ಅವಘಡದಲ್ಲಿ 20 ರಿಂದ 25 ಜನರು ನದಿಯಲ್ಲಿ ಕೊಚ್ಚಿಹೋಗಿರುವ ಸಾಧ್ಯತೆಯಿದೆ.

ಈ ಅಪಘಾತದ ವಿಷಯ ತಿಳಿದ ತಕ್ಷಣ ಮಾವಲ್ ವಿಧಾನಸಭಾ ಕ್ಷೇತ್ರದ ಶಾಸಕ ಸುನಿಲ್ ಶೆಲ್ಕೆ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ಬಳಿಕ ಮಾಧ್ಯಮದ ಜೊತೆ ಮಾತನಾಡಿದ ಅವರು, ಈ ದುರಂತದಲ್ಲಿ ಇದುವರೆಗೆ 6 ಜನರು ಮೃತಪಟ್ಟಿದ್ದಾರೆ. ಎನ್‌ಡಿಆರ್‌ಎಫ್ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಆಂಬ್ಯುಲೆನ್ಸ್‌ಗಳು ಸ್ಥಳಕ್ಕೆ ಆಗಮಿಸಿವೆ. ನದಿಯಲ್ಲಿ ಕೊಚ್ಚಿ ಹೋದವರನ್ನು ರಕ್ಷಿಸುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದರು.

ರಕ್ಷಣಾ ಸಿಬ್ಬಂದಿ ಇಂದ್ರಯಾಣಿ ನದಿಯಿಂದ ಇಬ್ಬರ ಶವ ಹೊರತೆಗೆದಿದ್ದಾರೆ. 32ಕ್ಕೂ ಹೆಚ್ಚು ಪ್ರವಾಸಿಗರಿಗೆ ಗಾಯವಾಗಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಗೊಂಡವರ ಪೈಕಿ ಆರು ಪ್ರವಾಸಿಗರ ಸ್ಥಿತಿ ಗಂಭೀರವಾಗಿದೆ. ನಾಪತ್ತೆಯಾಗಿರುವ 25–30 ಪ್ರವಾಸಿಗರಿಗಾಗಿ ಶೋಧ ಕಾರ್ಯ ನಡೆಯುತ್ತಿದೆ.

ಒಂದೇ ಕುಟುಂಬದ ನಾಲ್ವರು ಸಜೀವ ದಹನ

ಛಾವಣಿಗೆ ಬೆಂಕಿ ಹೊತ್ತಿಕೊಂಡಿತು. ವೀರೇಂದ್ರ ಮತ್ತು ಅವರ ಕುಟುಂಬಕ್ಕೆ ಪ್ರಜ್ಞೆ ಬರುವ ಹೊತ್ತಿಗೆ, ಬೆಂಕಿ ಭಯಾನಕ ರೂಪ ಪಡೆದುಕೊಂಡಿತು. ನೆರೆಹೊರೆಯವರು ಬೆಂಕಿಯನ್ನು ನಿಯಂತ್ರಿಸಲು ಪ್ರಯತ್ನಿಸಲು ಪ್ರಾರಂಭಿಸಿದರು. ನೆರೆಹೊರೆಯವರು ಬೆಂಕಿಯನ್ನು ನಿಯಂತ್ರಿಸುವ ಹೊತ್ತಿಗೆ, ನಾಲ್ವರೂ ಜೀವಂತವಾಗಿ ಸುಟ್ಟುಹೋಗಿದ್ದರು. ಅವರ ದೇಹಗಳು ಅಸ್ಥಿಪಂಜರಗಳಾಗಿ ಮಾರ್ಪಟ್ಟಿದ್ದವು. ಗ್ರಾಮಸ್ಥರ ಮಾಹಿತಿಯ ಮೇರೆಗೆ ಬಾರಾ ಪೊಲೀಸರು, ಎಸ್‌ಡಿಎಂ ಕರ್ಚನಾ, ತಹಶೀಲ್ದಾರ್ ಮತ್ತು ಜಿಲ್ಲಾಡಳಿತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದರು. ಕುಟುಂಬದ ಸಂಬಂಧಿಕರಿಗೆ ಆರ್ಥಿಕ ನೆರವು ನೀಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಪ್ರಯಾಗ ರಾಜ್ ಜಿಲ್ಲೆಯಲ್ಲಿ ಸಿಡಿಲಿನಿಂದ ಸಂಭವಿಸಿದ ಜೀವಹಾನಿಗೆ ಸಿಎಂ ಯೋಗಿ ಆದಿತ್ಯ ನಾಥ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಅಗಲಿದ ಆತ್ಮಗಳಿಗೆ ಶಾಂತಿ ಕೋರುತ್ತಾ, ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ. ಮೃತರ ಕುಟುಂಬಗಳಿಗೆ ಅನುಮತಿಸಲಾದ ಪರಿಹಾರ ಮೊತ್ತವನ್ನು ತಕ್ಷಣ ವಿತರಿಸಲು ಸಿಎಂ ನಿರ್ದೇಶನ ನೀಡಿದ್ದಾರೆ. ಅದೇ ಸಮಯದಲ್ಲಿ, ಸಮಾಜವಾದಿ ಪಕ್ಷವೂ ಈ ಘಟನೆಯ ಬಗ್ಗೆ ದುಃಖ ವ್ಯಕ್ತಪಡಿಸಿದೆ. ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರವನ್ನು ಎಸ್‌ಪಿ ಒತ್ತಾಯಿಸಿದ್ದಾರೆ.

ತಾಂತ್ರಿಕ ದೋಷ; ತಪ್ಪಿದ ಅನಾಹುತ

ವಿಮಾನದಲ್ಲಿನ ತಾಂತ್ರಿಕ ದೋಷದಿಂದಾಗಿ ಹಾರಾಟ ವಿಳಂಬವಾಗಿದೆ. ಪ್ರಯಾಣಿಕರಿಗೆ ಉಚಿತ ಟಿಕೆಟ್ ಮರುಹೊಂದಿಕೆ ಅಥವಾ ರದ್ದತಿಯನ್ನು ಪೂರ್ಣ ಮರುಪಾವತಿಯೊಂದಿಗೆ ಮಾಡಿಕೊಡಲಾಗಿದೆ. ಪ್ರಯಾಣಿಕರಿಗೆ ಉಂಟಾದ ಅನಾನುಕೂಲತೆಗೆ ನಾವು ವಿಷಾದಿಸುತ್ತೇವೆ ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ. ವಿಮಾನವು ರನ್‌ವೇಗೆ ಬಂದು ನಿರ್ಗಮನಕ್ಕೆ ಸಿದ್ಧತೆ ನಡೆಸುತ್ತಿದ್ದಾಗ ಸಿಬ್ಬಂದಿಗೆ ಕೊನೆಯ ಕ್ಷಣದಲ್ಲಿ ತೊಂದರೆ ಕಂಡುಬಂದಿದೆ. ಕೂಡಲೇ ಇಂಜಿನಿಯರ್‌ಗಳನ್ನು ಕರೆಸಿ ಪರಿಶೀಲಿಸಲಾಯಿತು ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

ರಾಜ್ಯ ಪ್ರವಾಸಕ್ಕೆ ಚಾಲನೆ

ಚಿತ್ರರಂಗದಲ್ಲಿ ಅಣ್ಣಾವ್ರು, ರಾಜಕಾರಣದಲ್ಲಿ ಕುಮಾರಣ್ಣ: ಚಿತ್ರರಂಗದಲ್ಲಿ ಡಾ ರಾಜ್‌ಕುಮಾರ್ ಅವರಿಗೆ ಅಣ್ಣ ಅಂತ ಸ್ಥಾನ ಕೊಟ್ಟಿದ್ದರು. ರಾಜಕೀಯದಲ್ಲಿ ಕುಮಾರಸ್ವಾಮಿ ಅವರಿಗೆ ಜನರು ಅಣ್ಣನ ಸ್ಥಾನ ನೀಡಿದ್ದಾರೆ. ಅಪ್ಪಂದಿರ ದಿನಾಚರಣೆ ಆಚರಿಸೋಕೆ ನನಗೆ ಒಳ್ಳೆ ಅವಕಾಶ. ತಂದೆ ಅಂದರೆ ನಮ್ಮ ಜೀವನದ ಬೆಳಕು. ನಾನು ನಮ್ಮ ತಂದೆಯಿಂದ ಹಲವು ವಿಚಾರಗಳನ್ನು ಹಾಗೆಯೇ ದೇವೇಗೌಡರ ರಾಜಕೀಯ ಕೆಲಸ ಕಾರ್ಯಗಳನ್ನೂ ಕಲಿತಿದ್ದೇನೆ ಎಂದು ತಿಳಿಸಿದರು.

ಒಬ್ಬ ರೈತನ ಮಗನಾಗಿ ದೇಶದ ಉನ್ನತ ಹುದ್ದೆ ಅಲಂಕರಿಸಿದ ದೇವೇಗೌಡರನ್ನು ಈಶ್ವರನ ಪುತ್ರ ಎಂದೇ ಹೇಳಬಹುದು. ರಾಜ್ಯದ ಬಗ್ಗೆ ಅವರಿಗೆ ಇದ್ದ ಬದ್ಧತೆ ನೋಡಿದರೆ ಹಲವು ಜನರಿಗೆ ಮಾರ್ಗದರ್ಶನ ಆಗುವಂತದ್ದು ಎಂದರು. ಸಮಾವೇಶಕ್ಕೂ ಮೊದಲು ಆದಿಚುಂಚನಗಿರಿ ಬುದ್ದಿಗಳ ಜೊತೆ ಕೂತಿದ್ದೆ. ಅವರು ಅನೇಕ ಪ್ರಸ್ತಾವಿಕ ನುಡಿ ಹೇಳುತ್ತಿದ್ದರು. ಹೀಗಾಗಿ ಮಧ್ಯೆ ಎದ್ದು ಬರಲು ಆಗಲಿಲ್ಲ. ಎಲ್ಲರಿಗೂ ಕ್ಷಮೆ ಕೇಳುತ್ತೇನೆ ಮುಂದೆ ಈ ರೀತಿ ಆಗಲಿಲ್ಲ. ಪಕ್ಷ ಸಂಘಟನೆಗೆ ಒತ್ತು ನೀಡಲಾಗಿದೆ.ಪಕ್ಷಕ್ಕೆ ಹೊಸ ಯುಗ ಆರಂಭವಾಗಬೇಕು ಎಂದರು.

ನಾಳೆಯಿಂದ ಬಹುತೇಕ ಜಿಲ್ಲೆ ತಾಲೂಕುಗಳಿಗೆ ಭೇಟಿ ನೀಡುತ್ತೇನೆ. ಇವತ್ತು ಬಹಳ ಉತ್ಸಾಹದಿಂದ ಪಕ್ಷ ಕಟ್ಟೋಕ್ಕೆ ಎಲ್ಲರೂ ಬಂದಿದ್ದಾರೆ. 58 ದಿನಗಳ ಕಾಲ ನಿಮ್ಮ ಜೊತೆ ನಿರಂತರವಾಗಿ ಹೆಜ್ಜೆ ಹಾಕುತ್ತೇನೆ. ನಾನು ನಿಮ್ಮ ಜೊತೆ ಇರುತ್ತೇನೆ. ಒಂದು ಕಡೆ ಪಕ್ಷ ಸಂಘಟನೆ ಆದರೆ ಮತ್ತೊಂದು ಕಡೆ ಸರ್ಕಾರದ ವೈಫಲ್ಯ ತೆರದಿಡಲು ಬರುತ್ತಿದ್ದೇನೆ ಎಂದರು.

ಭ್ರಷ್ಟಾ ಸರ್ಕಾರ ರಾಜ್ಯದಿಂದ ತೊಲಗಬೇಕು: ರೈತ ವರ್ಗಕ್ಕೆ ಕುಮಾರಣ್ಣ 25 ಸಾವಿರ ಕೋಟಿ ಯೋಜನೆಯನ್ನು ನೀಡಿದ್ದಾರೆ. ಪಂಚ ರತ್ನ ಯೋಜನೆ ಕನಸು ನನಸು ಆಗಬೇಕು. ಈ ಭ್ರಷ್ಟ ಸರ್ಕಾರ ರಾಜ್ಯದಿಂದ ತೊಲಗಬೇಕು ಎಂದು ಸರ್ಕಾರ ವಿರುದ್ಧ ಕಿಡಿಕಾರಿದರು. ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕದ ಕಡೆಯೂ ಪ್ರವಾಸ ಮಾಡುತ್ತೇವೆ. ಕಾರ್ಯಕರ್ತರು ಒಂದು ಛಲ ಇಟ್ಟುಕೊಳ್ಳಬೇಕು. ನಮ್ಮದು ಸಣ್ಣ ಪ್ರಮಾಣದ ಪಕ್ಷ ಅಲ್ಲ. ಹಳ್ಳಿ ಹಳ್ಳಿಗಳಿಗೆ ಹೋಗಿ ಒಂದು ರಿಜಿಸ್ಟರ್ ಮಾಡಿ ಯಾವುದೇ ಹಣ ಕಾಸು ಖರ್ಚಾಗಲ್ಲ ಎಲ್ಲರ ಬಳಿ ಸ್ಮಾರ್ಟ್ ಫೋನ್ ಇದೆ. ಡಿಜಿಟಲ್‌ನಲ್ಲಿ ರಿಜಿಸ್ಟರ್ ಮಾಡಿಸಿ ಪಕ್ಷದ ಸಂಘಟನೆಯಲ್ಲಿ ಕೈ ಜೋಡಿಸಿ ಎಂದು ಮನವಿ ಮಾಡಿದರು. ಯಾರೂ ಕೂಡ ಮೈ ಮರೆಯೋದು ಬೇಡ. ಇವತ್ತಿಂದ ಟೈಂ ಶುರುವಾಗಿದೆ. ಕನಿಷ್ಠ 50 ಲಕ್ಷ ಮಿಸ್ ಕಾಲ್ ಸದಸ್ಯ ಕೊಡುತ್ತೇವೆ ಎಂದು ದೇವೇಗೌಡರು ಹಾಗೂ ಕುಮಾರಣ್ಣಗೆ ಭರವಸೆ ಕೊಡ್ತಿದ್ದೇವೆ ಎಂದು ತಿಳಿಸಿದರು.

ಮಕ್ಕಳಿಗೆ ವಿಶೇಷ ಶಾಲೆ ಸ್ಥಾಪನೆ

ಗುಣಮಟ್ಟದ ಶಿಕ್ಷಣವನ್ನು ಪಡೆಯುತ್ತಾರೆ. ಮಕ್ಕಳ ಒಟ್ಟಾರೆ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ಎನ್‌ಜಿಒ ಶಿಕ್ಷಕರಿಗೆ ತರಬೇತಿ ನೀಡುತ್ತದೆ. ಇಲಾಖೆಯು ಶಾಲೆಗೆ ಹಣವನ್ನು ಒದಗಿಸುತ್ತದೆ. ನಾನು ಮುಖ್ಯಮಂತ್ರಿಯಿಂದ ಹೆಚ್ಚುವರಿ ಅನುದಾನವನ್ನು ಸಹ ಪಡೆಯುತ್ತೇನೆ. ಶಾಲಾ ಕಟ್ಟಡದ ನಿರ್ಮಾಣವು ಜೂನ್ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ ಎಂದು ಹೇಳಿದರು.


ಶಾಲಾ ಆವರಣದಲ್ಲಿ ಪೋಷಕರು ಉಳಿಯಲು ಸೌಲಭ್ಯಗಳನ್ನು ಸಹ ನೀಡಲಾಗುವುದು. ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಅವರ ಪೋಷಕರ ಆರೈಕೆಯ ಅಗತ್ಯವಿದೆ. ಆದ್ದರಿಂದ, ಅವರಿಗೆ ವಸತಿ ಸೌಕರ್ಯಗಳನ್ನು ಸಹ ಒದಗಿಸಲಾಗುವುದು ಎಂದು ಅವರು ಹೇಳಿದರು. ಚಿಕಿತ್ಸೆ ಅಗತ್ಯವಿದ್ದಾಗ ಮಕ್ಕಳನ್ನು ವಾಹನದ ಮೂಲಕ ಆಸ್ಪತ್ರೆಗೆ ಸಾಗಿಸಲಾಗುವುದು. ಚಿಕಿತ್ಸೆ ಪೂರ್ಣಗೊಂಡ ನಂತರ ಮತ್ತು ರೋಗ ಗುಣಮುಖವಾದ ನಂತರ, ವಿದ್ಯಾರ್ಥಿಗಳು ಅದೇ ಶಾಲೆಯಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸಬಹುದು ಅಥವಾ ಅವರ ಹಿಂದಿನ ಶಾಲೆಗಳಿಗೆ ಹೋಗಬಹುದು ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಡಯಾಲಿಸಿಸ್‌ಗೆ ಆಧಾರ್ ಕಡ್ಡಾಯ

ಇಲಾಖೆಯು ಯೋಜನೆ ಅನುಷ್ಠಾನಗೊಳಿಸುತ್ತಿರುವ ಏಜೆನ್ಸಿಯ ಮೂಲಕ ಆಧಾರ್ ನೋಂದಣಿ ಕೇಂದ್ರದ ಸೌಲಭ್ಯವನ್ನು ಅನುಕೂಲಕರ ಸ್ಥಳಗಳಲ್ಲಿ ನೀಡಬೇಕು. ಆಧಾರ್ ಸಿಗುವವರೆಗೆ 5 ವರ್ಷದೊಳಗಿನ ಮಕ್ಕಳು ಆಧಾರ್ ದಾಖಲಾತಿ ಗುರುತಿನ ಚೀಟಿ ಅಥವಾ ಬಯೋಮೆಟ್ರಿಕ್ ನವೀಕರಣ ಗುರುತಿನ ಚೀಟಿ ನೀಡುವ ಷರತ್ತಿನೊಂದಿಗೆ ಜನನ ಪ್ರಮಾಣಪತ್ರ ಅಥವಾ ಸಕ್ಷಮ ಪ್ರಾಧಿಕಾರದಿಂದ ವಿತರಿಸಿರುವ ಜನನ ದಾಖಲೆ ಅಥವಾ ಶಾಲೆಯ ಮುಖ್ಯಸ್ಥರಿಂದ ಸಹಿ ಮಾಡಿರುವ ಶಾಲಾ ಗುರುತಿನ ಚೀಟಿ ನೀಡಬಹುದು. 18 ವರ್ಷ ಮೇಲಟ್ಟವರಾದರೆ ಆಧಾರ್ ಪಡೆಯಲು ನೋಂದಣಿ ಮಾಡಿರುವ ಎನ್‌ರೋಲ್‌ಮೆಂಟ್ ಸಂಖ್ಯೆ ಚೀಟಿ ಹಾಗೂ ಈ ಭಾವಚಿತ್ರಹೊಂದಿರುವ ಬ್ಯಾಂಕ್ ಅಥವಾ ಅಂಚೆಕಚೇರಿ ಪಾಸ್‌ಬುಕ್, ಪ್ಯಾನ್, ಪಾಸ್‌ಪೋರ್ಟ್, ಪಡಿತರ ಚೀಟಿಯಂತಹ ಹತ್ತು ದಾಖಲೆಗಳಲ್ಲಿ ಒಂದನ್ನು ಸಲ್ಲಿಸಬಹುದು. ಆಧಾರ್ ಬಯೋಮೆಟ್ರಿಕ್ ವಿಫಲವಾದರೆ ಕಣ್ಣು (ಐರಿಸ್) ಹಾಗೂ ಮುಖದ ದೃಢೀಕರಣ ಅಳವಡಿಸಿಕೊಳ್ಳಬೇಕು. ಅವೂ ವಿಫಲವಾದರೆ ಆಧಾರ್ ಓಟಿಪಿ ಪಡೆಯಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಬಳಸಿರುವ ಅನುದಾನದ ಬಗ್ಗೆ ಶ್ವೇತಪತ್ರ ಹೊರಡಿಸಿ

ರಾಜ್ಯ ಸರಕಾರಕ್ಕೆ ಹೆಚ್.ಡಿ.ಕುಮಾರಸ್ವಾಮಿ ಆಗ್ರಹ



ಬೆಂಗಳೂರು, ಜೂ.15– ಕಲ್ಯಾಣ ಕರ್ನಾಟಕಕ್ಕೆ ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ಎಷ್ಟು ಅನುದಾನ ನೀಡಿದ್ದೀರಿ? ಎಷ್ಟು ವೆಚ್ಚ ಮಾಡಿದ್ದೀರಿ? ಏನೇನು ಅಭಿವೃದ್ಧಿ ಕೆಲಸಗಳು ಆಗಿವೆ ಎಂಬ ಬಗ್ಗೆ ಶ್ವೇತಪತ್ರ ಹೊರಡಿಸಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಭಾನುವಾರ 'ಜನರೊಂದಿಗೆ ಜನತಾದಳ' ಶೀರ್ಷಿಕೆಯಡಿ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಪಕ್ಷ ಸಂಘಟನೆಗಾಗಿ ಹಮ್ಮಿಕೊಳ್ಳಲಾಗಿರುವ ರಾಜ್ಯ ಪ್ರವಾಸ ಹಾಗೂ ಮಿಸ್ಡ್ ಕಾಲ್ ಸದಸ್ಯತ್ವದ ಅಭಿಯಾನಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ಆರೋಗ್ಯ ಆವಿಷ್ಕಾರ ಎಂದು ನಮ್ಮ ಸಿಎಂ, ಡಿಸಿಎಂ ಯಾದಗಿರಿಗೆ ಹೋಗಿದ್ದರು. ಕಲ್ಯಾಣ ಕರ್ನಾಟಕದ ಉದ್ಧಾರ ಮಾಡುತ್ತೇವೆ ಎಂದು ಉದ್ದುದ್ದ ಭಾಷಣ ಮಾಡಿದ್ದಾರೆ. ಹಾಗಾದರೆ ನಿಮ್ಮ ಪಕ್ಷದ ಆಡಳಿತಾವಧಿಯಲ್ಲಿ, ಅದೂ ಎರಡು ವರ್ಷಗಳ ಅವಧಿಯಲ್ಲಿ ಏನೇನು ಕೆಲಸ ಮಾಡಿದ್ದೀರಿ ಎಂಬುದನ್ನು ಜನರ ಮುಂದೆ ಇಡಿ ಎಂದು ಅವರು ಆಗ್ರಹಿಸಿದರು.

ದೊಡ್ಡ ದೊಡ್ಡ ಆಸ್ಪತ್ರೆ ಕಟ್ಟಡಗಳನ್ನು ಕಟ್ಟುವುದು ಇರಲಿ. ನಿಮ್ಮ ಯೋಗ್ಯತೆಗೆ ಇರುವ ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಕ ಮಾಡಿ. ವೈದ್ಯರೇ ಇಲ್ಲದೆ ಕೇವಲ ಕಟ್ಟಡ ಕಟ್ಟಿ ಏನು ಪ್ರಯೋಜನ?. ಕಟ್ಟಡ ಕಟ್ಟಿ ಕಮೀಷನ್ ಹೊಡೆಯುತ್ತೀರಿ, ಅಷ್ಟೇ ಅಲ್ಲವೇ?. ಗುರುಮಿಟ್ಕಲ್ ಜನರು ಮಲ್ಲಿಕಾರ್ಜುನ ಖರ್ಗೆಯವರನ್ನು ಎಷ್ಟು ವರ್ಷ ಶಾಸಕರನ್ನಾಗಿ ಮಾಡಿದ್ದರು, ಎಷ್ಟು ವರ್ಷ ಅವರು ಮಂತ್ರಿಯಾಗಿದ್ದರು, ಎಷ್ಟು ವರ್ಷ ಪ್ರತಿಪಕ್ಷ ನಾಯಕರಾಗಿದ್ದರು, ಕಲಬುರಗಿ ಯಿಂದ ಎಷ್ಟು ಅವಧಿಗೆ ಲೋಕಸಭೆ ಸದಸ್ಯರಾದರು?. ಈಗ ರಾಜ್ಯಸಭೆ ಪ್ರತಿಪಕ್ಷ ನಾಯಕರಾಗಿದ್ದಾರೆ. ಆದರೂ ಕಲ್ಯಾಣ ಕರ್ನಾಟಕ ಇನ್ನೂ ಅಭಿವೃದ್ಧಿ ಆಗಿಲ್ಲ ಯಾಕೆ? ಇದುವರೆಗೆ ಈ ಭಾಗಕ್ಕೆ ಹಂಚಿಕೆಯಾದ ಅನುದಾನ ಎಲ್ಲಿಗೆ ಹೋಯಿತು, ಆ ದುಡ್ಡು ಯಾರ ಪಾಲಾಯಿತು ಎಂದು ಅವರು ತೀಕ್ಷ್ಣವಾಗಿ ಪ್ರಶ್ನಿಸಿದರು.

ಮಳೆ ಬಂದಾಗ ಬೆಂಗಳೂರು ಎಂಬ ಸಿಂಗಾಪುರದ ಕಥೆ ಏನಾಯಿತೆಂದು ಜನ ನೋಡಿದ್ದಾರೆ. ನಿನ್ನೆ ಯಾದಗಿರಿಯಲ್ಲಿ ಡಿಸಿಎಂ ಅವರ ವೀರಾವೇಷದ ಭಾಷಣ ನೋಡಿದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಾಡುತ್ತಾರಂತೆ. ಅಪ್ಪಾ... ನೀನು ಬೆಂಗಳೂರು ಉಸ್ತುವಾರಿ ಮಂತ್ರಿ. ನಿನ್ನ ಸಿಂಗಾಪುರ ಮಳೆ ಬಂದರೆ ಕೊಚ್ಚಿ ಹೋಗುತ್ತಿದೆ. ಮೊದಲು ಇಲ್ಲಿ ಅಭಿವೃದ್ಧಿ ಮಾಡು. ಆಮೇಲೆ ಮಿಕ್ಕಿದ್ದು ಎಂದು ಟಾಂಗ್ ಕೊಟ್ಟರು.

ಜಾತಿಗಣತಿ ವರದಿ ಸ್ವೀಕಾರ ಮಾಡುವ ವಿಚಾರದಲ್ಲಿ ಕುಮಾರಸ್ವಾಮಿ ಅಂದಿನ ಸಚಿವ ಪುಟ್ಟರಂಗಶೆಟ್ಟಿಯನ್ನು ಹೆದರಿಸಿದ್ದರು ಎಂದು ಮುಖ್ಯಮಂತ್ರಿ ಸುಳ್ಳು ಹೇಳಿದ್ದಾರೆ. ನೀವು ಅಧಿಕಾರಕ್ಕೆ ಬಂದು ಎರಡು ವರ್ಷವಾದರೂ ಜಾತಿ ಗಣತಿ ವರದಿಯನ್ನು ಅಂಗೀಕಾರ ಮಾಡಬೇಡಿ ಎಂದು ನಿಮ್ಮನ್ನು ಯಾರು ಹಿಡಿದು ಕೂತಿದ್ದಾರೆ?. ಈ ಸಂದರ್ಭದಲ್ಲಿ ನಾನು ವಿಧಾನಸೌಧದಲ್ಲಿ ಇರಬೇಕಿತ್ತು. ನಿಮಗೆ ತಕ್ಕ ಪಾಠ ಕಲಿಸುತ್ತಿದ್ದೆ. ಕಾವೇರಿ ಆರತಿಗೆ ನೂರು ಕೋಟಿ ಖರ್ಚು ಮಾಡುತ್ತಾರಂತೆ. ನಿಮ್ಮ ಮುಖಕ್ಕೆ ಮಂಗಳಾರತಿ ಮಾಡಿಕೊಳ್ಳಲು ನೂರು ಇಷ್ಟೊಂದು ಹಣವೇ ಎಂದು ವಾಗ್ದಾಳಿ ನಡೆಸಿದರು.

ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಉಪ ನಾಯಕಿ ಶಾರದಾ, ಮಾಜಿ ಸಚಿವರಾದ ಲೀಲಾದೇವಿ ಆರ್. ಪ್ರಸಾದ್, ಹೆಚ್.ಕೆ.ಕುಮಾರ ಸ್ವಾಮಿ, ವೆಂಕಟರಾವ್ ನಾಡಗೌಡ, ಡಾ.ಎ.ಬಿ. ಮಾಲಕರೆಡ್ಡಿ, ಆಲ್ಕೋಡ್ ಹನು ಮಂತಪ್ಪ, ಶಾಸಕರಾದ ಎಂ.ಟಿ.ಕೃಷ್ಣಪ್ಪ, ಕರೆಮ್ಮ ನಾಯಕ್, ಟಿ.ಎ.ಜವರಾಯಿ ಗೌಡ, ಮಾಜಿ ಶಾಸಕರಾದ ಕೆ.ಎ.ತಿಪ್ಪೇಸ್ವಾಮಿ, ಹೆಚ್.ಎಂ. ರಮೇಶ್ ಗೌಡ, ತಿಮ್ಮರಾಯಪ್ಪ, ನಿಂಗಪ್ಪ, ಕೆಟಿ.ಶ್ರೀಕಂಠೇಗೌಡ, ಮಾಗಡಿ ಮಂಜುನಾಥ್, ದೊಡ್ಡನಗೌಡ ಪಾಟೀಲ್. ಪ್ರಸನ್ನಕುಮಾರ್, ರಾಜ್ಯ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ರಶ್ಮಿ ರಾಮೇಗೌಡ ಮುಂತಾದವರು ಉಪಸ್ಥಿತರಿದ್ದರು.

ನಾನು ಗಟ್ಟಿಮುಟ್ಟಾಗಿದ್ದೇನೆ...

ನಾನು ಆರೋಗ್ಯವಾಗಿ ಗಟ್ಟಿಮುಟ್ಟಾಗಿದ್ದೇನೆ, ಏನೂ ಚಿಂತೆ ಬೇಡ. ಕಾಂಗ್ರೆಸ್ಸಿನವರು ಕುಮಾರಸ್ವಾಮಿ ಆರೋಗ್ಯ ಕೆಟ್ಟಿದೆ, ನಮ್ಮ ಪಕ್ಷಕ್ಕೆ ಬನ್ನಿ ಎಂದು ಶಾಸಕರನ್ನು ಕರೆಯುತ್ತಿದ್ದಾರೆ. ನೀವು ಏನೂ ಚಿಂತೆ ಮಾಡಬೇಡಿ. ನಿಮ್ಮ ಜೊತೆ ಇನ್ನೂ ಹದಿನೈದು ಇಪ್ಪತ್ತು ವರ್ಷ ಕಾಲ ಇರುತ್ತೇನೆ. ಜನತಾದಳವೂ ಇರುತ್ತದೆ. ನಮ್ಮ ಪಕ್ಷಕ್ಕೆ ಶಕ್ತಿ ಇದೆ. ಜೆಡಿಎಸ್ ಬಿಟ್ಟು ಬನ್ನಿ ಎನ್ನುವವರಿಗೆ ಈ ಸಭೆ ಮೂಲಕ ಉತ್ತರ ಕೊಟ್ಟಿದ್ದೀರಿ. ಧೈರ್ಯದಿಂದ ಹೋರಾಡಿ. ಈ ಬಾರಿ ಜೆಡಿಎಸ್–ಬಿಜೆಪಿ ಮೈತ್ರಿ ಸರಕಾರ ಬರಲಿದೆ. ಕೈಲಾಗದವರು ಅಪಪ್ರಚಾರ ಮಾಡುತ್ತಾರೆ. ಅವರಿಗೆಲ್ಲ ದಿಟ್ಟ ಉತ್ತರ ಕೊಡೋಣ. ನಿಮ್ಮ ಪಾಡಿಗೆ ನೀವು ಪಕ್ಷದ ಕೆಲಸ ಮಾಡಿ ಎಂದು ಕುಮಾರಸ್ವಾಮಿ ಕಾರ್ಯಕರ್ತರಿಗೆ ಧೈರ್ಯ ತುಂಬಿದರು.

ಪೈಲಟ್ ಸೇರಿ 7 ಮಂದಿ ದುರ್ಮರಣ

ಹೆಲಿಕಾಪ್ಟರ್ ಅಪಘಾತದ ಹಿನ್ನಲೆಯಲ್ಲಿ ಪರಿಸ್ಥಿತಿಯನ್ನು ಚರ್ಚಿಸಲು ಹಿರಿಯ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಹವಾಮಾನ ಕೆಟ್ಟದಾಗಿದ್ದು, ಪ್ರಯಾಣಿಕರ ಸುರಕ್ಷತೆ ರಾಜ್ಯ ಸರ್ಕಾರದ ಪ್ರಮುಖ ಆದ್ಯತೆಯಾಗಿರುವುದರಿಂದ ಹೆಲಿಕಾಪ್ಟರ್ ಸೇವೆಗಳನ್ನು ಎರಡು ದಿನಗಳ ಕಾಲ ಸ್ಥಗಿತಗೊಳಿಸಲಾಗುವುದು ಎಂದು ಹೇಳಿದರು. ರಾಜ್ಯದಲ್ಲಿ ಹೆಲಿಕಾಪ್ಟರ್ ಕಾರ್ಯಾಚರಣೆಗಳಿಗೆ ಕಟ್ಟುನಿಟ್ಟಾದ ಎಸ್‌ಒಪಿ ಹೊರಡಿಸಲು ಮತ್ತು ಅಪಘಾತಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವುದರ ಜೊತೆಗೆ ನಿಯಂತ್ರಣ ಮತ್ತು ಕಮಾಂಡ್ ಕೇಂದ್ರವನ್ನು ಸ್ಥಾಪಿಸಲು ಅವರು ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದರು.

ರಾಜ್ಯದಲ್ಲಿ ಹೆಲಿಕಾಪ್ಟರ್ ಕಾರ್ಯಾಚರಣೆಗಳಲ್ಲಿ ಡಿಜಿಸಿಎ ಮಾನದಂಡಗಳ ಅನುಸರಣೆಗೆ ಸಂಬಂಧಿಸಿದಂತೆ ಯಾವುದೇ ಸಡಿಲತೆ ಇರಬಾರದು. ಮೇಲಿನ ಹಿಮಾಲಯ ಪ್ರದೇಶದಲ್ಲಿ ಹಾರಾಟ ನಡೆಸುವ ಪೈಲಟ್‌ಗಳು ಅನುಭವ ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ತುರ್ತು ಸಭೆಯ ನಂತರ ಧಾಮಿ ಹೇಳಿದರು. ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿ ಆನಂದ್ ಬರ್ಧನ್, ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಯಾನ ಕಾರ್ಯದರ್ಶಿ ಸಚಿನ್ ಕುರ್ವೆ, ವಿಪತ್ತು ಕಾರ್ಯದರ್ಶಿ ವಿನೋದ್ ಕುಮಾರ್ ಸುಮನ್, ಯುಸಿಎಡಿಎ (ಉತ್ತರಾಖಂಡ ನಾಗರಿಕ ವಿಮಾನಯಾನ ಅಭಿವೃದ್ಧಿ ಪ್ರಾಧಿಕಾರ) ಮತ್ತು ಡಿಜಿಸಿಎ ಅಧಿಕಾರಿಗಳು ಭಾಗವಹಿಸಿದ್ದರು. ಪ್ರತಿಕೂಲ ಹವಾಮಾನದಿಂದಾಗಿ ಅಪಘಾತ ಸಂಭವಿಸಿದೆ ಎಂದು ಧಾಮಿ ಹೇಳಿದ್ದಾರೆ ಮತ್ತು ಭಾನುವಾರ ಮತ್ತು ಸೋಮವಾರ ಎರಡು ದಿನಗಳವರೆಗೆ ಹೆಲಿ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ಹೇಳಿದರು. ಹವಾಮಾನವೂ ಕೆಟ್ಟದಾಗಿದೆ ಮತ್ತು ಯಾತ್ರಿಕರ ಸುರಕ್ಷತೆಯು ಅತ್ಯಂತ ಮುಖ್ಯವಾಗಿದೆ. ಇಂದು ಮತ್ತು ನಾಳೆ ಯಾವುದೇ ಹೆಲಿ ಸೇವೆಗಳು ಇರುವುದಿಲ್ಲ. ಹೆಲಿ ಕಾರ್ಯಾಚರಣೆಗಳನ್ನು ಪುನರಾರಂಭಿಸುವ ಮೊದಲು ಪರಿಸ್ಥಿತಿಯನ್ನು ಸಂಪೂರ್ಣವಾಗಿ ಪರಿಶೀಲಿಸಲು ವಿಮಾನಯಾನ ಕಂಪನಿಗಳು, ಡಿಜಿಸಿಎ ಮತ್ತು ಯುಸಿಎಡಿಎಗೆ ಕೇಳಲಾಗಿದೆ ಎಂದು ಅವರು ಹೇಳಿದರು

ಟಿಂಬರ್ ಲಾರಿ ಮಗುಚಿ ಆಟೋರಿಕ್ಷಾ ಜಖಂ



ಮಡಿಕೇರಿ/ ಗೋಣಿಕೊಪ್ಪ ಜೂ.15– ಆಟೋ ರಿಕ್ಷಾ ಮೇಲೆ ಟಿಂಬರ್ ಲಾರಿ ಮಗುಚಿ ಆಟೋ ರಿಕ್ಷಾ ಜಖಂಗೊಂಡಿರುವ ಘಟನೆ ಗೋಣಿಕೊಪ್ಪದ ಕೈಕೇರಿ ಬಳಿ ಸಂಭವಿಸಿದಿದೆ.

ಗೋಣಿಕೊಪ್ಪಲು–ವಿರಾಜಪೇಟೆ ಮುಖ್ಯ ರಸ್ತೆಯ ಕೈಕೇರಿ ನಯರಾ ಪೆಟ್ರೋಲ್ ಬಂಕ್ ಬಳಿಯಿರುವ ಟೈಯರ್ ಶಾಪ್‌ನಲ್ಲಿ ಟಯರ್ ಬದಲಿಸಲು ಆಟೋರಿಕ್ಷಾ ಬಂದಿತ್ತು.

ಇದೇ ಸಂದರ್ಭ ಟಯರ್‌ಗೆ ಗಾಳಿ ತುಂಬಿಸುವ ಸಲುವಾಗಿ ಕೇರಳ ರಾಜ್ಯದ ನೋಂದಣಿ ಹೊಂದಿದ್ದ ಟಿಂಬರ್ ಲಾರಿ ಕೂಡ ಆಗಮಿಸಿದೆ. ಈ ವೇಳೆ ಟಿಂಬರ್ ಲಾರಿ ವಾಲಿಕೊಂಡು ಆಟೋರಿಕ್ಷಾದ ಮೇಲೆ ಮಗುಚಿ ಬಿದ್ದಿದೆ. ಪರಿಣಾಮ ಆಟೋ ಮುಂಭಾಗ ಸಂಪೂರ್ಣ ಜಖಂಗೊಂಡಿದೆ. ಆಟೋರಿಕ್ಷಾದಲ್ಲಿ ಯಾರೂ ಇಲ್ಲದ್ದರಿಂದ ಹೆಚ್ಚಿನ ಅನಾಹುತವೂ ತಪ್ಪಿದಂತಾಗಿದೆ.

ಅಕ್ರಮ ಮದ್ಯ ದಾಸ್ತಾನು ಓರ್ವನ ಬಂಧನ



ಮಡಿಕೇರಿ, ಜೂ.15– ಸೇನಾ ನಿವೃತ್ತರು ಹಾಗೂ ಇತರ ಮೂಲಗಳಿಂದ ಮದ್ಯ ಪಡೆದು ಅಕ್ರಮವಾಗಿ ದಾಸ್ತಾನು ಮಾಡಿರುವ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಮಡಿಕೇರಿ ವಿಭಾಗದ ಅಬಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಓರ್ವ ಆರೋಪಿಯನ್ನು ಬಂಧಿಸಿದ್ದಾರೆ.

ದಾಳಿ ವೇಳೆ 81 ವಿವಿಧ ಮದ್ಯದ ಬ್ರಾಂಡ್‌ಗಳ ಬಾಟಲಿಗಳು ಹಾಗೂ 60.750 ಲೀಟರ್‌ನಷ್ಟು ಸೇನಾ ಸಿಬ್ಬಂದಿಗಳಿಗೆ ಮಾತ್ರ ಮೀಸಲಾದ ಅಕ್ರಮ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಬಕಾರಿ ಇಲಾಖೆಯ ಉಪ ಆಯುಕ್ತ ನಾಗೇಶ್ ಕುಮಾರ್ ತಿಳಿಸಿದ್ದಾರೆ.

ಕಂಗೊಳಿಸುತ್ತಿರುವ ಕೊಡಗಿನ ಜಲಪಾತ

ಪ್ರವಾಸಿ ತಾಣಗಳಾಗಿ ಮಾರ್ಪಟ್ಟ ಜಲಪಾತಗಳನ್ನು ಹೊರತುಪಡಿಸಿದಂತೆ ಹತ್ತು ಹಲವಾರು ಜಲಪಾತಗಳು ಕೊಡಗಿನ ಗ್ರಾಮೀಣ ಭಾಗಗಳಲ್ಲಿ ಕಾಣ ಸಿಗುತ್ತವೆ. ದುರ್ಗಮ ಹಾದಿ, ದಟ್ಟ ಕಾಡುಗಳು, ಕಾಡು ಪ್ರಾಣಿಗಳ ಭಯದಿಂದ ಸ್ಥಳೀಯರನ್ನು ಹೊರತುಪಡಿಸಿದರೆ ಪ್ರವಾಸಿಗರಿಂದ ಈ ಜಲಪಾತಗಳು ದೂರವೇ ಉಳಿದಿವೆ. ಪರಿಣಾಮ ಆ ಜಲಪಾತಗಳ ಸುತ್ತ ಮುತ್ತಲ ಪ್ರದೇಶ ಯಾವುದೇ ರೀತಿಯ ಮಾಲಿನ್ಯಕ್ಕೂ ಒಳಗಾಲಿಲ್ಲ ಎಂಬುದು ಕೂಡ ಅಷ್ಟೇ ಸತ್ಯವಾಗಿದೆ.

ಪ್ರಸಾದ್ ಸಂಪಿಗೆಕಟ್ಟೆ

ಮಡಿಕೇರಿ,ಜೂ.15– ಕೊಡಗು ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಪಾತಗಳು ಜೀವ ಕಳೆಯಿಂದ ಕಂಗೊಳಿಸುತ್ತಿವೆ. ವಾರಂತ್ಯದಲ್ಲಿ ಇದೀಗ 'ಮಾನ್ಸೂನ್ ಟೂರಿಸಂ' ಹೆಸರಲ್ಲಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಚೇತರಿಕೆ ಕಂಡು ಕೊಳ್ಳುತ್ತಿದೆ. ಹದವಾಗಿ ಸುರಿಯುತ್ತಿರುವ ಮಳೆ, ಮುದ ನೀಡುವ ಚಳಿ, ಮಂಜು ಮುಸುಕಿದ ವಾತಾವರಣ ಪ್ರವಾಸಿಗರನ್ನು ಸೆಳೆಯುತ್ತಿದೆ.

ಮಲ್ಲಳ್ಳಿ ಜಲಪಾತ

ಪುಷ್ಪಗಿರಿ ಬೆಟ್ಟತಪ್ಪಲಿನಲ್ಲಿ ಹುಟ್ಟುವ ಕುಮಾರ ಧಾರಾ ನದಿ ಮೈದುಂಬಿ ಹರಿಯುತ್ತಿದ್ದು, ಮಲ್ಲಳ್ಳಿ ಗ್ರಾಮದ ಕಲ್ಲು ಬಂಡೆಯಿಂದ 390 ಅಡಿ ಎತ್ತರದಿಂದ ಧುಮುಕಿ ಮಲ್ಲಳ್ಳಿ ಜಲಧಾರೆಯಾಗಿ ಪ್ರವಹಿಸುತ್ತದೆ. ಮೊದಲ ಹಂತದ 300 ಅಡಿ ಎತ್ತರದಿಂದ ಕೆಳಕ್ಕೆ ಧುಮುಕಿ ನಂತರ 90 ಅಡಿ ಎತ್ತರದಿಂದ ಕೆಳಕ್ಕೆ ಬೀಳುತ್ತದೆ. ಹೀಗೆ ಹಂತ ಹಂತವಾಗಿ ಒಟ್ಟಾಗಿ ಸುಮಾರು 390 ಅಡಿ ಎತ್ತರದಿಂದ ನೀರು ಬೀಳುವುದರೊಂದಿಗೆ ಮಂಜಿನ ಬೆಟ್ಟವನ್ನೇ ಸೃಷ್ಟಿಸುತ್ತದೆ. ಇಲ್ಲಿಂದ ಮುಂದೆ ಹರಿದು ತೀರ್ಥ ಕ್ಷೇತ್ರ ಕುಕ್ಕೆ ಸುಬ್ರಮಣ್ಯ ದೇವಾಲಯದ ಸ್ನಾನಘಟ್ಟ ತಲುಪುತ್ತದೆ.

ಚೇಲಾವರ ಜಲಪಾತ

ಬೆಟ್ಟಗುಡ್ಡಗಳ ಸಂಧಿಗಳಿಂದ ಹಾಲ್ನೊರೆಯಂತೆ ಉಕ್ಕುವ ನೂರಾರು ಎಲೆಮರೆಯ ಜಲಪಾತಗಳು ಕೊಡಗಿನಲ್ಲಿವೆ. ಇದರಲ್ಲಿ ಮುಖ್ಯವಾಗಿ ಚೇಲವಾರ ಜಲಪಾತ ಒಂದು. ಕೊಡಗಿನ ಜಿಲ್ಲಾ ಕೇಂದ್ರ ಮಡಿಕೇರಿ ಯಿಂದ ನಾಪೋಕ್ಲು ಕಕ್ಕಬ್ಬೆ ಮಾರ್ಗವಾಗಿ ಸುಮಾರು 35 ಕಿ.ಮೀ. ಕ್ರಮಿಸಿದರೆ ಚೆಯ್ಯಂಡಾಣೆ ಗ್ರಾಮ ಸಿಗುತ್ತದೆ. ಅಲ್ಲಿಂದ 3 ಕಿ.ಮೀ. ದೂರದ ಚೇಲವಾರ ಗ್ರಾಮದಲ್ಲಿ ಆಮೆಪಾರೆ ಎಂಬಲ್ಲಿ ಬೆಟ್ಟಗುಡ್ಡ ಗಳ ನಡುವೆ ಕಬ್ಬೆಬೆಟ್ಟದ ಸಂಧಿಯಿಂದ ಸುಮಾರು 80 ಅಡಿಗಳಷ್ಟು ಎತ್ತರದಿಂದ ಧುಮುಕುವ ಜಲ ಧಾರೆಯೇ ಚೇಲವಾರ ಜಲಪಾತ. ತಡಿಯಂಡ ಮೋಳ್ ಬೆಟ್ಟ ಸಾಲಿನಲ್ಲಿ ಬರುವ ಕಬ್ಬೆಬೆಟ್ಟದಿಂದ ಈ ಜಲಧಾರೆ ಧುಮ್ಮಿಕ್ಕುತ್ತಿದ್ದು ನೋಡುಗರನ್ನು ಮೂಕ ಪ್ರೇಕ್ಷಕರನ್ನಾಗಿಸುತ್ತದೆ. ಪಕ್ಷಿಗಳ ಚಿಲಿಪಿಲಿ ನಾದದ ನಡುವೆ ಹಾಲ್ನೊರೆ ಯಂತೆ ಸುಮಾರು 80 ಅಡಿಗಳ ಮೇಲಿಂದ ನೀನಾದದೊಂದಿಗೆ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಕೋಟೆ ಅಬ್ಬಿ



ಕೋಟೆ ಅಬ್ಬಿ ಜಲಪಾತದ ದೃಶ್ಯ.

ಮಡಿಕೇರಿ ತಾಲೂಕಿನ ಮಕ್ಕಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಕ್ಕೋಡು ಗ್ರಾಮದ ಪ್ರಕೃತಿ ಮಡಿಲಲ್ಲಿ ಕೋಟೆ ಅಬ್ಬಿ ಜಲಪಾತವಿದೆ. ಪ್ರಕೃತಿ ಮಡಿಲಲ್ಲಿ ಹರಿಯುವ ಜಲಪಾತವನ್ನು ಪ್ರವಾಸಿಗರು ಕಣ್ತುಂಬಿಕೊಳ್ಳುತ್ತಿದ್ದಾರೆ. ಕೋಟೆ ಬೆಟ್ಟದಿಂದ ನೀರು ನದಿಯಾಗಿ ಹರಿದು ಧುಮ್ಮಿಕ್ಕುವ ಸ್ಥಳವನ್ನು ಕೋಟೆ ಅಬ್ಬಿ ಎಂದು ಹೆಸರಿಸಲಾಗಿದ್ದು, ವಾರಾಂತ್ಯದಲ್ಲಿ ನೂರಾರು ಪ್ರವಾಸಿಗರು ಇತ್ತ ಕಡೆ ಆಗಮಿಸಿ ಜಲಪಾತ ಮತ್ತು ಸುತ್ತಲ ಪ್ರಕೃತಿಯ ಸೌಂದರ್ಯ ಸವಿಯುತ್ತಾರೆ.

ಇರ್ಪು ಜಲಪಾತ

ದಕ್ಷಿಣ ಕೊಡಗಿನ ರಾಮೇಶ್ವರ ಕ್ಷೇತ್ರದ ಬ್ರಹ್ಮಗಿರಿ ಬೆಟ್ಟದಿಂದ ಉಗಮವಾಗುತ್ತಿರುವ ಇರ್ಪು ಜಲಧಾರೆ ಕೂಡ ಮಳೆ ನೀರಿನಿಂದ ಮೈದುಂಬಿ ಕೊಂಡಿದೆ. ನೂರಾರು ಪ್ರವಾಸಿಗರನ್ನು ತನ್ನತ್ತ ಸೆಳೆಯಲು ಹಾಲ್ನೊರೆ ಯಾಗಿ ಹರಿಯುತ್ತಿದೆ. 170 ಅಡಿಗೂ ಹೆಚ್ಚು ಎತ್ತರದಿಂದ 2 ಕವಲುಗಳಾಗಿ ನೀರು ಧುಮ್ಮಿಕ್ಕುತ್ತಿರುವ ದೃಶ್ಯ ಕಣ್ಮನ ಸೆಳೆಯುವಂತಿದೆ. ಪರಸ್ಪರ ಮಾತುಗಳು ಕೇಳದಷ್ಟು ಶಬ್ದದೊಂದಿಗೆ ಪ್ರಕೃತಿಯ ಗಾನ ಲಹರಿಯಾಗಿ ಭೋರ್ಗರೆದು ಹಾಲಿನಂತೆ ನೊರೆ ನೊರೆಯಾಗಿ ಧುಮುಕುತ್ತಿರುವ ಜಲಪಾತದ ಸೌಂದರ್ಯ ನೋಡುವುದೇ ಆನಂದಕರ.


ಮೇದುರ ಅಬ್ಬಿ



ಭೋರ್ಗರೆಯುತ್ತಿರುವ ಮೇದುರ ಅಬ್ಬಿ ಜಲಪಾತ

ಗರ್ವಾಲೆ ಪಂಚಾಯಿತಿ ವ್ಯಾಪ್ತಿಯ ಮಾದಾಪುರ ಸೂರ್ಲಬ್ಬಿ ಮಾರ್ಗ ಮಧ್ಯೆ ರಸ್ತೆ ಬದಿಯಲ್ಲಿ ಮೇದುರ ಜಲಪಾತ ನೋಡಿಗರನ್ನು ಸೆಳೆಯುತ್ತಿದೆ. ಕೋಟೆ ಬೆಟ್ಟ ಮೇಲಿನಿಂದ ಹಾಲ್ನೊರೆಯಂತೆ ಹರಿಯುವ ಜಲಪಾತ 150 ಅಡಿಗಳ ಎತ್ತರದಿಂದ ಹರಿದು ಬರುತ್ತದೆ. ಮಾದಾಪುರದಿಂದ 15 ಕಿಲೋ ಮೀಟರ್ ದೂರದಲ್ಲಿ ಈ ಜಲ ಕನ್ಯೆ ಮೈದುಂಬಿ ಹರಿಯುತ್ತಿದೆ.

ಅಬ್ಬಿಗೆ ಪ್ರವಾಸಿಗರ ದಂಡು



ಕಣ್ಮನ ಸೆಳೆಯುತ್ತಿರುವ ಅಬ್ಬಿಜಲಪಾತಕ್ಕೆ ಪ್ರವಾಸಿಗರ ದಂಡು.

ಅಬ್ಬಿ ಜಲಪಾತ: ಮಡಿಕೇರಿ ಹೊರ ವಲಯ 10 ಕಿಮೀ ದೂರದ ಕೆ.ನಿಡುಗಣೆ ಗ್ರಾಮದಲ್ಲಿರುವ ಅಬ್ಬಿಜಲಪಾತ ಕಣ್ಮನ ಸೆಳೆಯುತ್ತಿದೆ. ಗಾಳಿಬೀಡು ವ್ಯಾಪ್ತಿಯಲ್ಲಿ ಉತ್ತಮ ಮಳೆ ಸುರಿಯುತ್ತಿರುವ ಕಾರಣ ಅಬ್ಬಿ ಭೋರ್ಗರೆಯುತ್ತಿದ್ದು, ಅಬ್ಬಿ ಜಲಪಾತದ ವೈಭವ ಕಣ್ತುಂಬಿಕೊಳ್ಳುವುದೇ ಮನಸಿಗೆ ಮುದ ನೀಡುತ್ತದೆ. ದಟ್ಟ ಹಸಿರಿನ ನಡುವೆ ಹಾಲಿನಂತೆ ಧುಮ್ಮಿಕ್ಕುವ ಅಬ್ಬಿಫಾಲ್ಸ್ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಹೆಚ್ಚಿನ ಪ್ರವಾಸಿಗರು ಆಗಮಿಸುತ್ತಾರೆ. 80 ಅಡಿ ಎತ್ತರದಿಂದ ನೀರು ಬೀಳುವ ರಭಸಕ್ಕೆ ನೀರಿನ ಹನಿಗಳು ಮೈಗೆ ಮುತ್ತಿಕ್ಕುತ್ತವೆ. ಹಿತವಾದ ಗಾಳಿ ದೃಶ್ಯ ವೈಭವಗಳು ಹೊಸತೊಂದು ಲೋಕಕ್ಕೆ ಪ್ರವಾಸಿಗರನ್ನು ಕರೆದೊಯ್ಯುತ್ತವೆ.

ಹಾರಂಗಿ ಜಲಾಶಯ ಬಹುತೇಕ ಭರ್ತಿಯ ಹಂತಕ್ಕೆ ತಲುಪಿರುವ ಹಿನ್ನೆಲೆಯಲ್ಲಿ ಜಲಾಶಯದ ಕ್ರೆಸ್ಟ್‌ಗೇಟ್ ಮೂಲಕ ನದಿ ಪಾತ್ರಕ್ಕೆ ನೀರನ್ನು ಹರಿಸಲಾಗುತ್ತಿದೆ. ಈ ದೃಶ್ಯವನ್ನು ನೋಡಲು ಪ್ರವಾಸಿಗರು ಭಾನುವಾರ ಬೆಳಗಿನಿಂದಲೇ ಹಾರಂಗಿ ಕಡೆಗೆ ಆಗಮಿಸಿದ್ದರು.

ಮಾತ್ರವಲ್ಲದೇ ಕೆಲವು ಪ್ರವಾಸಿಗರು ಜಲಾಶಯದ ಮುಂಭಾಗದಲ್ಲಿರುವ ಸೇತುವೆಯ ಅಂಚಿನಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳುವ ಮೂಲಕ ಅಪಾಯವನ್ನು ಮೈಮೇಲೆ ಎಳೆದು ಕೊಳ್ಳುತ್ತಿದ್ದಾರೆ.

ಸೇತುವೆ ಕೆಳಭಾಗ ರಭಸವಾಗಿ ನೀರು ಹರಿಯುತ್ತಿದ್ದು, ಅಪಾಯದ ಅರಿವಿಲ್ಲದ ರೀತಿ ವರ್ತಿಸುವ ಪ್ರವಾಸಿಗರು ಎರಡೂ ಬದಿಗಳಲ್ಲಿ ರಕ್ಷಣಾ ಬೇಲಿ ಇಲ್ಲದ ಸೇತುವೆಯ ಮೇಲೆ ವಾಹನಗಳನ್ನು ನಿಲ್ಲಿಸಿಕೊಂಡು 'ಫೋಟೋ ಶೂಟ್' ಹೆಸರಲ್ಲಿ ಹುಚ್ಚು ಸಾಹಸ ಪ್ರದರ್ಶಿಸುತ್ತಿದ್ದಾರೆ. ಇದರಿಂದಾಗಿ ಸಂಪರ್ಕ ಸೇತುವೆಯ ಎರಡೂ ಕಡೆಯಿಂದ ಬರುವ ಇತರ ವಾಹನಗಳಿಗೆ ತೊಂದರೆಯಾಗುತ್ತಿದೆ.

ಸೇತುವೆ ಎರಡು ಬದಿಗಳಲ್ಲಿ ವಾಹನಗಳನ್ನು ನಿಲ್ಲಿಸದಂತೆ ಹಾಗೂ ಪ್ರವಾಸಿಗರ ಮೋಜು ಮಸ್ತಿಯಿಂದ ಯಾವುದೇ ಅನಾಹುತ ಘಟಿಸದಂತೆ ಹಾರಂಗಿ ಜಲಾಶಯದ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಬೇಕಿದೆ ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಅರಣ್ಯ ಇಲಾಖೆಯ ಗುತ್ತಿಗೆ ನೌಕರ ಸಂಶಯಾಸ್ಪದ ಸಾವು
ಡಿಆರ್‌ಎಫ್, ಆರ್‌ಎಫ್‌ಓ ಸೇರಿ ಐವರ ವಿರುದ್ಧ ಎಫ್‌ಐಆರ್



ಗೋಪಾಲ

ಮಡಿಕೇರಿ, ಜೂ.15– ಅರಣ್ಯ ಇಲಾಖೆಯ ಜೀಪ್ ಚಾಲಕ (ಗುತ್ತಿಗೆ ನೌಕರ) ಸಂಶಯಾಸ್ಪದ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತನ ಪತ್ನಿ ನೀಡಿದ ದೂರಿನ ಅನ್ವಯ ಇಬ್ಬರು ಅಧಿಕಾರಿಗಳು ಸೇರಿ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕೊಡಗಿನ ಕಳ್ಳಹಳ್ಳ ಅರಣ್ಯ ವ್ಯಾಪ್ತಿಯ ವಲಯ ಅರಣ್ಯಾಧಿಕಾರಿ ರಾಜಶೇಖರ್, ಡಿಆರ್‌ಎಫ್ ವೇಣುಗೋಪಾಲ್, ಅರಣ್ಯ ಸಿಬ್ಬಂದಿ ಶಿವು, ಅಭಿ ಹಾಗೂ ಗುತ್ತಿಗೆದಾರ ಪ್ರಕಾಶ್ ವಿರುದ್ಧ ಪೊನ್ನಂಪೇಟೆ ತಾಲೂಕಿನ ಕುಟ್ಟ ಪೊಲೀಸ್ ಠಾಣೆಯಲ್ಲಿ ಸೆಕ್ಷನ್ 105, 211, 213 ಅನ್ವಯ ಎಫ್‌ಐಆರ್ ದಾಖಲಾಗಿದೆ. ಈ ಸಂಬಂಧ ಕುಟ್ಟ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಏನಿದು ಘಟನೆ?: ಕಳ್ಳಹಳ್ಳ ಅರಣ್ಯ ವಿಭಾಗದಲ್ಲಿ ಕಳೆದ 25 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಗೋಪಾಲ ಎಂಬುವರು ಮೇ 22 ರಂದು ಕರ್ತವ್ಯ ನಿಮಿತ್ತ ಇತರ ಸಿಬ್ಬಂದಿಯೊಂದಿಗೆ ತೆರಳುತ್ತಿದ್ದರು. ಈ ವೇಳೆ ಜೀಪ್ ಅಪಘಾತವಾಗಿ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ತೀವ್ರ ಪೆಟ್ಟಾಗಿದ್ದರಿಂದ 72 ಗಂಟೆಗಳ ಕಾಲ ಐಸಿಯುನಲ್ಲಿ ಇರಿಸಲಾಗಿತ್ತು. ನಂತರ ಮನೆಗೆ ಬಿಟ್ಟು ಹೋಗಿದ್ದರು. ಪುನಃ ಮೇ 26ರಂದು ಆಸ್ಪತ್ರೆಗೆ ತೋರಿಸಿ ಚಿಕಿತ್ಸೆ ಕೊಡಿಸಿದ್ದರು. ಆದರೂ ಚಿಕಿತ್ಸೆ ಫಲಕಾರಿಯಾಗದೇ ಇದೇ ಜೂನ್ 12ರಂದು ಮನೆಯಲ್ಲೇ ಗೋಪಾಲ ಮೃತಪಟ್ಟಿದ್ದರು. ಇಲಾಖೆ ನಿಯಮದಂತೆ ವೈದ್ಯಕೀಯ ಮರಣೋತ್ತರ ಪರೀಕ್ಷೆ ನಡೆಸದೇ ಅಧಿಕಾರಿಗಳು ಅಂತಿಮ ಸಂಸ್ಕಾರ ನೆರವೇರಿಸಿದ್ದರು.

ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧವೇ ಪತ್ನಿ ದೂರು ನೀಡಿದ್ದರು. ಮೇ 22ರಂದು ಅಪಘಾತವಾಗಿದ್ದರೂ ಪೊಲೀಸ್ ಠಾಣೆಗೆ ದೂರು ನೀಡಿರಲಿಲ್ಲ. ಘಟನೆ ಬಳಿಕ ಪತ್ನಿ, ಮಕ್ಕಳಿಗೆ ತಿಳಿಸದೇ ಇಲಾಖೆಯಿಂದಲೂ ಸೂಕ್ತ ಚಿಕಿತ್ಸೆ ದೊರಕದ ಹಿನ್ನೆಲೆ ಮೃತಪಟ್ಟಿದ್ದಾರೆ ಎಂದು ಕುಟ್ಟ ಪೊಲೀಸ್ ಠಾಣೆಯಲ್ಲಿ ಮೃತ ಗೋಪಾಲನ ಪತ್ನಿ ದೂರು ನೀಡಿದ್ದರು. ದೂರಿನ ಅನ್ವಯ ಜೂನ್ 14ರ ಶನಿವಾರ ಪ್ರಕರಣ ದಾಖಲಾಗಿದೆ.

ಜೂ.21ರಂದು ಶ್ರೀ ಕಾವೇರಿ ಆಶ್ರಮದಲ್ಲಿ ಅಂತಾರಾಷ್ಟ್ರೀಯ ಯೋಗ



ವಿರಾಜಪೇಟೆ, ಜೂ.15– ಅಂತಾರಾಷ್ಟ್ರೀಯ ಯೋಗ ದಿನಾಚರಣೆ 2025ರ ಅಂಗವಾಗಿ ಶ್ರೀ ಕಾವೇರಿ ಯೋಗ ಕೇಂದ್ರದ 26ನೇ ವರ್ಷದ ಯೋಗ ವಾರ್ಷಿಕೋತ್ಸವವನ್ನು ಜೂ.21 ರಂದು ಪಟ್ಟಣದ ಅಪ್ಪಯ್ಯಸ್ವಾಮಿ ರಸ್ತೆಯಲ್ಲಿರುವ ಶ್ರೀ ಕಾವೇರಿ ಆಶ್ರಮದಲ್ಲಿ ನಡೆಸಲಾಗುವುದು.

ಜೂ.21 ರಂದು ಮುಂಜಾನೆ 6 ರಿಂದ 7 ಗಂಟೆವರೆಗೆ ದಿನನಿತ್ಯದಂತೆ ಯೋಗ ತರಬೇತಿ ನಡೆಯಲಿದೆ. ನಂತರ 8–30 ರಿಂದ ಯೋಗ ದಿನಾಚರಣೆ ಪ್ರಯುಕ್ತ ಸಭಾ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮಕ್ಕೆ ಗಣ್ಯ ವ್ಯಕ್ತಿಗಳು ಆಗಮಿಸಲಿದ್ದಾರೆ ಎಂದು ಯೋಗ ತರಬೇತಿಯ ಗುರು ಸೀತಾರಾಮ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಳಿಕ ಮಾತನಾಡಿದ ಅವರು, 26 ವರ್ಷಗಳಿಂದಲೂ ಉಚಿತ ಯೋಗ ತರಬೇತಿ ನಡೆಸಿಕೊಂಡು ಬರುತ್ತಿದ್ದು ದಿನನಿತ್ಯ 25 ರಿಂದ 30 ಮಂದಿ ಯೋಗ ಕಲಿಯಲು ಬರುತ್ತಾರೆ. 26 ವರ್ಷಗಳಲ್ಲಿ ಸುಮಾರು 2 ಸಾವಿರ ಮಂದಿ ಉಚಿತ ಯೋಗ ಕಲಿತಿದ್ದಾರೆ. ಈಗಾಗಲೇ ಕಾವೇರಿ ಯೋಗ ಕೇಂದ್ರದಲ್ಲಿ ಯೋಗ ಕಲಿತವರು ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಹಾಗೂ ಸೌತ್ ಇಂಡಿಯಾದಲ್ಲಿ ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಉಚಿತವಾಗಿ ನಡೆಸಿಕೊಂಡು ಬರುತ್ತಿರುವ ಯೋಗ ತರಬೇತಿಯಿಂದ ಅನೇಕರ ಪರಿಚಯ ನನ್ನ ಈ ಕಾರ್ಯಕ್ಕೆ ನೆಮ್ಮದಿಯು ದೊರಕುತ್ತದೆ ಎಂದರು.

ನಿಗದಿತ ಸಮಯಕ್ಕೆ ಕಾಮಗಾರಿ ಪೂರ್ಣಗೊಳಿಸಿ

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳು, ಗುತ್ತಿಗೆದಾರರಿಗೆ ಸೂಚನೆ



ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಪ್ರಾಧಿಕಾರದ ಉಪಾಧ್ಯಕ್ಷ ಕೆ.ವೆಂಕಟೇಶ್ ಕುಟುಂಬ ಸಮೇತ ಮಲೆಮಹದೇಶ್ವರ ಸ್ವಾಮಿಯ ದರ್ಶನ ಪಡೆದರು.

ಹನೂರು, ಜೂ.15– ಪ್ರಸಿದ್ಧ ಯಾತ್ರಾ ಸ್ಥಳ ಮಲೆ ಮಹದೇಶ್ವರಬೆಟ್ಟದಲ್ಲಿ ಶ್ರೀ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ರೇಷ್ಮೆ ಮತ್ತು ಪಶು ಸಂಗೋಪನಾ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಪ್ರಾಧಿಕಾರದ ಉಪಾಧ್ಯಕ್ಷ ಕೆ.ವೆಂಕಟೇಶ್ ತಿಳಿಸಿದರು.

ತಾಲೂಕಿನ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಕುಟುಂಬ ಸಮೇತ ಆಗಮಿಸಿದ ನಂತರ ದರ್ಶನ ಪಡೆದು ಮಾತನಾಡಿ, ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಯಾವುದೇ ಲೋಪದೋಷಗಳು ಆಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಸ್ಥಳದಲ್ಲಿಯೇ ಇದ್ದು ಪರಿಶೀಲನೆ ನಡೆಸಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಮಹದೇಶ್ವರ ಬೆಟ್ಟಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ 45 ಕೋಟಿ ವೆಚ್ಚದಲ್ಲಿ ತಿರುಪತಿ ಮಾದರಿಯಲ್ಲಿ ಎಂಟು ಬ್ಲಾಕ್ (ಕ್ಯೂಲೈನ್) ನಿರ್ಮಾಣ ಮಾಡಿ, ಪ್ರತಿಯೊಂದು ಬ್ಲಾಕ್‌ಗಳಲ್ಲಿ ಸುಮಾರು 500 ಜನರು ಕೂರಲು ಆಸನದ ವ್ಯವಸ್ಥೆ, ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಪ್ರತಿಯೊಂದು ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಯಾವುದಾದರೂ ಸಮಸ್ಯೆಗಳಿದ್ದರೆ ನೇರವಾಗಿ ನನ್ನ ಗಮನಕ್ಕೆ ತನ್ನಿ. ಈ ಕಾಮಗಾರಿಯನ್ನು ಆಗಸ್ಟ್ ತಿಂಗಳೊಳಗೆ ಪೂರ್ಣಗೊಳಿಸಿ ಮುಂಬರುವ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಭಕ್ತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕು ಎಂದರು.

ಪೌರಕಾರ್ಮಿಕರಿಗೆ ಮನೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಿ

ಮಲೆಮಹದೇಶ್ವರ ಬೆಟ್ಟದಲ್ಲಿ ಹಲವಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ 60 ಪೌರಕಾರ್ಮಿಕರಿಗೆ ಮನೆ ನಿರ್ಮಾಣ ಮಾಡಲು ಹಿಂದಿನ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಮನೆ ನಿರ್ಮಾಣ ಮಾಡಿಕೊಡಲು ಅಂದಾಜು ಪಟ್ಟಿ ತಯಾರು ಮಾಡಿ ವರದಿ ನೀಡುವಂತೆ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು.

ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ: ಶ್ರೀ ಕ್ಷೇತ್ರಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಆಗಮಿಸುತ್ತಿರುವ ಹಿನ್ನೆಲೆ ಪ್ರಸ್ತುತ ಇರುವ ದಾಸೋಹ ಭವನದಲ್ಲಿ ಹೆಚ್ಚಿನ ಭಕ್ತಾದಿಗಳು ಒಮ್ಮೆಲೆ ಪ್ರಸಾದ ಸ್ವೀಕರಿಸಲು ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಳೆ ದಾಸೋಹ ಭವನದ ಮುಂಭಾಗ 90 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ದಾಸೋಹ ಭವನ ನಿರ್ಮಾಣ ಮಾಡಲಾಗುತ್ತಿದೆ. ಒಂದೇ ಬಾರಿಗೆ 4 ಸಾವಿರ ಭಕ್ತಾದಿಗಳು ಪ್ರಸಾದ ಸ್ವೀಕರಿಸಲು ಅನುಕೂಲವಾಗುವಂತೆ ಕಟ್ಟಡದ ವಿನ್ಯಾಸ ಮಾಡಲಾಗಿದೆ. ಈಗಾಗಲೇ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆ ಪಡೆದುಕೊಳ್ಳಲಾಗಿದ್ದು, ಟೆಂಡರ್ ಹಂತದಲ್ಲಿರುವುದರಿಂದ ಮುಂದಿನ ಪ್ರಕ್ರಿಯೆಯನ್ನು ಅತಿ ಶೀಘ್ರವೇ ಮುಗಿಸಬೇಕು ಎಂದರು.

20 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ಡಾರ್ಮೆಟರಿ ಹಾಗೂ ವಿವಿಧ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಸೈಕಲ್ ಬಳಕೆಯಿಂದ ಪರಿಸರ, ಆರೋಗ್ಯ ರಕ್ಷಣೆ



ಸೈಕಲ್ ರ‍್ಯಾಲಿಗೆ ಪತ್ರಕರ್ತ ಮಹದೇವಸ್ವಾಮಿ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು.

ಗುಂಡ್ಲುಪೇಟೆ, ಜೂ.15 (ಸೋಮ್.ಜಿ)– ಸೈಕಲ್ ಬಳಕೆಯಿಂದ ಪರಿಸರ ಮತ್ತು ಹೃದಯದ ಆರೋಗ್ಯದ ರಕ್ಷಣೆ ಮಾಡಿಕೊಳ್ಳಬಹುದು ಎಂದು ಪಟ್ಟಣದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಹಿರಿಯ ಉಪನ್ಯಾಸಕ ರಮೇಶ್ ಹೇಳಿದರು.

ಭಾನುವಾರ ಪಟ್ಟಣದಲ್ಲಿ ಸಾಯಿ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪೊಲೀಸ್ ಮತ್ತು ಆರೋಗ್ಯ ಇಲಾಖೆ ಹಾಗೂ ವಿವಿಧ ಶಾಲಾ ಕಾಲೇಜುಗಳು ಮತ್ತು ಸಂಘ ಸಂಸ್ಥೆಗಳ ಆಶ್ರಯದಲ್ಲಿ ಆಯೋಜಿಸಿದ್ದ ಸೈಕಲ್ ರ‍್ಯಾಲಿ ಉದ್ಘಾಟಿಸಿ ಅವರು ಮಾತನಾಡಿದರು.

ಸದ್ಯ ದೇಶದಲ್ಲಿ ಬಾಲ್ಯ ಹಾಗೂ ಯುವ ಜನತೆಯಲ್ಲಿ ಹೆಚ್ಚುತ್ತಿರುವ ಬೊಜ್ಜುತನದಿಂದ ನಾನಾ ಆರೋಗ್ಯದ ಸಮಸ್ಯೆಗಳು ಎದುರಾಗುತ್ತಿವೆ. ಸೈಕಲ್ ಬಳಕೆಯಿಂದ ಪರಿಸರ ಮತ್ತು ಹೃದಯದ ಆರೋಗ್ಯದ ರಕ್ಷಣೆ ಮಾಡಿಕೊಳ್ಳಬಹುದು. ಇದಕ್ಕಾಗಿ ಭಾರತ ಸರ್ಕಾರದ ನಿರ್ದೇಶನ ಮೇರೆಗೆ ಕಾಲೇಜು ಶಿಕ್ಷಣ ಸಂಸ್ಥೆಯು ಚಿತ್ರದುರ್ಗ, ಕಲ್ಬುರ್ಗಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸೈಕಲ್ ರ‍್ಯಾಲಿ ಆಯೋಜಿಸಿದೆ ಎಂದು ಹೇಳಿದರು.

ಕಾಲೇಜು ಶಿಕ್ಷಣ ಇಲಾಖೆಯ ಸೌತ್ ಇಂಡಿಯಾ ಕ್ವಿಟ್ ಇಂಡಿಯಾದ ಅಧ್ಯಕ್ಷ ಡಾ. ಶ್ರೀಕಾಂತ್ ಮಾರ್ಗದರ್ಶನದಲ್ಲಿ ನಡೆದ ಸೈಕಲ್ ಜಾಥಾದಲ್ಲಿ ಸುಮಾರು 230ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡರು. ಸಾಯಿ ಸ್ಪೋರ್ಟ್ಸ್ ಆಫ್ ಇಂಡಿಯ ಸಂಸ್ಥೆಯು ಎಲ್ಲಾ ಸ್ಪರ್ಧಿಗಳಿಗೂ ಉಚಿತ ಟಿ–ಷರ್ಟ್ ವಿತರಿಸಿತು. ಪತ್ರಕರ್ತ ಕೆ.ಎನ್.ಮಹದೇವಸ್ವಾಮಿ ಸೈಕಲ್ ರ‍್ಯಾಲಿಗೆ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು.

ಸೈಕಲ್ ರ‍್ಯಾಲಿಯಲ್ಲಿ ಪಾಲ್ಗೊಂಡವರಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು. ಕಾರ್ಯಕ್ರಮದ ಆಯೋಜಕ, ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಕೆ.ಚಂದ್ರಶೇಖರ್ ಮಾತನಾಡಿದರು. ಈ ಸಂದರ್ಭ ಕಾಲೇಜಿನ ಪ್ರಾಂಶುಪಾಲೆ ಡಾ.ಜಿ.ಬಿ.ಪವಿತ್ರ, ಸಿಬ್ಬಂದಿ ಇತರರಿದ್ದರು.

ಸಂತೇಮರಹಳ್ಳಿಯಲ್ಲಿ ಎಳನೀರು ಮಾರುಕಟ್ಟೆಗೆ ಸಚಿವರಿಗೆ ಮನವಿ
ಹೊಂಗನೂರಲ್ಲಿ 2.20 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗೆ ಶಾಸಕರಿಂದ ಗುದ್ದಲಿಪೂಜೆ
ಹಿರಿಕೆರೆ, ಬೆಲ್ಲವತ್ತ ಡ್ಯಾಂಗೆ ಸಣ್ಣ ನೀರಾವರಿ ಇಲಾಖೆಯಿಂದ 18.50 ಕೋಟಿ ರೂ.ಮಂಜೂರು



ಹೊಂಗನೂರು ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಗುದ್ದಲಿಪೂಜೆ ನೆರವೇರಿಸಿ, ಸಮಾರಂಭದಲ್ಲಿ ಮಾತನಾಡಿದರು.

ಚಾಮರಾಜನಗರ, ಜೂ.15– ಸಂತೇಮರಹಳ್ಳಿಯಲ್ಲಿ ಎಳನೀರು ಮಾರುಕಟ್ಟೆ ಮಾಡುವಂತೆ ಜವಳಿ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವನಂದ ಪಾಟೀಲ್ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ತಾಲೂಕಿನ ಹೊಂಗನೂರು ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ಚಾಮರಾಜನಗರದಲ್ಲಿ ಎಪಿಎಂಸಿ ಮಾರುಕಟ್ಟೆ 11 ಎಕರೆಯಲ್ಲಿದೆ. ಸಂತೇಮರಹಳ್ಳಿ ಉಪ ಮಾರುಕಟ್ಟೆ 21 ಎಕರೆ ಇದ್ದು, ನಾಲ್ಕು ಕೂಡು ರಸ್ತೆ ಸೇರುವ ಸ್ಥಳ ಇದಾಗಿದ್ದು, ಮಂಡ್ಯ, ಮದ್ದೂರು ಎಳನೀರು ಮಾರುಕಟ್ಟೆ ಮಾದರಿಯಲ್ಲಿ ಜಿಲ್ಲೆಯ ರೈತರು ಬೆಳೆದ ಎಳನೀರನ್ನ ಯಾವುದೇ ದಲ್ಲಾಳಿ ಹಾವಳಿ ಇಲ್ಲದೆ ಲಾಭಾಂಶದಲ್ಲಿ ನೇರವಾಗಿ ಮಾರುಕಟ್ಟೆ ಮಾರಾಟ ಮಾಡಲು ಅನುಕೂಲವಾಗುವಂತೆ ಸಂತೇಮರಹಳ್ಳಿಯಲ್ಲಿ ಎಳನೀರು ಮಾರುಕಟ್ಟೆ ಮಾಡುವಂತೆ ಚಿಂತಿಸಿ ಸಚಿವರಿಗೆ ಮನವಿ ಸಲ್ಲಿಸಲಾಗಿದೆ. ಈ ರೀತಿಯಲ್ಲಿ ಅನೇಕ ಚಿಂತನೆ ಮಾಡಲಾಗಿದೆ ಎಂದರು.

ಇಂದು ಹೊಂಗನೂರಲ್ಲಿ 2.20 ಕೋಟಿ ವೆಚ್ಚದ ಕಾಮಗಾರಿಗೆ ಗುದ್ದಲಿಪೂಜೆ ಮಾಡಿದ್ದೇನೆ. ಮುಸ್ಲಿಮರ ಬೀದಿಗೂ 50 ಲಕ್ಷ ರೂ. ಅನುದಾನ ನೀಡಲಾಗಿದೆ. ಅಲ್ಲಿಗೆ ಎಲ್ಲ ಬೀದಿಗೂ ಸೇರಿಕೊಳ್ಳುತ್ತದೆ ಎಂದರು.

ಗ್ರಾಮಕ್ಕೆ 2.20 ಲಕ್ಷದ ಜೊತೆಗೆ ಹಿಂದೆ ಶಾಸಕನಾಗಿದ್ದಾಗ ಹೊಂಗನೂರು ಹಿರಿಕೆರೆಗೆ ನಬಾರ್ಡ್ ಯೋಜನೆಯಡಿಯಲ್ಲಿ 1 ಕೋಟಿ ಅನುದಾನ ಮಂಜೂರು ಮಾಡಿಸಿದ್ದೇನೆ. ಅಲ್ಲದೆ ಸಣ್ಣ ನೀರಾವರಿ ಇಲಾಖೆ ಸಚಿವ ಬೋಸ್ರಾಜ್, ಕೆರೆಗೆ ಭೇಟಿ ನೀಡಿ ಪರಿಶೀಲಿಸಿ 2 ಕೋಟಿ ರೂ. ಮಂಜೂರು ಮಾಡಿದ್ದರು. ಮಹದೇಶ್ವರಬೆಟ್ಟದಲ್ಲಿ ನಡೆದ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 14.50 ಕೋಟಿ ರೂ. ಕೊಟ್ಟಿದ್ದಾರೆ. ಅದು ಟೆಂಡರ್ ಆಗಿದ್ದು, ಕಾಮಗಾರಿ ಪ್ರಾರಂಭ ಆಗುತ್ತದೆ. ಬೆಲ್ಲವತ್ತಸಾನೆಗೆ 1 ಕೋಟಿ ರೂ.ಮಂಜೂರಾಗಿದೆ. ಒಟ್ಟು ಸಣ್ಣ ನೀರಾವರಿ ಇಲಾಖೆಯಿಂದ 18.50 ಕೋಟಿ ಮಂಜೂರಾಗಿದೆ ಎಂದರು.

ಸದ್ಯದಲ್ಲೇ ಹಿರಿಕೆರೆಯಲ್ಲಿ 2 ಕೋಟಿ ರೂ. ವೆಚ್ಚದ ಕಾಮಗಾರಿಗೆ ಗುದ್ದಲಿಪೂಜೆ ಮಾಡಲಾಗುವುದು. ಕುದೇರು, ಕೆಸ್ತೂರು, ಹೊಂಗನೂರು ಮೂರು ಗ್ರಾಮಗಳಿಗೂ ಕೆ.ಪಿ.ಎಸ್ ಶಾಲೆ ಮಂಜೂರಾಗಿದೆ. ಹಂತ ಹಂತವಾಗಿ ಹೊಂಗನೂರು ಗ್ರಾಮವನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ಹೊಂಗನೂರು ಗ್ರಾಮದಲ್ಲಿರುವ ಪ್ರಾಥಮಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕು, ಆಸ್ಪತ್ರೆಗೆ ವೈದ್ಯಾಧಿಕಾರಿ ನೇಮಕ, ಗ್ರಾಮದ ಬಸ್ ನಿಲ್ದಾಣ ಅಭಿವೃದ್ಧಿ, ರೇಚಂಬಳ್ಳಿಯಿಂದ ಬೆಲ್ಲವತ್ತ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಪಡಿಸಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಗ್ರಾಪಂ ಅಧ್ಯಕ್ಷೆ ರೂಪಾ ಮೋಹನ್, ಉಪಾಧ್ಯಕ್ಷ ನವೀನ್‌ಕುಮಾರ್, ಸದಸ್ಯರಾದ ಮಣಿಕಂಠ, ಚಾಮದಾಸ್, ಶಂಕರ್, ನಿರ್ಮಲಾ ರಾಮು, ವಿಶಾಲಾಕ್ಷಿ, ಶಿವಣ್ಣೇಗೌಡ, ತಾಪಂ ಪ್ರಭಾರ ಇಒ ಅರಸ್, ಜಲ ಜೀವನ್ ಮಿಷನ್ ಯೋಜನೆ ಎಇಇ ಜಗದೀಶ್, ಚಾಮುಲ್ ನಾಮ ನಿರ್ದೇಶಕ ಕಮರವಾಡಿ ರೇವಣ್ಣ ತಾಪಂ ಮಾಜಿ ಸದಸ್ಯ ಮಹದೇವಯ್ಯ, ಮುಖಂಡರಾದ ಮಣಿಮಾಸ್ಟರ್, ಕಂದಹಳ್ಳಿ ನಂಜುಂಡಸ್ವಾಮಿ ವೀರಣ್ಣ ಪುಟ್ಟಸ್ವಾಮಿ, ಜಯರಾಜು ಇತರರು ಹಾಜರಿದ್ದರು.

ಜೂ.19, ವಿದ್ಯುತ್ ಜನಸಂಪರ್ಕ ಸಭೆ

ಚಾಮರಾಜನಗರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ, ಹರದನಹಳ್ಳಿ ಹಾಗೂ ಸಂತೇಮರಹಳ್ಳಿ ಉಪವಿಭಾಗಗಳ ವ್ಯಾಪ್ತಿಯಲ್ಲಿ ಜೂನ್ 19 ರಂದು ಜನಸಂಪರ್ಕ ಸಭೆ ನಡೆಯಲಿದೆ.

ಜೂನ್ 19ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಚಾಮರಾಜನಗರ ಉಪವಿಭಾಗ, ಮಧ್ಯಾಹ್ನ 12.30 ರಿಂದ 1.30 ರವರೆಗೆ ಹರದನಹಳ್ಳಿ ಉಪವಿಭಾಗ ಹಾಗೂ ಮಧ್ಯಾಹ್ನ 3 ರಿಂದ ಸಂಜೆ 4 ಗಂಟೆಯವರೆಗೆ ಸಂತೆಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ಜನಸಂಪರ್ಕ ಸಭೆ ನಿಗದಿಯಾಗಿದೆ. ವಿದ್ಯುತ್ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳಿದ್ದಲ್ಲಿ ಸಭೆಗೆ ತಿಳಿಸುವಂತೆ ನಿಗಮದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಭೂಮಿಪೂಜೆ



ಡಾ.ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆ ಹಾಗೂ ಗ್ರಂಥಾಲಯ ನಿರ್ಮಾಣಕ್ಕೆ ಭಂತೆ ಬೋಧಿರತ್ನ ಭೂಮಿಪೂಜೆ ನೆರವೇರಿಸಿದರು.

ಚಾಮರಾಜನಗರ: ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ನಮ್ಮ ಉದ್ಧಾರಕ್ಕಾಗಿ ಕೊಟ್ಟಿರುವ ಸಂಸ್ಕಾರಯುತ ಧಮ್ಮಾ ಮಾರ್ಗದಲ್ಲಿ ಸಾಗಬೇಕು ಎಂದು ತಿ.ನರಸೀಪುರ ನಳಂದ ಬುದ್ಧ ವಿಹಾರದ ಭಂತೆ ಬೋಧಿರತ್ನ ಹೇಳಿದರು.

ತಾಲೂಕಿನ ಬಿಸಲವಾಡಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಸಮಿತಿ ವತಿಯಿಂದ ನಡೆದ ಡಾ.ಅಂಬೇಡ್ಕರ್ ಪ್ರತಿಮೆ ಹಾಗೂ ಗ್ರಂಥಾಲಯ ನಿರ್ಮಾಣದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದರು. ಕುಟುಂಬದಲ್ಲಿ ಸಂಸ್ಕಾರ ಇದ್ದಾಗ ಮಕ್ಕಳು ಉನ್ನತ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಎಲ್ಲರೂ ಸಾಮೂಹಿಕ ಬದಲಾವಣೆ ಕಂಡುಕೊಂಡು ಎಲ್ಲವೂ ಬದಲಾಗಿದೆ ಆದರೆ ಮಾನಸಿಕ ಗುಲಾಮಗಿರಿ ಬದಲಾಗಿಲ್ಲ. ನಮ್ಮಲ್ಲಿ ಸಂಸ್ಕಾರದ ಕೊರತೆ ಇದೆ ಎಂದರು.

ಅಂಬೇಡ್ಕರ್ ಅವರ ಪರಿವರ್ತನ ವಿಚಾರಧಾರೆಗಳು, ಚಿಂತಕರ ವಿಚಾರಧಾರೆಗಳನ್ನು ಅರ್ಥಮಾಡಿಕೊಂಡು ಸತ್ಯ ಯಾವುದು ಸುಳ್ಳು ಯಾವುದು ಅದನ್ನು ಮನಗಂಡುಕೊಂಡು ಸತ್ಯಕ್ಕೆ ನಾವು ಶರಣಾದಾದರೆ ಕುಟುಂಬಗಳು ಬಹಳ ಅತಿ ವೇಗವಾಗಿ ಉನ್ನತಿ ಕಡೆ ಸಾಗುವುದಕ್ಕೆ ಸಾಧ್ಯವಾಗುತ್ತದೆ. ಮೌಡ್ಯ, ದುಶ್ಚಟಗಳಿಂದ ದೂರವಿದ್ದು, ಧಮ್ಮಾ ಮಾರ್ಗದಲ್ಲಿ ಸಾಗಿದರೆ ಮಾತ್ರ ಉನ್ನತ ಸಮುದಾಯ ಕಟ್ಟಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಬಿ.ಆರ್. ಕೃಷ್ಣಕುಮಾರ್, ಗ್ರಾಮ ಅಧ್ಯಕ್ಷ ಸಿ.ಬಾಲರಾಜು, ಮುಖಂಡ ನಾಗರಾಜು, ಪಿಎಸಿಸಿ ಬ್ಯಾಂಕ್ ನಿರ್ದೇಶಕ ಶಿವಕುಮಾರ್, ಬಿಎಸ್‌ಐ ಜಿಲ್ಲಾಧ್ಯಕ್ಷ ಆರ್. ಬಸವರಾಜು, ಜನಶಕ್ತಿ ಸುರೇಶ್, ಯಜಮಾನರಾದ ಸಿ.ಮಹದೇವಯ್ಯ, ವಿ. ರಮೇಶ್, ಶಿವಸ್ವಾಮಿ, ನಿವೃತ್ತ ಮುಖ್ಯಶಿಕ್ಷಕ ಆರ್.ನಾಗರಾಜು, ಸಾಹಿತಿ ಬಿಸಲ್ವಾಡಿ ಸೋಮಶೇಖರ್, ನಿವೃತ್ತ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಉಮೇಶ್ ಕುದರ್, ವಕೀಲರಾದ ಮಲ್ಲಿಕ್ ಯಲಕ್ಕೂರು, ರಾಮಸಮುದ್ರ ಪುಟ್ಟಸ್ವಾಮಿ, ವಿಜಯಕುಮಾರ್, ತಾಲೂಕು ಸರ್ಕಾರಿ ಶಿಕ್ಷಕರ ಸಂಘದ ನಿರ್ದೇಶಕ ನಟರಾಜು, ಪಾಪಣ್ಣ, ಪ್ರಕಾಶ್, ಗ್ರಾಮದ ಸರ್ಕಾರಿ ನೌಕರರು, ನಿವೃತ್ತ ನೌಕರರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

ಪ್ರಾಂಶುಪಾಲ ಮೂರ್ತಿ ಪ್ರಾರ್ಥಿಸಿದರು, ಶಿಕ್ಷಕ ಸಿದ್ದರಾಜು ಸ್ವಾಗತಿಸಿದರು.

ಕಾರ್ಯ ಸಿದ್ದೇಶ್ವರ ಬೆಟ್ಟದಲ್ಲಿ ನೂತನ ರೈತ ಸಂಘ ಉದ್ಘಾಟನೆ

ರಾಸಾಯನಿಕ ಬಳಕೆಯಿಂದ ಆಹಾರ ಧಾನ್ಯಗಳು ವಿಷಮಯ

ರೈತ ಮುಖಂಡ ಹೊನ್ನೂರು ಪ್ರಕಾಶ್ ಕಳವಳ



ಕಾರ್ಯ ಸಿದ್ದೇಶ್ವರ ಬೆಟ್ಟದಲ್ಲಿ ಭಾನುವಾರ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘಟನೆ ಉದ್ಘಾಟಿಸಲಾಯಿತು.

ನಂಜನಗೂಡು, ಜೂ.15– ಹೆಚ್ಚಿನ ರಾಸಾಯನಿಕಗಳ ಬಳಕೆಯಿಂದ ಆಹಾರ ಧಾನ್ಯಗಳು ವಿಷಮಯವಾಗುತ್ತಿದೆ. ರೈತರಾದ ನಾವು ವಿಷದ ಬೆಳೆಗಳನ್ನು ಬೆಳೆಯುವ ಮೂಲಕ ನಮ್ಮ ಮಕ್ಕಳಿಗೆ, ನಮ್ಮ ಕುಟುಂಬಕ್ಕೆ ವಿಷ ನೀಡುತ್ತಿದ್ದೇವೆ ಎಂದು ಹಿರಿಯ ರೈತ ಹೋರಾಟಗಾರ ಹೊನ್ನೂರು ಪ್ರಕಾಶ್ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ದೊಡ್ಡಕವಲಂದೆ ಹೋಬಳಿ ಕಾರ್ಯ ಸಿದ್ದೇಶ್ವರ ಬೆಟ್ಟದಲ್ಲಿ ಭಾನುವಾರ ನೂತನ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘಟನೆಯನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ನಾವು ಬಳಸುವ ಗೊಬ್ಬರ, ಬಿತ್ತನೆ ಬೀಜ, ಬೆಳೆಗಳಿಗೆ ಹಾಕುವ ಔಷಧಿ ಎಲ್ಲವೂ ವಿಷಮಯವಾಗಿದೆ. ಇದರಿಂದಾಗಿ ಆಹಾರ ಪದಾರ್ಥಗಳು ಕಲುಷಿತಗೊಂಡು ಹಲವು ಕಾಯಿಲೆಗೆ ತುತ್ತಾಗುತ್ತಿದ್ದೇವೆ. ಸುಮಾರು 10 ಜನರಲ್ಲಿ ಒಬ್ಬರು ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿದ್ದಾರೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಹೃದಯಾಘಾತ ಪ್ರಕರಣಗಳು ಸರ್ವೇ ಸಾಮಾನ್ಯವಾಗಿದೆ. 5ನೇ ತರಗತಿಗೆ ಹೆಣ್ಣು ಮಕ್ಕಳು ಋತುಮತಿಯಾಗುತ್ತಿದ್ದಾರೆ. ದಂಪತಿಗಳಿಗೆ ಸರಿಯಾದ ಸಮಯದಲ್ಲಿ ಮಕ್ಕಳಾಗದೆ ಬಂಜೆತನದಿಂದ ಬಳಲುತ್ತಿದ್ದಾರೆ. ಆದ್ದರಿಂದ ರೈತರು ಮುಂದಿನ ತಲೆಮಾರನ್ನು ಆರೋಗ್ಯಕರ ಸಮಾಜವನ್ನಾಗಿ ರೂಪಿಸುವ ಸಲುವಾಗಿ ಈಗಿನಿಂದಲೇ ಎಚ್ಚೆತ್ತುಕೊಂಡು ಸಾವಯವ ಬೇಸಾಯ ಪದ್ಧತಿ ಅನುಸರಿಸಿ ರಾಸಾಯನಿಕ ಮುಕ್ತ ಕೃಷಿಯಲ್ಲಿ ತೊಡಗಬೇಕು ಎಂದರು.

ರೈತ ಮಹಿಳೆಯರು ಹಕ್ಕುಗಳನ್ನು, ಮೂಲಭೂತ ಸೌಕರ್ಯಗಳನ್ನು ಪಡೆದುಕೊಳ್ಳಲು ರಾಜಕಾರಣಿಗಳ ಮುಂದೆ ಅಧಿಕಾರಿಗಳ ಮುಂದೆ ಕೈಕಟ್ಟಿ ನಿಲ್ಲಬೇಕಿಲ್ಲ. ಪೊರಕೆ ಚಳುವಳಿ ಮೂಲಕ ನಮ್ಮ ಹಕ್ಕುಗಳನ್ನು ಪಡೆಯಲು ಮುಂದಾಗಬೇಕು. ಈ ನಿಟ್ಟಿನಲ್ಲಿ ರೈತರು ಪ್ರಜ್ಞಾವಂತರಾಗಿ ಮತವನ್ನು ಹಣಕ್ಕಾಗಿ ಮಾರಿಕೊಳ್ಳದೆ ಉತ್ತಮ ರಾಜಕಾರಣಿಗಳನ್ನು ಆರಿಸಬೇಕು ಎಂದು ಕರೆ ನೀಡಿದರು.

ಸಂಘದ ನೂತನ ರಾಜ್ಯಾಧ್ಯಕ್ಷ ಹಾಡ್ಯ ರವಿ ಮಾತನಾಡಿ, ಕಬ್ಬು ಬೆಳೆಗಾರರ ಸಂಘದ ಹಿರಿಯ ಹೋರಾಟಗಾರರ ಭ್ರಷ್ಟಾಚಾರ ಮತ್ತು ಮೋಸದಿಂದಾಗಿ ಬೇಸತ್ತು ರೈತರಿಗೆ ಸೇವೆ ಮಾಡುವ ಸಲುವಾಗಿ ಈ ಹೊಸ ಸಂಘಟನೆಯನ್ನು ಸ್ಥಾಪನೆ ಮಾಡಲಾಗುತ್ತಿದೆ ನಮ್ಮ ಸಂಘಟನೆ ಯಾವುದೇ ಭ್ರಷ್ಟಾಚಾರಕ್ಕೆ ಆಸ್ಪದ ನೀಡದೆ ಪ್ರಾಮಾಣಿಕವಾಗಿ ರೈತರ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡಲಿದೆ ಎಂದರು.

ಈ ವೇಳೆ ಸಂಘಟನೆ ಗೌರವಾಧ್ಯಕ್ಷ ದೇವಿರಮ್ಮನಹಳ್ಳಿ ನಂದೀಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಸೌಮ್ಯರಾಜ್, ರಾಜ್ಯ ಉಪಾಧ್ಯಕ್ಷರಾಗಿ ಅಂಕನಹಳ್ಳಿ ತಿಮ್ಮಯ್ಯ, ತಾಲೂಕು ಅಧ್ಯಕ್ಷರಾಗಿ ಅಂಬಳೆ ಮಹದೇವಸ್ವಾಮಿ, ಮುದ್ದಳ್ಳಿ ಚಿಕ್ಕಸ್ವಾಮಿ, ಜಿಲ್ಲಾಧ್ಯಕ್ಷರಾಗಿ ಮಂಜೇಶ್, ಮಹೇಶ್, ಕುಮಾರ್, ಎಚಗುಂಡ್ಲಾ ಮಹೇಶ್, ದೊರೆಸ್ವಾಮಿ, ಅಂಡುವಿನ ಹಳ್ಳಿ ಮರಿಸ್ವಾಮಿ, ಮಲ್ಲೂರು ವರ್ಷ, ಅರಳಿಕಟ್ಟೆ ಕುಮಾರ್, ಪ್ರವೀಣ್ ಮಾಲೂರು ಕುಮಾರ್, ರವಿಕುಮಾರ್, ಸ್ವಾಮಿ ಸೇರಿದಂತೆ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳ ಪದಾಧಿಕಾರಿಗಳು ಹಾಜರಿದ್ದರು.

ದುಡಿಮೆಗೆ ತಕ್ಕ ಕೂಲಿ ನೀಡುತ್ತಿಲ್ಲವೆಂದು ಆರೋಪಿಸಿ

ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರಿಂದ ಪ್ರತಿಭಟನೆ



ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆ, ಜೂ.15– ಶುಂಠಿ ಕಾರ್ಮಿಕರಿಗೆ ದುಡಿಮೆಗೆ ತಕ್ಕ ಕೂಲಿ ನೀಡುತ್ತಿಲ್ಲವೆಂದು ಆರೋಪಿಸಿ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದಿಂದ ತಾಲೂಕಿನ ಬೊಪ್ಪನಹಳ್ಳಿ ಗೇಟ್ ಬಳಿಯ ಸಂಘದ ಆವರಣದ ಬಳಿ ಪ್ರತಿಭಟನೆ ನಡೆಸಲಾಯಿತು.

ಕೋಟೆ, ಸರಗೂರು, ಹುಣಸೂರು ತಾಲೂಕು ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷ ಮಗ್ಗೆ ಸುಂದರ ಮಾತನಾಡಿ, ತಾಲೂಕಿನಲ್ಲಿ ಅತೀ ಹೆಚ್ಚಾಗಿ ಶುಂಠಿ ಬೆಳೆ ಬೆಳೆಯುತ್ತಿದ್ದು, ಇದನ್ನು ಅವಲಂಬಿಸಿ ಸಾವಿರಾರು ಕೂಲಿ ಕಾರ್ಮಿಕರು ಜೀವನ ನಡೆಸುತ್ತಿದ್ದಾರೆ. ಶುಂಠಿ ಖರೀದಿದಾರರು, ಶುಂಠಿ ಕೀಳುವ ಕೂಲಿ ಕಾರ್ಮಿಕರಿಗೆ ಕಡಿಮೆ ಕೂಲಿ ನೀಡುತ್ತಿರುವುದರಿಂದ ಕುಟುಂಬ ನಿರ್ವಹಣೆಗೆ ಸಂಕಷ್ಟ ಎದುರಾಗಿದೆ.

ಒಂದು ಮೂಟೆ ಶುಂಠಿ ಕೀಳಲು 150 ರೂ. ನಿಗಧಿ ಮಾಡಲಾಗಿದ್ದು, 20 ಜನ ಕೂಲಿ ಕಾರ್ಮಿಕರು ಒಂದು ದಿನಕ್ಕೆ 70 ರಿಂದ 80 ಮೂಟೆ ಶುಂಠಿ ಕೀಳಬಹುದಾಗಿದೆ. ವಾಹನ ಇತರೆ ಖರ್ಚು ಕಳೆದು ಕೂಲಿ ಕಾರ್ಮಿಕರಿಗೆ ಕಡಿಮೆ ಕೂಲಿ ಸಿಗುತ್ತಿದೆ. ಇದರಿಂದ ಕೂಲಿ ಕಾರ್ಮಿಕರ ಜೀವನ ನಿರ್ವಹಣೆ ತೊಂದರೆ ಉಂಟಾಗಿದೆ. ಶುಂಠಿ ಖರೀದಿದಾರರಿಗೆ ಕಳೆದ ಐದಾರು ತಿಂಗಳಿಂದ ಹೆಚ್ಚುವರಿ ಕೂಲಿ ನೀಡುವಂತೆ ಒತ್ತಾಯಿಸಿದ್ದರೂ, ಕೂಡ ಶುಂಠಿ ಖರೀದಿದಾರರು ನಮ್ಮ ಮನವಿಗೆ ಸ್ಪಂದಿಸಿಲ್ಲ. ಹಾಗಾಗಿ ಹೆಚ್ಚಿನ ಕೂಡಲಿ ನೀಡುವವರೆಗೂ ಶುಂಠಿ ಕೆಲಸಕ್ಕೆ ಹೋಗುವುದಿಲ್ಲ. ಈಗ ನೀಡುತ್ತಿರುವ 150 ರೂ.ಗಳಿಂದ 200ರೂ. ನೀಡಬೇಕು ಎಂದು ಮನವಿ ಮಾಡಿದರು.

ತಾಲೂಕಿನಲ್ಲಿ ಶುಂಠಿ ಬೆಳೆಯುವ ರೈತರಿಗಾಗಲೀ, ಶ್ರಮಜೀವಿ ಕೂಲಿ ಕಾರ್ಮಿಕರಿಗಿಂತ ಖರೀದಿದಾರರಿಗೆ ಹೆಚ್ಚಿನ ಲಾಭವಾಗಿದೆ. ಶುಂಠಿ ಖರೀದಿದಾರರು ನಮ್ಮ ಮನವಿಗೆ ಸ್ಪಂದಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ತಾಲೂಕು ಕಚೇರಿ ಮುಂದೆ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಗೌರವ ಅಧ್ಯಕ್ಷ ಕೆ.ನಾಗರಾಜು, ಉಪಾಧ್ಯಕ್ಷರಾದ ರಾಮಕೃಷ್ಣ, ಬೆಟ್ಟ ನಾಯಕ, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಸಹ ಕಾರ್ಯದರ್ಶಿ ಸೋಮೇಶ್, ಖಜಾಂಚಿ ಮರುಸಿದ್ದಯ್ಯ, ಸದಸ್ಯರಾದ ರಾಜು, ಬೆಟ್ಟ ನಾಯಕ, ಮಾದೇವ ನಾಯಕ, ತೇಜು ಕುಮಾರ್, ಚಿಕ್ಕಣ್ಣ, ದುಂಡುರಾಜ್ ಇನ್ನಿತರರಿದ್ದರು.

ಹಳೇ ವಿದ್ಯಾರ್ಥಿಗಳಿಂದ ಶಿಕ್ಷಕರಿಗೆ ಗುರುವಂದನೆ



ಶಿಕ್ಷಕ ದಂಪತಿಗಳಾದ ಉಷಾ–ನಾಗೇಂದ್ರಪ್ಪ, ರಾಧಾಮಣಿ–ರಾಮಕೃಷ್ಣ ಅವರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಜೂ.15– ಗುರುಗಳಿಂದ ಕಲಿತು ಉನ್ನತ ಸ್ಥಾನಕ್ಕೇರಿ ಆನಂತರ ಅದನ್ನು ನೆನೆದು ಗೌರವಿಸುವ ವಿದ್ಯಾರ್ಥಿಗಳ ಗುಣಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ನಿವೃತ ಹಳೆಯ ಶಿಕ್ಷಕ ಹೆಚ್.ಎಸ್.ನಾಗೇಂದ್ರ ಹೇಳಿದರು.

ಪಟ್ಟಣದ ವಿನಾಯಕ ಬಡಾವಣೆಯ ತಮ್ಮ ನಿವಾಸದಲ್ಲಿ ಹಳೆಯ ವಿದ್ಯಾರ್ಥಿಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ದಶಕಗಳ ಹಿಂದೆ ಪುಟ್ಟ ಮಕ್ಕಳಾಗಿ ಕಲಿತವರು ಇಂದು ಸಮಾಜದ ಮುಖ್ಯ ವಾಹಿನಿಗೆ ಬಂದಿರುವುದು ನಮಗೆ ಹೆಮ್ಮೆ ತರುವ ವಿಚಾರ ಎಂದರು.

ಸರ್ಕಾರಿ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಸಂಕಷ್ಟ ಮತ್ತು ಸಮಸ್ಯೆ ಅರ್ಥವಾಗಲಿದ್ದು, ಅಂತಹವರಿಂದ ಕಲಿಯುವುದು ಬಹಳಷ್ಟಿದೆ. ಶಿಕ್ಷಣದಿಂದ ಎಲ್ಲವನ್ನು ಸಾಧಿಸಲು ಸಾಧ್ಯ ಎಂಬುದಕ್ಕೆ ಇಂದು ನಮ್ಮ ವಿದ್ಯಾರ್ಥಿಗಳು ಮನೆಗೆ ಬಂದು ಗೌರವಿಸಿ ಪುರಸ್ಕರಿಸುತ್ತಿರುವುದೇ ಸಾಕ್ಷಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಲಿಸಿದ ಗುರುಗಳಿಗೆ ಗೌರವ ನೀಡುವುದರ ಜೊತೆಗೆ ಕಲಿತ ಶಾಲೆಯನ್ನು ವಿದ್ಯಾರ್ಥಿಗಳು ಮರೆಯಬಾರದು ಎಂದ ಅವರು, ಬಾಲ್ಯದಲ್ಲಿ ಓದಿದ ಶಾಲೆಗಳ ಏಳಿಗೆಗೆ ಸಹಾಯ ನೀಡಿ ಋಣ ತೀರಿಸಬೇಕೆಂದು ಸಲಹೆ ನೀಡಿದರು.

ಹಳೆಯ ವಿದ್ಯಾರ್ಥಿಗಳಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಸಾಲಿಗ್ರಾಮ ತಾಲೂಕಿನ ಹೊಸೂರು ಶ್ರೀರಾಮ ಪ್ರೌಢಶಾಲೆ ನಿವೃತ್ತ ಶಿಕ್ಷಕ ಕೆ.ಎಸ್.ರಾಮಕೃಷ್ಣ ಕಣ್ಣಮುಂದೆ ಕಲಿತು ಆಟ ಪಾಠಗಳಲ್ಲಿ ತೊಡಗುತ್ತಿದ್ದ ನಮ್ಮ ಶಿಷ್ಯರು ನಮ್ಮನ್ನು ಗೌರವಿಸಿದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಭಾವುಕರಾಗಿ ನುಡಿದರು.

ಈ ವೇಳೆ ಹಳೇ ವಿದ್ಯಾರ್ಥಿಗಳು ಶಿಕ್ಷಕ ದಂಪತಿಗಳಾದ ಉಷಾ ನಾಗೇಂದ್ರಪ್ಪ ಮತ್ತು ರಾಧಾಮಣಿ ರಾಮಕೃಷ್ಣ ಅವರುಗಳಿಗೆ ಫಲಾ ತಾಂಬೂಲ ನೀಡಿ ಗುರುವಂದನೆ ಸಲ್ಲಿಸಿದರು. ಹಳೆಯ ವಿದ್ಯಾರ್ಥಿಗಳಾದ, ಡಿ.ಜೆ.ಸವಿತಾ, ಹೆಚ್.ಪಿ.ಭಾಗ್ಯ, ಸಿ.ಕೆ.ರಾಧ, ಆರ್.ಮುಕುಂದ, ಆರ್.ಶಿವಕುಮಾರ್, ಕೆ.ವಿ.ಶ್ರೀಧರ್, ಕುಪ್ಪೆಮಹದೇವಸ್ವಾಮಿ ಇದ್ದರು.

ಅತಿಥಿ ಉಪನ್ಯಾಸಕರಿಗೆ 10 ತಿಂಗಳಿಂದ ಸಂಬಳ ನೀಡದ ಸರ್ಕಾರ

ದಲಿತ ಸಂಘರ್ಷ ಸಮಿತಿ ತೀವ್ರ ಖಂಡನೆ



ಸುದ್ದಿಗೋಷ್ಠಿಯಲ್ಲಿ ಆಲಗೂಡು ಶಿವಕುಮಾರ್ ಮಾತನಾಡಿದರು.

ತಿ.ನರಸೀಪುರ, ಜೂ.15– ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಳೆದ ಏಳೆಂಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ 2024–25ರ ಶೈಕ್ಷಣಿಕ ಸಾಲಿನ 10 ತಿಂಗಳ ಸಂಬಳ ನೀಡದೆ ದುಡಿಸಿಕೊಂಡಿರುವ ಸರ್ಕಾರದ ನಡೆಯನ್ನು ದಲಿತ ಸಂಘರ್ಷ ಸಮಿತಿ ತೀವ್ರವಾಗಿ ಖಂಡಿಸುತ್ತದೆ ಎಂದು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ತಿಳಿಸಿದರು.

ಪಟ್ಟಣದ ಸರ್ಕಾರಿ ಅತಿಥಿ ಗೃಹದಲ್ಲಿ ಅತಿಥಿ ಉಪನ್ಯಾಸಕರೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 6 ವರ್ಷಗಳ ಹಿಂದೆ ಮೆರಿಟ್ ಆಧಾರದ ಮೇಲೆ ಅತಿಥಿ ಉಪನ್ಯಾಸಕರಾಗಿ ಆಯ್ಕೆಯಾಗಿ ಉತ್ತಮ ಫಲಿತಾಂಶದೊಂದಿಗೆ ಕೆಲಸ ನಿರ್ವಹಿಸುತ್ತಿರುವ ವಿವಿಧ ವಿಷಯಗಳ 6 ಮಂದಿ ಉಪನ್ಯಾಸಕರು ಕಳೆದ ಒಂದು ವರ್ಷದಿಂದ ತಮ್ಮ ದುಡಿಮೆಯ ಸಂಬಳಕ್ಕಾಗಿ ಸರ್ಕಾರದ ಕಚೇರಿಗಳಿಗೆ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಸ್ಥಳೀಯ ಶಾಸಕರೂ ಆದ ಡಾ.ಹೆಚ್.ಸಿ.ಮಹದೇವಪ್ಪ ಅವರ ಮನೆಗೆ ಹತ್ತಾರು ಬಾರಿ ಅಲೆಯುತ್ತಿದ್ದರೂ ಅಧಿಕಾರಿಗಳಾಗಲಿ, ಸಚಿವರಾಗಲಿ ಇವರ ಕಷ್ಟಗಳಿಗೆ ಕಿವಿಗೊಡದಿರುವುದು ವಿಷಾದಕರ ಸಂಗತಿ ಎಂದು ತಿಳಿಸಿದರು.

ವಿದ್ಯಾವಂತ ನಿರುದ್ಯೋಗಿಗಳಾಗಿರುವ ಇವರು ತಮ್ಮ ಜೀವನ ನಿರ್ವಹಣೆಗಾಗಿ ವಾರಕ್ಕೆ 20 ಗಂಟೆಯಂತೆ ತಿಂಗಳಿಗೆ 80 ಗಂಟೆಗಳ ಕಾಲ ಸರ್ಕಾರ ನೀಡುವ 12 ಸಾವಿರ ಗೌರವಧನ ನಂಬಿ ಕೆಲಸ ಮಾಡುತ್ತಿದ್ದರೂ ಕಳೆದ ಶೈಕ್ಷಣಿಕ ಸಾಲಿನ 10 ತಿಂಗಳ ಸಂಬಳ ನೀಡದೆ ಜೀತದಾಳುಗಳಂತೆ ದುಡಿಸಿಕೊಂಡಿರುವುದು ಅಮಾನವೀಯ. ಕೂಡಲೇ ಸಂಕಷ್ಟದಲ್ಲಿರುವ ಇವರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಸರ್ಕಾರದ ವಿರುದ್ಧ ಅತಿಥಿ ಉಪನ್ಯಾಸಕರು, ವಿದ್ಯಾರ್ಥಿಗಳ ಜೊತೆ ಪ್ರತಿಭಟನೆ ಅನಿವಾರ್ಯವಾಗಲಿದೆ ಎಂದರು.

ಅತಿಥಿ ಉಪನ್ಯಾಸಕ ಅಂಜನ್ ಕುಮಾರ್ ಮಾತನಾಡಿ, ಕಳೆದ 6 ವರ್ಷಗಳಿಂದ ವಿವಿಧ ವಿಷಯಗಳ 6 ಜನ ಉಪನ್ಯಾಸಕರು ಕೆಲಸ ಮಾಡುತ್ತಿದ್ದು, ನಮಗೆ ಸರ್ಕಾರದಿಂದಲೇ ನೇರವಾಗಿ ಸಂಬಳ ಬಿಡುಗಡೆ ಆಗುತ್ತಿದ್ದು, ಕಳೆದ ಶೈಕ್ಷಣಿಕ ಸಾಲಿನಲ್ಲಿ ನಮಗೆ ಸಂಬಳ ನೀಡದೆ 10 ತಿಂಗಳು ಜೀತದಾಳುಗಳಾಗಿ ದುಡಿಸಿಕೊಂಡು ಈಗ ಬೀದಿಗೆ ತಳ್ಳಿರುವುದರಿಂದ ನಮಗೆ ದಿಕ್ಕು ತೋಚದಂತಾಗಿದೆ. ದುಡಿಮೆಯ ಸಂಬಳ ಕೇಳಿ ಪ್ರಾಂಶುಪಾಲರು, ಉಪನಿರ್ದೇಶಕರ ಕಚೇರಿ ಹಾಗೂ ಸಂಬಂಧಿಸಿದ ಸಚಿವರ ಮನೆ ಬಾಗಿಲಿಗೆ ಅಲೆದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ತಮ್ಮ ಅಳಲು ತೋಡಿಕೊಂಡರು.

ಸುದ್ದಿಗೋಷ್ಠಿಯಲ್ಲಿ ಅತಿಥಿ ಉಪನ್ಯಾಸಕರಾದ ರಾಜಮ್ಮ, ಕವಿತಾ, ಪೋಷಕರಾದ ಮಹಾದೇವಯ್ಯ ಉಪಸ್ಥಿತರಿದ್ದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನಿಂದ ಉತ್ತಮ ಸೇವೆ



ತರಬೇತಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.


ಸರಗೂರು, ಜೂ.15– ಕೌಶಲ್ಯಾಭಿವೃದ್ಧಿ ತರಬೇತಿ ಮೂಲಕ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಉತ್ತಮವಾಗಿ ಸೇವೆ ಸಲ್ಲಿಸುತ್ತಿದೆ ಎಂದು ಕೌಶಲ್ಯಾಭಿವೃದ್ಧಿ ಅಧಿಕಾರಿ ನಾರಾಯಣಮೂರ್ತಿ ತಿಳಿಸಿದರು.

ತಾಲೂಕಿನ ಕೆಂಚನಹಳ್ಳಿ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ ಎಲೆಕ್ಟ್ರಿಷಿಯನ್ ಹಾಗೂ ಗೃಹೋಪಯೋಗಿ ವಸ್ತುಗಳ ರಿಪೇರಿ ಮತ್ತು ಇಕೋ ಟೂರಿಸಂ ಹಾಸ್ಪಿಟಾಲಿಟಿ ಮ್ಯಾನೇಜ್ಮೆಂಟ್ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೌಶಲ್ಯ ಶಿಕ್ಷಣಕ್ಕಾಗಿ ಸರ್ಕಾರ ಹಲವಾರು ರೀತಿಯ ಸಹಕಾರ ನೀಡಲಾಗುತ್ತಿದ್ದು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಕೌಶಲ್ಯ ತರಬೇತಿ ನೀಡುವ ಮೂಲಕ ಯುವಕ ಯುವತಿಯರಿಗೆ ಮತ್ತು ಸಮುದಾಯದ ಅಭಿವೃದ್ಧಿಗಾಗಿ ಸಂಸ್ಥೆಯು ಉತ್ತಮ ಸೇವೆ ಸಲ್ಲಿಸುತ್ತಿರುವುದು ಸಂತಸದ ವಿಷಯ. ಇದನ್ನು ಎಲ್ಲಾ ಯುವಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ವ್ಯವಸ್ಥಾಪಕ ನಾಯಕ್ ಮಾತನಾಡಿ, ನಮ್ಮ ಸಂಸ್ಥೆಯಿಂದ 21 ತರಹದ ಕೌಶಲ್ಯ ತರಬೇತಿಗಳನ್ನು ನೀಡುತ್ತಿದ್ದು, 20 ಜಿಲ್ಲೆಗಳಿಂದ ಬಂದು ತರಬೇತಿ ಪಡೆಯುತ್ತಿದ್ದಾರೆ. ಇದರಿಂದ ಉದ್ಯೋಗ ಬಯಸುತ್ತಿರುವ, ಉದ್ಯೋಗ ಮಾಡುವ ಯುವಕರಿಗೆ ಸಹಾಯವಾಗುತ್ತಿದೆ. ತರಬೇತಿ ಮುಗಿಸಿದ ಅಭ್ಯರ್ಥಿಗಳು ತಮ್ಮ ಭವಿಷ್ಯ ಉಜ್ವಲಗೊಳಿಸಿಕೊಳ್ಳುವ ಮೂಲಕ ತಮ್ಮ ಕುಟುಂಬವನ್ನು ಉತ್ತಮವಾಗಿ ನಡೆಸಿಕೊಂಡು ಹೋಗಬೇಕು. ಇದರಿಂದ ನೀವು ತರಬೇತಿ ಪಡೆದು ಉದ್ಯೋಗ ಮಾಡುವ ಮೂಲಕ ಆರ್ಥಿಕವಾಗಿ ಸಧೃಢವಾಗಲು ಸಾಧ್ಯವಾಗುತ್ತದೆ ಎಂದರು. ಇದೇ ವೇಳೆ ತರಬೇತಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಹಾಯಕ ನಿಯಂತ್ರಕರಾದ ಸವಿತಾ ಐ.ಎಂ, ಕೆಂಚನಹಳ್ಳಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಸ್ವಾಮಿ, ನ್ಯಾಚುರಾಲಿಸ್ಟ್ ಮಂಜು, ಎಲೆಕ್ಟ್ರಿಷಿಯನ್ ತರಬೇತಿ ಶಿಕ್ಷಕ ವಿ.ಪ್ರಮೋದ, ಆರ್‌ಎಲ್‌ಸಿ ವ್ಯವಸ್ಥಾಪಕ ಚಿನ್ನಮಹದೇವ, ಪ್ಲೇಸ್ಮೆಂಟ್ ವ್ಯವಸ್ಥಾಪಕ ರವಿಕುಮಾರ್ ಪಿ. ಜಿ, ಸಿಬ್ಬಂದಿಗಳಾದ ಶೋಭಾ, ಶಿವಲಿಂಗನಾಯಕ, ಉಮಾ ಕೀರ್ತಿ ಇತರರಿದ್ದರು.

ಮಳೆ ನಡುವೆ ಕೆರೆಯಲ್ಲಿ ಕುಳಿತು ವಿರಮಿಸಿದ ಹುಲಿ



ಹುಣಸೂರು, ಜೂ.15– ನಾಗರಹೊಳೆ ಉದ್ಯಾನದಲ್ಲಿ ನಿತ್ಯ ಹುಲಿಗಳ ದರ್ಶನವಾಗುತ್ತಿದ್ದು, ಸಫಾರಿಗೆ ಆಗಮಿಸುತ್ತಿರುವ ಪ್ರವಾಸಿಗರು ವನ್ಯಪ್ರಾಣಿಗಳ ದರ್ಶನದಿಂದ ಖುಷಿಯಾಗಿದ್ದಾರೆ.

ಉದ್ಯಾನವನದ ಕಬಿನಿ ಹಿನ್ನೀರಿನ ದಮ್ಮನಕಟ್ಟೆ ರೇಂಜ್‌ನ ಮಗ್ಗೆ ಈಪಿಟಿ ಬಳಿಯ ಮೊದಲನೇ ಕೆರೆಯಲ್ಲಿ ಹುಲಿಯೊಂದು ತುಂತುರು ಮಳೆ ನಡುವೆಯೂ ನೀರು ಕುಡಿದು ಕೆರೆಯಲ್ಲೇ ವಿರಮಿಸುತ್ತಿರುವ ದೃಶ್ಯವನ್ನು ಸಫಾರಿಗೆ ಆಗಮಿಸಿದ್ದ ವನ್ಯಪ್ರಿಯರು ತಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿದಿದ್ದಾರೆ. ಈ ಹುಲಿಯು ನೀರು ಕುಡಿಯಲು ಬರುವ ಜಿಂಕೆಯನ್ನು ಬೇಟೆಯಾಡಲು ಸುಮಾರು 2 ಗಂಟೆಕಾಲ ಕೆರೆಯಲ್ಲೇ ಹೊಂಚು ಹಾಕಿ ಕುಳಿತಿತ್ತು. ಪ್ರವಾಸಿಗರ ಸಫಾರಿ ವಾಹನ ಶಬ್ದಕ್ಕೂ ಜಗ್ಗದೆ ಬೇಟೆಗಾಗಿ ಹೊಂಚು ಹಾಕುತ್ತಾ ಕಾದು ಕುಳಿತ ಅಪರೂಪದ ದೃಶ್ಯವನ್ನು ಪ್ರವಾಸಿಗ ಅನುಪ್ ರವಿ ಶಂಕರ್ ಸೆರೆ ಹಿಡಿದಿದ್ದಾರೆ.

ಆಹಾರ ಪದ್ಧತಿಯಿಂದ ದೇಹ, ಆರೋಗ್ಯದ ಸಮತೋಲನ

ಅಪೋಲೋ ಆಸ್ಪತ್ರೆ ಆರ್ಥೋ ವಿಭಾಗದ ಡಾ.ಬಿ.ಸಿಂಧು



ಹುಣಸೂರಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಹುಣಸೂರು, ಜೂ.15– ನಿಮ್ಮ ಮೂಳೆಗಳು ಜೀವನಪೂರ್ತಿ ಸದೃಢವಾಗಿರಬೇಕಾದರೆ ಆಹಾರ ಪದ್ಧತಿ ಸರಿಯಾಗಿರಬೇಕು. ಆಗ ಮಾತ್ರ ನಿಮ್ಮ ದೇಹ, ಆರೋಗ್ಯದ ಸಮತೋಲನ ಕಾಪಾಡಿಕೊಳ್ಳಲು ಸಾಧ್ಯ ಎಂದು ಅಪೋಲೋ ಆಸ್ಪತ್ರೆ ಆರ್ಥೋ ವಿಭಾಗದ ಡಾ.ಬಿ.ಸಿಂಧು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಕರ್ತರು ಮತ್ತು ಅವರ ಕುಟುಂಬದವರಿಗೆ ಹಮ್ಮಿಕೊಂಡಿದ್ದ ಆರೋಗ್ಯ ಶಿಬಿರದಲ್ಲಿ ಮಾತನಾಡಿದ ಅವರು, ನಾವು ಸರಿಯಾದ ಆಹಾರ ಪದ್ಧತಿ ಅನುಸರಿಸದಿದ್ದರೆ ಆಸ್ಟಿಯೊಪೊರೋಸಿಸ್ ಸಮಸ್ಯೆಯಿಂದ ಮೂಳೆಗಳು ಪೊಳ್ಳಾಗಲಿವೆ. ಆದ್ದರಿಂದ 40 ವರ್ಷ ದಾಟುವ ಮುನ್ನ ಬಿಎಂಡಿ ಪರೀಕ್ಷೆ ಅಗತ್ಯವಿದೆ ಎಂದರು.

ಪ್ರತಿಯೊಬ್ಬರೂ ಬಿಎಂಡಿ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ನಿಮ್ಮ ಮೂಳೆಗಳ ದುಸ್ಥಿತಿ ಬಗ್ಗೆ ತಿಳಿಯಲಿದೆ. ನಿಮ್ಮ ಮೂಳೆಗಳು ಟೊಳ್ಳಾಗಬಾರದು ಎಂದರೆ ಫಾಸ್ಟ್‌ಫುಡ್, ತಂಬಾಕು, ಗುಟುಕ, ಧೂಮಪಾನ, ಮದ್ಯಪಾನದಂತಹ ದುಶ್ಚಟಗಳಿಂದ ದೂರವಿರಬೇಕು. ಆಗ ಮಾತ್ರ ಮೂಳೆಗಳು ಸವೆಯುವ, ಬೆಣ್ಣೆಯಂತೆ ಮೃದು ಆಗುವ ಸಾಂದ್ರತೆ ಕಡಿಮೆಯಾಗಲಿದೆ ಎಂದರು.

ನೀವು ನಿತ್ಯ ಸೇವಿಸುವ ಆಹಾರದಲ್ಲಿ ಮುದ್ದೆ, ರೈಸ್, ಚಪಾತಿ, ಮೊಟ್ಟೆ, ಹಾಲು, ಮೊಟ್ಟೆ, ನೀರು, ಕ್ಯಾಲ್ಸಿಯಂ ಫ್ರೂಟ್ಸ್, ತರಕಾರಿಗಳ ಸೇವಿಸುವುದರ ಜೊತೆಗೆ ನಿರಂತರ ವ್ಯಾಯಾಮ, ನಡಿಗೆಯೊಂದಿಗೆ ನಿಮ್ಮ ದೇಹದ ತೂಕ ನಿತ್ಯ ಮೂಳೆಗಳ ಮೇಲೆ ಇದ್ದರೆ ಉತ್ತಮ ಆರೋಗ್ಯ ನಿಮ್ಮದಾಗಲಿದೆ ಎಂದರು.

ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿದರು. ಶಿಬಿರದಲ್ಲಿ ಹುಣಸೂರು ಅಪೋಲೊ ಆಸ್ಪತ್ರೆ ವ್ಯವಸ್ಥಾಪಕ ಕೇಶವ್, ಸುಮಾ, ಸಂಘದ ಕಾರ್ಯದರ್ಶಿ ಮಹದೇವ್, ನಗರ ಕಾರ್ಯದರ್ಶಿ ಶಂಕರ್, ಉಪಾಧ್ಯಕ್ಷ ಚಲುವರಾಜ್, ಖಜಾಂಚಿ ಯೋಗೇಶ್, ಹೆಚ್.ಕೆ.ಕೃಷ್ಣ ಕೆ.ಕೃಷ್ಣ ನಟರಾಜ್, ಸಂಪತ್, ಯೋಗಾನಂದ್, ಮಹದೇವ್, ಜಯರಾಂ, ರಫೀಕ್ ಇದ್ದರು.




ಚೆಕ್ ವಿತರಣೆ

ತಿ.ನರಸೀಪುರ ಪುರಸಭಾ ವ್ಯಾಪ್ತಿಯ 4ನೇ ವಾರ್ಡ್‌ನಲ್ಲಿ ಇತ್ತೀಚಿಗೆ ನಾಯಿ ಕಡಿತದಿಂದ ಗಾಯಗೊಂಡಿದ್ದ ಮರಮ್ಮ ಮತ್ತು ನಾಗಮ್ಮ ಅವರಿಗೆ ಪುರಸಭೆಯಿಂದ ಮಂಜೂರಾದ ತಲಾ 5 ಸಾವಿರ ರೂ. ಗಳ ಚೆಕ್‌ಗಳನ್ನು ಪುರಸಭಾ ಸದಸ್ಯ ಎಲ್.ಮಂಜುನಾಥ್ ವಿತರಿಸಿದರು. ಈ ವೇಳೆ ಡಾ.ಬಾಬು ಜಗಜೀವನ್ ರಾಂ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಇದ್ದರು.

ಸ್ಥಳೀಯ ಸಂಸ್ಥೆ ಚುನಾವಣೆಗೆ ಪಕ್ಷ ಸಂಘಟನೆ

ಮೈಸೂರು ಗ್ರಾಮಾಂತರ ಬಿಜೆಪಿ ನೂತನ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ



ಮೈಸೂರು ಗ್ರಾಮಾಂತರ ಬಿಜೆಪಿ ನೂತನ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜೂ.15– ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸಿ ರಾಜ್ಯ ಮತ್ತು ರಾಷ್ಟ್ರ ಚುನಾವಣೆಗಳಿಗೆ ಅನುಕೂಲವಾಗುವಂತೆ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗೆ ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲಾಗುವುದು ಎಂದು ಮೈಸೂರು ಗ್ರಾಮಾಂತರ ಬಿಜೆಪಿ ನೂತನ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ತಿಳಿಸಿದರು.

ತಿ.ನರಸೀಪುರ ಪುರಸಭಾ ಸದಸ್ಯ, ತಾಲೂಕು ವೀರಶೈವ ಮಹಾಸಭಾ ಉಪಾಧ್ಯಕ್ಷ ಎಸ್.ಕೆ.ಕಿರಣ್ ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಪಕ್ಷ ಸಂಘಟಿಸಿ ಮುಂಬರುವ ಜಿಪಂ, ತಾಪಂ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಪ್ರಮಾಣದ ಗೆಲ್ಲಿಸಲು ಶ್ರಮಿಸಲಾಗುವುದು ಎಂದರು.

ನಾನು ಮೂಲತಃ ಬಿಜೆಪಿಗ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ದಿ.ಆರ್.ಧ್ರುವನಾರಾಯಣ ಅವರ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದೆ. ನಂತರ 2018ರ ನಂಜನಗೂಡು ಉಪಚುನಾವಣೆ ವೇಳೆ ವಿ.ಶ್ರೀನಿವಾಸ ಪ್ರಸಾದ್ ಅವರ ಮೂಲಕ ಮತ್ತೆ ಬಿಜೆಪಿಗೆ ವಾಪಸ್ಸಾಗಿ ವಿಧಾನಸಭಾ ಸೇರಿದಂತೆ ಹಲವು ಚುನಾವಣೆಗಳಲ್ಲಿ ಪಕ್ಷದ ಪರ ಕೆಲಸ ಮಾಡಿದ್ದೇನೆ. ವಿ.ಶ್ರೀನಿವಾಸ್ ಪ್ರಸಾದ್ ಅವರಿಗೆ ನನ್ನನ್ನು ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷರನ್ನಾಗಿ ಮಾಡಬೇಕು ಎಂಬ ಮಹದಾಸೆ ಇತ್ತು. ಅದಕ್ಕಾಗಿ ಅವರು ನನ್ನ ಹೆಸರನ್ನು ಶಿಫಾರಸ್ಸು ಮಾಡಿದ್ದರು. ಇದೀಗ ಅವರ ಆಸೆ ಈಡೇರಿದೆ. ಅಲ್ಲದೇ ನನ್ನ ಸೇವೆ ಗಮನಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ನನಗೆ ಜಿಲ್ಲಾಧ್ಯಕ್ಷ ಸ್ಥಾನ ನೀಡಿದ್ದಾರೆ. ಪಕ್ಷದ ಎಲ್ಲಾ ಹಿರಿಯ ಮುಖಂಡರು, ನಾಯಕರ ಸಲಹೆಗಳನ್ನು ಸ್ವೀಕರಿಸಿ ಪಕ್ಷ ಸಂಘಟಿಸುತ್ತೇನೆ ಎಂದರು.

ಪುರಸಭಾ ಸದಸ್ಯರೂ ಆದ ತಾಲೂಕು ವೀರಶೈವ ಮಹಾಸಭಾ ಉಪಾಧ್ಯಕ್ಷ ಎಸ್.ಕೆ.ಕಿರಣ್ ಮಾತನಾಡಿ, ಮೈಸೂರು ಗ್ರಾಮಾಂತರ ಜಿಲ್ಲೆಯಲ್ಲಿ ಎಲ್ಲಾ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಶಕ್ತಿ ಸುಬ್ಬಣ್ಣ ಅವರಿಗೆ ಇದೆ. ಅದರಂತೆ ಎಲ್ಲಾ ಸಮುದಾಯಗಳು ಅವರಿಗೆ ಸಹಕಾರ ನೀಡಬೇಕು ಎಂದರು.

ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ವೀರಶೈವ ಮಹಾಸಭಾ ಅಧ್ಯಕ್ಷ ಕೆಂಪಣ್ಣ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಮಹದೇವಯ್ಯ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರ್, ತಾಲೂಕು ಉಪಾಧ್ಯಕ್ಷ ಬೆನಕನಹಳ್ಳಿ ವಿಜಯಕುಮಾರ್, ಬಿಜೆಪಿ ಮುಖಂಡರಾದ ವಿನಯ್ ಕುಮಾರ್, ಅರುಣ್ ಗೌಡ, ಬನ್ನಳ್ಳಿ ಹುಂಡಿ ಪ್ರಕಾಶ್ ಮತ್ತಿತರಿದ್ದರು.

ಜಂಟಿ ಕಾರ್ಯದರ್ಶಿಯಾಗಿ ನೇಮಕ



ಹುಣಸೂರು, ಜೂ.15– ರಾಜ್ಯ ಕೆಪಿಸಿಸಿ ಕಾರ್ಮಿಕ ವಿಭಾಗದ ಜಂಟಿ ಕಾರ್ಯದರ್ಶಿಯಾಗಿ ಹುಣಸೂರು ತಾಲೂಕಿನ ಹುಲ್ಯಾಳು ಗ್ರಾಮದ ಸುರೇಶ್ ಅವರನ್ನು ನೇಮಕಗೊಂಡಿದ್ದಾರೆ. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಅವರ ಶಿಫಾರಸ್ಸಿನ ಮೇರೆಗೆ ಸುರೇಶ್ ಅವರನ್ನು ಜಂಟಿ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ ಎಂದು ರಾಜ್ಯ ಕಾರ್ಮಿಕ ವಿಭಾಗದ ಅಧ್ಯಕ್ಷ ಪುಟ್ಟಸ್ವಾಮಿ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಸನ್ನ ನಿಧನ



ಹುಣಸೂರು, ಜೂ.15– ಪಟ್ಟಣದ ಸದಾಶಿವನಗರದ ನಿವಾಸಿ ಲೇ.ಹನುಮಯ್ಯ ಅವರ ಪುತ್ರ ಪ್ರಸನ್ನ ಉರುಫ್ ಡೆಡ್ಲಿ ಪ್ರಸನ್ನ(28) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ತಾಯಿ, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಅರಣ್ಯ ಇಲಾಖೆ ಕಚೇರಿ ಹಿಂದೆ ಇರುವ ಸದಾಶಿವನಗರದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎ.ಪಿ.ಚನ್ನಬಸವಾಚಾರ್



ಹೆಚ್.ಡಿ.ಕೋಟೆ, ಜೂ.15– ತಾಲೂಕಿನ ಅಂತರಸಂತೆ ಗ್ರಾಮದ ನಿವಾಸಿ ಎ.ಪಿ.ಚನ್ನಬಸವಾಚಾರ್ (85) ಭಾನುವಾರ ನಿಧನರಾದರು. ಮೃತರು ಪತ್ನಿ ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಅಂತರಸಂತೆ ಗ್ರಾಮದ ಸಾರ್ವಜನಿಕ ರುದ್ರ ಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಹಚ್ಚ ಹಸಿರಿನಿಂದ ಕಂಗೊಳಿಸುತ್ತಿರುವ ಬಂಡೀಪುರದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿವೆ 'ವನ್ಯಜೀವಿಗಳು'

● ಮುಂಗಾರು ಪೂರ್ವ ಮಳೆಯಿಂದ ತುಂಬಿ ತುಳುಕಿದ ಕೆರೆ-ಕಟ್ಟೆ
● ಪ್ರತೀ ದಿನವೂ ಸಫಾರಿಗರಿಗೆ ಹುಲಿ, ಆನೆ, ಚಿರತೆ, ಕರಡಿ ದರ್ಶನ



ಬಂಡೀಪುರ ಅರಣ್ಯದ ಕೆರೆಯೊಂದರ ಬಳಿ ದರ್ಶನ ನೀಡಿದ ಹುಲಿರಾಯ.



ಸ್ವಚ್ಛಂದವಾಗಿ ವಿಹರಿಸುತ್ತಿರುವ ಜಿಂಕೆ ಹಿಂಡು. (ಚಿತ್ರಗಳು: ಎಂ.ಎನ್.ಲಕ್ಷ್ಮಿ ನಾರಾಯಣ ಯಾದವ್)

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜೂ.15–ರಾಜ್ಯದ ಮೊಟ್ಟ ಮೊದಲ ಹುಲಿ ಸಂರಕ್ಷಿತ ಪ್ರದೇಶ ಎನಿಸಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದು, ಹುಲಿ, ಆನೆ, ಚಿರತೆ ಸೇರಿದಂತೆ ವನ್ಯಜೀವಿಗಳು ಸ್ವಚ್ಛಂದವಾಗಿ ವಿಹರಿಸುವ ಮೂಲಕ ಸಫಾರಿಗೆ ಬಂದ ಪ್ರವಾಸಿಗರಿಗೆ ಮುದ ನೀಡುತ್ತಿವೆ.

ಬಿರು ಬೇಸಿಗೆಯಿಂದ ಬಸವಳಿದು ಬೆಂಡಾಗಿದ್ದ ಬಂಡೀಪುರ ಅಭಯಾರಣ್ಯವನ್ನು ಕಾಡ್ಗಿಚ್ಚಿನಿಂದ ರಕ್ಷಣೆ ಮಾಡುವ ಸವಾಲು ಬಂಡೀಪುರದ ಸಿಬ್ಬಂದಿಗಳ ಮುಂದೆ ಎದುರಾಗಿತ್ತು. ಕಾಡಂಚಿನ 133 ಗ್ರಾಮಗಳ ವ್ಯಾಪ್ತಿಯಲ್ಲಿ ಹಾಗೂ ಈ ಹಿಂದೆ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದಿದ್ದ ಸ್ಥಳಗಳನ್ನು ಗುರುತಿಸಿ, ಹೆಚ್ಚುವರಿ ಸಿಬ್ಬಂದಿಯನ್ನು ಬೇಸಿಗೆಯಲ್ಲಿ ಗಸ್ತು ತಿರುಗಲು ನಿಯೋಜಿಸಿದ್ದರಿಂದ ಈ ಬಾರಿ ಕಾಡ್ಗಿಚ್ಚು ಸಂಭವಿಸಿಲ್ಲ. ಕಳೆದ 3 ವರ್ಷದಿಂದ ಶೂನ್ಯ ಬೆಂಕಿ ವಲಯ ಎಂದು ಗಮನ ಸೆಳೆದಿರುವ ಬಂಡೀಪುರ ಅಭಯಾರಣ್ಯ ಈ ಬಾರಿಯೂ ಯಾವುದೇ ಬೆಂಕಿ ಘಟನೆಗೆ ಎಡೆ ಮಾಡಿಕೊಡದೆ ತನ್ನೊಡಲಿನ ಅಮೂಲ್ಯ ಸಸ್ಯ ಸಂಪತ್ತು, ವನ್ಯಜೀವಿಗಳ ಸಂರಕ್ಷಣೆಗೆ ಎಡೆ ಮಾಡಿಕೊಟ್ಟಿದೆ.

ವರದಾನವಾಯ್ತು ಅಕಾಲಿಕ ಮಳೆ: ಬೇಸಿಗೆಯಲ್ಲಿ ತೀವ್ರ ತೆರವಾದ ತಾಪಮಾನದಿಂದಾಗಿ ಬಂಡೀಪುರ ಅರಣ್ಯ ಮಾರ್ಚ್ ತಿಂಗಳಲ್ಲಿ ಸಂಪೂರ್ಣವಾಗಿ ಒಣಗಿ ಹೋಗಿತ್ತು. ಆದರೆ ಮಾರ್ಚ್ ಅಂತ್ಯದಲ್ಲಿ ಹಾಗೂ ಏಪ್ರಿಲ್‌ನಲ್ಲಿ ಸುರಿದ ಅಕಾಲಿಕ ಮಳೆ ಅರಣ್ಯ ಪ್ರದೇಶಕ್ಕೆ ಚೈತನ್ಯ ತುಂಬಿತ್ತು. ಮೇ ತಿಂಗಳಲ್ಲಿ ಸುರಿದ ಮುಂಗಾರು ಪೂರ್ವ ಮಳೆಗೆ ಬಂಡೀಪುರದ ಚಿತ್ರಣವೇ ಬದಲಾಗಿದ್ದು, ಎಲ್ಲೆಲ್ಲೂ ಹಸಿರಿನ ಹೊದಿಕೆ ಹಾಸಲ್ಪಟ್ಟಿದೆ. ಸಂಪ್ರದಾಯದಂತೆ ಬೇಸಿಗೆ ವೇಳೆ ಕಬಿನಿ ಮತ್ತು ನುಗು ಜಲಾಶಯದ ಹಿನ್ನೀರು ಪ್ರದೇಶಕ್ಕೆ ಆನೆ, ಕಾಡೆಮ್ಮೆ ಸಾಂಬಾರ್ ಸೇರಿದಂತೆ ವಲಸೆ ಹೋಗಿದ್ದ ಸಸ್ಯಾಹಾರಿ ಪ್ರಾಣಿಗಳು ಮೇ ಅಂತ್ಯದ ವೇಳೆಗೆ ಮರಳಿ ಸ್ವಸ್ಥಾನಕ್ಕೆ ಆಗಮಿಸಿದ್ದು, ಇದರಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಗೆ ಆಗಮಿಸುವ ಪ್ರವಾಸಿಗರಿಗೆ ವನ್ಯಜೀವಿಗಳು ದರ್ಶನ ನೀಡುವ ಮೂಲಕ ಮುದ ನೀಡುತ್ತಿವೆ.



"ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿರುವುದರಿಂದ ಅರಣ್ಯ ಪ್ರದೇಶದಲ್ಲಿರುವ ಕೆರೆ-ಕಟ್ಟೆಗಳು ಭರ್ತಿಯಾಗಿವೆ. ಅಲ್ಲದೇ ಈ ಬಾರಿ ಕಟ್ಟುನಿಟ್ಟಿನ ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ಬೇಸಿಗೆಯಲ್ಲಿ ಯಾವುದೇ ಬೆಂಕಿ ಅವಘಡಗಳು ಸಂಭವಿಸಿಲ್ಲ. ಹಚ್ಚ ಹಸಿರಿನಿಂದ ಕಂಗೊಳಿಸುತ್ತಿರುವ ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳು ಸ್ವಚ್ಛಂದವಾಗಿ ವಿಹರಿಸುತ್ತಿದ್ದು, ಪ್ರವಾಸಿಗರಿಗೆ ಮುದ ನೀಡುತ್ತಿವೆ.

– ಎಸ್.ಪ್ರಭಾಕರನ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ.



ಹುಲಿಗಳ ದರ್ಶನ: ಕಳೆದ ಒಂದು ತಿಂಗಳಿನಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ ಸೇರಿದಂತೆ ವಿವಿಧ ಪ್ರಾಣಿಗಳು ಪ್ರವಾಸಿಗರಿಗೆ ದರ್ಶನ ನೀಡುತ್ತಿವೆ. ಅದರಲ್ಲೂ ಸಫಾರಿ ವಲಯದ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಎರಡು ಹೆಣ್ಣು ಹುಲಿಗಳು ನಾಲ್ಕು ಮರಿಗಳಿಗೆ ಜನ್ಮ ನೀಡಿದ್ದು, ತಾಯಿ ಮತ್ತು ಮರಿ ಹುಲಿ ಸಫಾರಿಗರಿಗೆ ದರ್ಶನ ನೀಡುತ್ತಿವೆ. ಅಲ್ಲದೇ ಕೆರೆಯ ಬಳಿ ಜಿಂಕೆಯೊಂದನ್ನು ಬೇಟೆಯಾಡುತ್ತಿರುವ ಹುಲಿಯ ಅಪರೂಪದ ದರ್ಶನವು ಪ್ರವಾಸಿಗರು ಕಣ್ತುಂಬಿಕೊಳ್ಳಲು ಸಾಧ್ಯವಾಗಿದೆ. ಇದರೊಂದಿಗೆ ಸಫಾರಿ ವಲಯದ ವಿವಿಧ ಸ್ಥಳಗಳಲ್ಲಿ ಪ್ರವಾಸಿಗರಿದ್ದ ಸಫಾರಿ ವಾಹನದ ಬಳಿಯೇ ಹುಲಿ ಓಡಾಡಿರುವ ದೃಶ್ಯವೂ ಕಂಡು ಬಂದಿದ್ದು, ಸಫಾರಿಗರು ವನ್ಯಜೀವಿಗಳ ಸ್ವಚ್ಛಂದದ ಜೀವನ ಕಂಡು ಸಂಭ್ರಮಿಸಿದ್ದಾರೆ.

ಕೆರೆಗಳು ಭರ್ತಿ: 13 ವಲಯಗಳನ್ನು ಹೊಂದಿರುವ ಬಂಡೀಪುರ ಅರಣ್ಯದಲ್ಲಿ ಸುಮಾರು 350ಕ್ಕೂ ಹೆಚ್ಚು ಕೆರೆಗಳಿದ್ದು, ಮುಂಗಾರು ಪೂರ್ವ ಮಳೆಗೆ ಬಹುತೇಕ ಕೆರೆಗಳು ತುಂಬಿವೆ. ಅದರಲ್ಲೂ ಬೃಹತ್ ಕೆರೆ ಎನಿಸಿರುವ ಬಂಡೀಪುರ ಕೆರೆ, ತಾವರೆ ಕಟ್ಟೆ, ಆನೆಕಟ್ಟೆ, ಹುಲಿಕಟ್ಟೆ ಸೇರಿದಂತೆ ವಿವಿಧ ಕೆರೆಗಳಲ್ಲಿ ಭಾರೀ ಪ್ರಮಾಣದ ನೀರು ಸಂಗ್ರಹವಾಗಿರುವುದರಿಂದ ವನ್ಯಜೀವಿಗಳಿಗೆ ಕುಡಿಯಲು ನೀರಿನ ಕೊರತೆ ನೀಗಿದಂತಾಗಿದೆ. ಇದರೊಂದಿಗೆ ಕೆಲ ಕೆರೆಗಳು ತುಂಬಿ ಕೋಡಿ ಹರಿಯುತ್ತಿರುವುದರಿಂದ ಅರಣ್ಯ ಪ್ರದೇಶದೊಳಗಿರುವ ಮಂಗಲ ಡ್ಯಾಂಗೆ ನೀರು ಹರಿದು ಬರುತ್ತಿದೆ. ಕಳೆದ 3 ವರ್ಷದಿಂದಲೂ ಮಂಗಲ ಡ್ಯಾಂನಲ್ಲಿ ನೀರು ಬತ್ತದೆ ಇರುವುದರಿಂದ ಆನೆ ಸೇರಿದಂತೆ ವಿವಿಧ ಪ್ರಾಣಿಗಳಿಗೆ ವರದಾನವಾಗಿದೆ.

ಪ್ರವಾಸಿಗರ ಲಗ್ಗೆ: ಬಂಡೀಪುರದಲ್ಲಿ ಕಳೆದ ಕೆಲ ದಿನಗಳಿಂದ ಹುಲಿ ಸೇರಿದಂತೆ ವಿವಿಧ ಪ್ರಾಣಿಗಳು ಸಫಾರಿಗರಿಗೆ ದರ್ಶನ ನೀಡುತ್ತಿರುವುದರಿಂದ ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ರಜೆ ಇದ್ದ ಹಿನ್ನೆಲೆಯಲ್ಲಿ ಹೊರ ರಾಜ್ಯದಿಂದಲೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬಂಡೀಪುರಕ್ಕೆ ಆಗಮಿಸಿ ಸಫಾರಿಗೆ ತೆರಳಲು ಮುಗಿ ಬೀಳುತ್ತಿದ್ದಾರೆ. ಅಲ್ಲದೇ ಹಚ್ಚ ಹಸಿರಿನ ಕಾಡಿನ ಸೊಬಗನ್ನು ಕಣ್ತುಂಬಿಕೊಂಡು ಸಂಭ್ರಮಿಸುತ್ತಿದ್ದಾರೆ.



ಕೆರೆ ದಡದಲ್ಲಿ ನವಿಲಿನೊಂದಿಗೆ ವಿಶ್ರಾಂತಿ ಪಡೆಯುತ್ತಿರುವ ಸಾಂಬಾರ್ ಜೋಡಿ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮುದುಪೆಟ್ಟೈ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್-5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಹೊಲೊಕಾಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಎಡಗೈಯೇ ಅಪಘಾತಕ್ಕೆ ಕಾರಣ (ಕ)	4 ಪ್ರದರ್ಶನಗಳು
ಲಿಡೋ	
ಮೆರ್ಸಲ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗೋದಾವರಿಯಲ್ಲಿ ಮುಳುಗಿ ಐವರು ಹದಿಹರೆಯದ ಯುವಕರ ಸಾವು

ತೆಲಂಗಾಣ, ಜೂ.15– ಗೋದಾವರಿ ನದಿಯಲ್ಲಿ ಮುಳುಗಿ ಐವರು ಯುವಕರು ಸಾವನ್ನಪ್ಪಿರುವ ಘಟನೆ ಕರೀಂ ನಗರದ ಬಸರಾ ಬಳಿ ಭಾನುವಾರ ನಡೆದಿದೆ. ಪ್ರಸಿದ್ಧ ಜ್ಞಾನ ಸರಸ್ವತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಹೈದರಾಬಾದಿನಿಂದ ಬಸರಾಕ್ಕೆ ಸುಮಾರು ಜನರ ತಂಡವು ಬಸರಾಕ್ಕೆ ಬಂದಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇವಾಲಯಕ್ಕೆ ತೆರಳುವ ಮುನ್ನಾ ಐವರು ಯುವಕರು ಗೋದಾವರಿ ನದಿಯಲ್ಲಿ ಪವಿತ್ರ ಸ್ನಾನ ಮಾಡುವಾಗ ಇದ್ದಕ್ಕಿಂತ ನೀರಿನ ಮಟ್ಟದಲ್ಲಿ ಹೆಚ್ಚಾಗಿದ್ದು, ಆ ಯುವಕರು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ ಎಂದು ಭೈಂಸಾದ ಸಹಾಯಕ ಪೊಲೀಸ್ ಅಧೀಕ್ಷಕ ಅವಿನಾಶ್ ಕುಮಾರ್ ಮಾಹಿತಿ ನೀಡಿದ್ದಾರೆ.

ನಂತರ ರಕ್ಷಣಾ ತಂಡಗಳು ಐವರನ್ನು ಹೊರತೆಗೆದು ಸಮೀಪದ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ಆದರೆ ಆಸ್ಪತ್ರೆಗೆ ಆಗಮಿಸುವ ಮುನ್ನವೇ ಐವರೂ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ.

ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಅಧಿಕಾರಿಗಳು ಅಧಿಕೃತ ವರದಿಗಾಗಿ ಕಾಯುತ್ತಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬೈಕ್‌ಗೆ ಹಿಮ್ಮುಖವಾಗಿ ಚಲಿಸುತ್ತದ್ದ ಲಾರಿ ಢಿಕ್ಕಿ: ಸವಾರ ಸಾವು

ಮೈಸೂರು, ಜೂ.15– ಲಾರಿ ಹಿಮ್ಮುಖವಾಗಿ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರನೊಬ್ಬ ಮೃತಪಟ್ಟು, ಮತ್ತೋರ್ವ ಗಾಯಗೊಂಡಿರುವ ಘಟನೆ ಕಡಕೊಳ ಟಿವಿಎಸ್ ಫ್ಯಾಕ್ಟರಿ ಬಳಿ ನಡೆದಿದೆ.

ನಂಜನಗೂಡು ತಾಲೂಕು, ಮುಳ್ಳೂರು ಗ್ರಾಮದ ಹರ್ಷಕುಮಾರ್ ಅಲಿಯಾಸ್ ಹರೀಶ್(23) ಅಪಘಾತದಲ್ಲಿ ಮೃತಪಟ್ಟಿದ್ದು, ಹಿಂಬದಿ ಸವಾರ ಸುರೇಶ್(51) ಗಾಯಗೊಂಡಿದ್ದಾರೆ. ಸುರೇಶ್ ಪುತ್ರನ ಸ್ಪ್ಲೆಂಡರ್ ಬೈಕ್(ಕೆಎ-09, ಜೆಡಿ-8678)ನಲ್ಲಿ ಶುಕ್ರವಾರ ಸುರೇಶ್ ಹಾಗೂ ಹರ್ಷಕುಮಾರ್ ಕಾರ್ಯನಿಮಿತ್ತ ಮೈಸೂರು ತಾಲೂಕಿನ ಸಿಂಧುವಳ್ಳಿಗೆ ಹೋಗಿ ಊರಿಗೆ ವಾಪಸ್ಸಾಗುವಾಗ ಕಡಕೊಳ ಟಿವಿಎಸ್ ಫ್ಯಾಕ್ಟರಿ ಬಳಿ ಪಂಕ್ಚರ್ ಅಂಗಡಿ ಕಡೆಯಿಂದ ರಸ್ತೆಗೆ ಹಿಮ್ಮುಖವಾಗಿ ಚಲಿಸುತ್ತಿದ್ದ ಲಾರಿ(ಕೆಎ-45, 9945) ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಗಾಯಗೊಂಡ ಇಬ್ಬರನ್ನೂ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ತೀವ್ರವಾಗಿ ಗಾಯಗೊಂಡಿದ್ದ ಹರ್ಷಕುಮಾರ್ ಮೃತಪಟ್ಟಿದ್ದಾರೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೀಡಾಭಿಮಾನಿಗಳ ಮೈನವಿರೇಳಿಸಿದ ನಾಡಕುಸ್ತಿ
ಪುಣೆ ಪೈ.ವಿಶಾಲ್ ಸೇಗಲೆಗೆ 'ಯದುವೀರ್ ಒಡೆಯರ್ ಕಪ್'

ಮೈಸೂರು, ಜೂ.15(ಎಂಕೆ)– ಮುಸ್ಸಂಜೆಯ ತಣ್ಣನೆ ವಾತಾವರಣದಲ್ಲಿ ಚಳಿ ಬಿಟ್ಟು ತೊಡೆ ತಟ್ಟಿದ ಪೈಲ್ವಾನರ ಕುಸ್ತಿ ಕಾಳಗ ಕ್ರೀಡಾಮಾನಿಗಳ ಮೈನವಿರೇಳಿಸಿತು.

ಮೈಸೂರಿನ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸ್ ವಿವಿದೋದ್ದೇಶ ಕ್ರೀಡಾಂಗಣದಲ್ಲಿ ಬೆಂಗಳೂರಿನ ಪ್ರಕೃತಿ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ 47 ಜೊತೆ ನಾಡಕುಸ್ತಿ ಹಾಗೂ ಮಹಾರಾಜ ಯದುವೀರ್ ಒಡೆಯರ್ ಕಪ್ ಪಂದ್ಯಾವಳಿಯಲ್ಲಿ ಗೆಲುವಿಗಾಗಿ ಸೆಣಸಾಡಿದ ಪೈಲ್ವಾನರು ಅಖಾಡದಲ್ಲಿ ಧೂಳೆಬ್ಬಿಸಿದರು.

ಹೊಸಹಳ್ಳಿ ಪೈ.ಸೂರಜ್ ಹಾಗೂ ರಮ್ಮನಹಳ್ಳಿ ಪೈ.ರಾಘವೇಂದ್ರ ನಡುವೆ ನಡೆದ ಉದ್ಘಾಟನಾ ಪಂದ್ಯ ಸಮಬಲದಲ್ಲಿ ಅಂತ್ಯವಾದರೆ, ಚುರುಕಿನ ಕಾದಾಟ ನಡೆಸಿದ ಮುಧೋಳ್ ಪೈ.ವಿದ್ಯಾಶ್ರೀ ಹಾಗೂ ಕನಕಪುರ ಪೈ.ಶ್ರೀರಕ್ಷ ಸಮಬಲ ಸಾಧಿಸಿದರು. ಹಾಗೆಯೇ ಬೆಳಗಾಂ ಪೈ.ಸಂಜು ಹಾಗೂ ಪುಣೆ ಪೈ.ವಿಶಾಲ್ ಸೇಗಲೆ ನಡುವೆ ರೋಚಕ ಹಣಾಹಣಿಯಲ್ಲಿ ಚುರುಕಿನ ಆಟವಾಡಿದ ಪುಣೆ ಪೈ.ವಿಶಾಲ್ ಸೇಗಲೆ, ಭರ್ಜರಿ ಗೆಲುವಿನೊಂದಿಗೆ 'ಯದುವೀರ್ ಒಡೆಯರ್ ಕಪ್' ತಮ್ಮದಾಗಿಸಿಕೊಂಡರು. ಇನ್ನುಳಿದಂತೆ ಬಹುತೇಕ ಪಂದ್ಯಗಳು ಸಮಬಲದಲ್ಲಿ ಅಂತ್ಯವಾದರೆ, ಪುಣೆ ಪೈ.ವಿಕ್ರಂ ಗೋರ್ಪಡೆ ಹಾಗೂ ಸಾಂಗ್ಲಿ ಪೈ.ಸುದೇಶ್ ಠಾಕೂರ್ ನಡುವೆ ಮಾರ್ಪಿಟ್ ಕುಸ್ತಿ ನಡೆಯಿತು.



ಡಿ.ದೇವರಾಜ ಅರಸ್ ವಿವಿದೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಗೆಲವಿಗಾಗಿ ಸೆಣಸಾಡುತ್ತಿರುವ ಪೈಲ್ವಾನರು.

ಪುಟಾಣಿ ಪೈಲ್ವಾನ್ ಮಿಂಚು: 9 ವರ್ಷದ ಪುಟಾಣಿ ಪೈಲ್ವಾನರಾದ ಮೈಸೂರಿನ ಅಬೂಬಕರ್ ಹಾಗೂ ಬನ್ನೂರಿನ ಪೈ.ನಿಖಿಲ್‌ಗೌಡ ಅಖಾಡದಲ್ಲಿ ಮಿಂಚು ಹರಿಸಿದರು. ಪಟ್ಟುಗಳನ್ನು ಹಾಕಿ ಎದುರಾಳಿಗೆ ಮಣ್ಣು ಮುಕ್ಕಿಸಿದ ಬನ್ನೂರಿನ ಪೈ.ನಿಖಿಲ್ ಗೌಡ ಗೆದ್ದು, ಪಲ್ಟಿ ಹೊಡೆದ ರೀತಿಯನ್ನು ಕಂಡ ಪ್ರೇಕ್ಷಕರು ಶಿಳ್ಳೆ-ಚಪ್ಪಾಳೆ ಸುರಿಮಳೆಗೈದರು.

ಇದಕ್ಕೂ ಮುನ್ನ ಕುಸ್ತಿ ಪಂದ್ಯಾವಳಿಯನ್ನು ನೆಲಮಂಗಲ ಶಿವಾನಂದ ಆಶ್ರಮದ ಪೀಠಾಧ್ಯಕ್ಷ ರಮಣಾನಂದ ನಾಥ ಸ್ವಾಮೀಜಿ ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಇ.ಸುಧೀಂದ್ರ, ವೈಭವ್ ನೇತ್ರಾಲಯದ ಬೆಟ್ಟತಿಮ್ಮೇಗೌಡ, ಪ್ರಕೃತಿ ಫೌಂಡೇಷನ್ ಅಧ್ಯಕ್ಷ ಕಿರಣ್‌ಕುಮಾರ್, ಬನ್ನೂರು ಸಿದ್ದರಾಜು, ಪೈ ಕೆ.ಮಧುಸೂಧನ್, ಪೈ ಗಂಜಾಂ ಮಂಜು ಮತ್ತಿತರರಿದ್ದರು.

ಪದೇ ಪದೆ ಜಾತಿ ಗಣತಿ ಸಂವಿಧಾನದ ಆಶಯಕ್ಕೆ ಅಪಚಾರ



ಮೈಸೂರು, ಜೂ.15– ಪದೇ ಪದೆ ಜಾತಿ ಗಣತಿ ನಡೆಸುವ ಮೂಲಕ ಸಂವಿಧಾನದ ಆಶಯಕ್ಕೆ ಅಪಚಾರ ಮಾಡಿದಂತಾಗುತ್ತದೆ ಎಂದು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅಭಿಪ್ರಾಯಿಸಿದ್ದಾರೆ. ಕಾಂತರಾಜು ಆಯೋಗದ ವರದಿ ಜಾರಿಗೆ ಭಾರೀ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಜಾತಿ ಗಣತಿ ಮರು ಸಮೀಕ್ಷೆಗೆ ನಿರ್ಧರಿಸಿದೆ. ಆದರೆ, ಕೇಂದ್ರ ಸರ್ಕಾರವೂ ಜಾತಿ ಗಣತಿಗೆ ನಿರ್ಣಯಿಸಿರುವ ಸಂದರ್ಭದಲ್ಲಿಯೇ ರಾಜ್ಯದಲ್ಲಿ 2ನೇ ಬಾರಿ ಸಮೀಕ್ಷೆಗೆ ಮುಂದಾಗಿರುವುದು ಸರಿಯಲ್ಲ ಎಂದಿದ್ದಾರೆ. ಡಾ.ಅಂಬೇಡ್ಕರ್ ರಚಿತ ಭಾರತ ಸಂವಿಧಾನದಲ್ಲಿ ಎಲ್ಲರಿಗೂ ಒಂದೇ ಕಾನೂನು. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದೇಶದ ಸರ್ವತೋಮುಖ ಅಭಿವೃದ್ಧಿ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಬೇಕು. ಆದರೆ, ಪರಸ್ಪರ ವೈರುಧ್ಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಇದರಿಂದ ಜನಸಾಮಾನ್ಯರ ತೆರಿಗೆ ಹಣ ಅನಗತ್ಯವಾಗಿ ಪೋಲಾಗುವ ಮೂಲಕ ದೇಶದ ಆರ್ಥಿಕ ವ್ಯವಸ್ಥೆಗೆ ದೊಡ್ಡಪೆಟ್ಟು ಬೀಳುತ್ತಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ

ದೇಶ - ವಿದೇಶ

ಇಸ್ರೇಲ್-ಇರಾನ್ ಸಂಘರ್ಷ: ಜಾರ್ಜಿಯಾದಲ್ಲಿ ಸಿಲುಕಿದ 61 ಮಂದಿ ಭಾರತೀಯರು



ಜೈಸಲ್‌ಮೇರ್: ಇಸ್ರೇಲ್-ಇರಾನ್ ನಡುವಿನ ಸಂಘರ್ಷದಿಂದಾಗಿ ದಿಢೀರನೆ ವಿಮಾನಗಳ ಸಂಚಾರ ಸ್ಥಗಿತಗೊಂಡು ಜಾರ್ಜಿಯಾದಲ್ಲಿ ಸಿಲುಕಿಕೊಂಡಿರುವ ರಾಜಸ್ಥಾನದ 61 ಜನರ ತಂಡವು ತುರ್ತಾಗಿ ಸಹಾಯಕ್ಕೆ ಬರುವಂತೆ ಭಾರತ ಸರ್ಕಾರವನ್ನು ಮನವಿ ಮಾಡಿಕೊಂಡಿದೆ. 29 ಲೆಕ್ಕ ಪರಿಶೋಧಕರು ಮತ್ತು ಅವರ ಕುಟುಂಬ ಸದಸ್ಯರು ಸೇರಿದಂತೆ ರಾಜಸ್ಥಾನದ 61 ಮಂದಿ ಟ್ಬಿಲಿಸಿಯಲ್ಲಿ ವೃತ್ತಿ ಕೌಶಲ ಹೆಚ್ಚಿಸಿಕೊಳ್ಳುವ ಕಾರ್ಯಕ್ರಮವೊಂದಕ್ಕೆ ಜೂನ್ 8ರಂದು ತೆರಳಿದ್ದರು. ಜೂನ್ 13ರಂದು ಅವರು ಶಾರ್ಜಾ ಮೂಲಕ ಭಾರತಕ್ಕೆ ವಾಪಸಾಗಬೇಕಿತ್ತು. ಸಾಮಾಜಿಕ ಜಾಲತಾಣದ ಮೂಲಕ ವಿಡಿಯೋ ಸಂದೇಶವೊಂದನ್ನು ಪೋಸ್ಟ್ ಮಾಡಿದ್ದ ಜೈಸಲ್ಮೇರ್‌ನ ಭಾವಿಕ್ ಭಾಟಿಯಾ ಎಂಬುವರು ತಮ್ಮನ್ನು ಸುರಕ್ಷಿತವಾಗಿ ಕರೆಸಿಕೊಳ್ಳುವಂತೆ ಪ್ರಧಾನಿ ಮೋದಿ, ವಿದೇಶಾಂಗ ಸಚಿವ ಜೈಶಂಕರ್ ಅವರಿಗೆ ಮನವಿ ಮಾಡಿಕೊಂಡಿದ್ದಾರೆ. ಜಾರ್ಜಿಯಾದಲ್ಲಿ ಪರಿಸ್ಥಿತಿ ಹದಗೆಟ್ಟಿಲ್ಲ ಹೋಟೆಲ್‌ನಲ್ಲಿ ಎಲ್ಲರೂ ಸುರಕ್ಷಿತವಾಗಿದ್ದರೂ ಪರಿಸ್ಥಿತಿಯ ಭಯ ಕಾಡುತ್ತಿದೆ ಎಂದು ಭಾಟಿಯಾ ಸಂದೇಶದಲ್ಲಿ ತಿಳಿಸಿದ್ದಾರೆ.

ದೆಹಲಿ: ನೆಲಕ್ಕುರುಳಿದ 100 ಅಡಿ ಎತ್ತರದ ಮೊಬೈಲ್ ಟವರ್



ನವದೆಹಲಿ: ಭಾರಿ ಮಳೆ ಹಾಗೂ ಗಾಳಿಯಿಂದ ದಕ್ಷಿಣ ದೆಹಲಿಯ ಸಪ್ದರ್‌ಜಂಗ್ ಎನ್ಕ್ಲೇವ್‌ನಲ್ಲಿ 100 ಅಡಿ ಎತ್ತರದ ಮೊಬೈಲ್ ಟವರ್‌ವೊಂದು ನೆಲಕ್ಕುರುಳಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬೆಳಿಗ್ಗೆ 4 ಗಂಟೆ ಸುಮಾರಿಗೆ ಈ ಘಟನೆ ಸಂಭವಿಸಿದ್ದು, ಯಾರಿಗೂ ಗಾಯಗಳಾಗಿಲ್ಲ. ಮಾಳವೀಯ ನಗರದ ಎಎಪಿ ಮಾಜಿ ಶಾಸಕ ಸೋಮನಾಥ್ ಭಾರ್ತಿ ಸ್ಥಳಕ್ಕೆ ಭೇಟಿ ನೀಡಿದ್ದು, ಇಲ್ಲಿನ ನಿವಾಸಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ. ನನ್ನ ಮತ್ತು ಸ್ಥಳೀಯರ ಭಾರಿ ಪ್ರತಿಭಟನೆಯ ನಡುವೆಯೂ ಬಿ2 ಸಪ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿ ನಿರ್ಮಿಸಲಾದ ಮೊಬೈಲ್ ಟವರ್ ನಿನ್ನೆ ರಾತ್ರಿ ಕುಸಿದು ಬಿದ್ದಿದೆ. ಇದು ಹಗಲಿನ ವೇಳೆಯಲ್ಲಿ ಅಥವಾ ಬಿ2 ಬ್ಲಾಕ್‌ನ ಕಟ್ಟಡಗಳ ಮೇಲೆ ಬಿದ್ದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎಂದು ಎಕ್ಸ್ ಪೋಸ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.


ನೈಜೀರಿಯಾದಲ್ಲಿ ಬಂದೂಕುಧಾರಿಗಳಿಂದ ಗುಂಡಿನ ದಾಳಿ: 100ಕ್ಕೂ ಹೆಚ್ಚು ಮಂದಿ ಸಾವು!



ನೈಜೀರಿಯಾ: ಬೆನ್ಯೂ ರಾಜ್ಯದಲ್ಲಿ ರಕ್ತಪಾತವನ್ನು ಕೊನೆಗೊಳಿಸಬೇಕೆಂದು ಅಮ್ನೆಸ್ಟಿ ಇಂಟರ್ ನ್ಯಾಷನಲ್ ನೈಜೀರಿಯಾ ಸರ್ಕಾರಕ್ಕೆ ಕರೆ ನೀಡುತ್ತಿದ್ದಂತೆ, ಉತ್ತರ – ಮಧ್ಯ ನೈಜೀರಿಯಾದ ಪಟ್ಟಣದಲ್ಲಿ ರಾತ್ರೋರಾತ್ರಿ ಬಂದೂಕುಧಾರಿಗಳು ದಾಳಿ ನಡೆಸಿದ್ದು, ಈ ದಾಳಿಯಲ್ಲಿ 100 ಜನ ಸಾವನ್ನಪ್ಪಿದ್ದಾರೆ.

ಈ ಬಗ್ಗೆ ತಮ್ಮ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿರುವ ಅಮ್ನೆಸ್ಟಿ ಇಂಟರ್ ನ್ಯಾಷನಲ್ ನೈಜೀರಿಯಾ, ಶುಕ್ರವಾರ ತಡರಾತ್ರಿಯಿಂದ ಶನಿವಾರ ಬೆಳಗಿನ ಜಾವದವರೆಗೆ ದಾಳಿ ನಡೆಸಿದ್ದು, ಅನೇಕರು ಕಾಣೆಯಾಗಿದ್ದಾರೆ. ಇನ್ನ ಕೆಲವರು ಗಾಯಗೊಂಡಿದ್ದಾರೆ. ಅಲ್ಲದೆ, ಗಾಯಾಳುಗಳಿಗೆ ಸರಿಯಾದ ಚಿಕಿತ್ಸೆ ಸಿಕ್ಕದೆ ಪರದಾಡುತ್ತಿದ್ದಾರೆ. ವರದಿ ಪ್ರಕಾರ, ಈ ದಾಳಿಯಲ್ಲಿ ಹೆಚ್ಚಾಗಿ ರೈತರೇ ಸಾವನ್ನಪ್ಪಿದ್ದು, ಅನೇಕ ಕುಟುಂಬವನ್ನು ಮನೆಯ ಒಳಗೆ ಕೂಡಿ ಹಾಕಿ ಬೆಂಕಿ ಹಚ್ಚಿ ಸಜೀವವಾಗಿ ಸುಟ್ಟು ಹಾಕಲಾಗಿದೆ. ಬೆನ್ಯೂವಿನಲ್ಲಿ ಅನೇಕ ದಿನಗಳಿಂದ ರಕ್ತಪಾತ ನಡೆಯುತ್ತಿತ್ತು, ಇದೀಗ ಅದನ್ನು ತಡೆಯುವಂತೆ ಅಮ್ನೆಸ್ಟಿ ಕರೆ ನೀಡುತ್ತಿದ್ದಂತೆ ಈ ದಾಳಿ ನಡೆದಿದ್ದು, ರೈತರೇ ಹೆಚ್ಚಾಗಿ ಸಾವನ್ನಪ್ಪಿದ್ದಾರೆ. ಇದರಿಂದಾಗಿ ಆಹಾರದ ಭದ್ರತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತದೆ.


ವಿದ್ಯಾರ್ಥಿಗಳಿಗೆ ಬಸ್ಕಿ ಶಿಕ್ಷೆ: ಶಿಕ್ಷಕನಿಗೆ ಶೋಕಾಸ್ ನೋಟಿಸ್



ತಿರುವನಂತಪುರ: ಕೇರಳದ ಸರ್ಕಾರಿ ಶಾಲಾ ಶಿಕ್ಷಕರೊಬ್ಬರು ತರಗತಿ ಯೊಳಗೆ ವಿದ್ಯಾರ್ಥಿನಿಯರಿಗೆ ಒತ್ತಾಯಪೂರ್ವಕವಾಗಿ ಬಸ್ಕಿ ಶಿಕ್ಷೆ ನೀಡಿದ ಕಾರಣ ಶಿಕ್ಷಣ ಇಲಾಖೆಯು ಅವರಿಗೆ ಶೋಕಾಸ್ ನೋಟಿಸ್ ನೀಡಿದೆ.

ಕಾಟನ್‌ಹಿಲ್‌ನ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ನೋಟಿಸ್ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ವಾರ ರಾಷ್ಟ್ರಗೀತೆಯ ಸಮಯದಲ್ಲಿ ವಿದ್ಯಾರ್ಥಿನಿಯರು ತರಗತಿಯಿಂದ ಹೊರನಡೆದ ಕಾರಣ ಬಸ್ಕಿ ಶಿಕ್ಷೆ ನೀಡಲಾಗಿತ್ತು. ಇದರಿಂದಾಗಿ ಹಲವರು ಬಸ್ ತಪ್ಪಿಸಿಕೊಂಡಿದ್ದಾರೆ. ಶಾಲೆಯಿಂದ ತಡವಾಗಿ ಮನೆಗೆ ಮರಳಿದಾಗ, ಪೋಷಕರು ಈ ಕುರಿತು ವಿಚಾರಿಸಿದಾಗ ಘಟನೆ ಬಯಲಿಗೆ ಬಂದಿದೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ಘಟನೆಯ ಕುರಿತು ಕೇರಳ ಶಿಕ್ಷಣ ಇಲಾಖೆಯು ಸಂಕ್ಷಿಪ್ತ ಹೇಳಿಕೆಯನ್ನಷ್ಟೇ ನೀಡಿದೆ. ಶಾಲಾ ಶಿಕ್ಷಕರಿಗೆ ಶೋಕಾಸ್ ನೋಟಿಸ್ ನೀಡಲಾಗಿದ್ದು, ಶಿಕ್ಷಣ ಸಚಿವ ವಿ.ಶಿವಕುಟ್ಟಿ ಆದೇಶದಂತೆ ತನಿಖೆ ಮಾಡಲಾಗುತ್ತಿದೆ. ಜಿಲ್ಲಾ ಶಿಕ್ಷಣಾಧಿಕಾರಿ ವರದಿಯ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮಾಹಿತಿ ನೀಡಿದೆ.

67 ಅಂತಸ್ತಿನ ಕಟ್ಟಡದಲ್ಲಿ ಭಾರಿ ಅಗ್ನಿ ಅವಘಡ, 4 ಸಾವಿರ ಮಂದಿ ಸ್ಥಳಾಂತರ



ದುಬೈ: ಬರೊಬ್ಬರಿ 67 ಅಂತಸ್ತಿನ ಗಗನಚುಂಬಿ ಕಟ್ಟಡದಲ್ಲಿ ಭೀಕರ ಅಗ್ನಿ ಅವಘಡ ಸಂಭವಿಸಿದ್ದು, ಕಟ್ಟಡದಲ್ಲಿದ್ದ ಸುಮಾರು 4 ಸಾವಿರ ಮಂದಿಯನ್ನು ಮುಂಜಾಗ್ರತಾ ಕ್ರಮವಾಗಿ ಸ್ಥಳಾಂತರಗೊಳಿಸಲಾಗಿದೆ.

ದುಬೈನ ಮರೀನಾದಲ್ಲಿರುವ 67 ಅಂತಸ್ತಿನ ಕಟ್ಟಡದಲ್ಲಿ ಭಾರಿ ಅಗ್ನಿ ಅವಘಡ ಸಂಭವಿಸಿದ್ದು, ಮರಿನಾದ ಅಪಾರ್ಟ್‌ಮೆಂಟ್‌ನಲ್ಲಿ ಭೀಕರ ಅಗ್ನಿ ಅವಘಡ ಸಂಭವಿಸಿದೆ. ಟೈಗರ್ ಟವರ್ ಎಂದು ಕರೆಯಲ್ಪಡುವ ಮರೀನಾ ಪಿನಾಕಲ್ ಕಟ್ಟಡದಲ್ಲಿ ಮೇ 2015 ರಲ್ಲಿ ಸಹ ಅಗ್ನಿ ಅವಘಡ ಸಂಭವಿಸಿತ್ತು. ಆಗ 47 ನೇ ಮಹಡಿಯಲ್ಲಿ ಬೆಂಕಿ ತಗುಲಿ 48 ನೇ ಮಹಡಿಗೂ ವ್ಯಾಪಿಸಿತ್ತು. ವಿಚಾರ ತಿಳಿಯುತ್ತಲೇ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಈ ಕಟ್ಟಡದಲ್ಲಿದ್ದ ಸುಮಾರು 4,000 ಜನರನ್ನು ಯಾವುದೇ ತೊಂದರೆಯಾಗದಂತೆ ಸುರಕ್ಷಿತವಾಗಿ ಸ್ಥಳಾಂತರಿಸಿದ್ದಾರೆ.

ಕಟ್ಟಡದ 35ನೇ ಮಹಡಿಯ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಬಳಿಕ ಬೆಂಕಿ ಕೆನ್ನಾಲಿಗೆ ಇಡೀ ಕಟ್ಟಡಕ್ಕೆ ವ್ಯಾಪಿಸಿದೆ. ಇಡೀ ಕಟ್ಟಡ ಒಣಗಿದ ಮರದಂತೆ ಹೊತ್ತಿ ಉರಿದಿದೆ. ಇದರಿಂದ ಇಡೀ ನಗರಾದ್ಯಂತ ಹೊಗೆ ಆವರಿಸಿತ್ತು. ಇಂತಹ ಅಗ್ನಿ ದುರಂತವನ್ನು ರಕ್ಷಣಾ ತಂಡಗಳು ಜಾಗರೂಕತೆಯಿಂದ ನಿಭಾಯಿಸಿವೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ವರದಿಯಾಗಿದೆ.

ಜನರು ಪುಸ್ತಕ ಓದುವುದಿಲ್ಲ, ನಾಟಕಗಳಿಗೆ ಬರುವುದಿಲ್ಲ

ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪ್ರೊ. ಸಿ.ವಿ.ಶ್ರೀಧರಮೂರ್ತಿ ವಿಷಾದ



ಶ್ರೀನಟರಾಜ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಅನನ್ಯ ಪುಸ್ತಕ ಸಂಸ್ಥೆ ವತಿಯಿಂದ ಶ್ರೀ ನಟರಾಜ ಸಭಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಸಿ.ಚಾಮಶೆಟ್ಟಿ ರಚಿಸಿರುವ ಮೂರು ಕೃತಿಗಳನ್ನು ಸಂತ ಫಿಲೋಮಿನಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ವಿ.ಶ್ರೀಧರಮೂರ್ತಿ ಬಿಡುಗಡೆಗೊಳಿಸಿದರು.

ಮೈಸೂರು, ಜೂ.15(ಜಿಎ)–ಇಂದು ಜನರ ಅಭಿರುಚಿ ಬದಲಾಗುತ್ತಿದೆ. ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಅವರ ಅಭಿರುಚಿಗೆ ತಕ್ಕಂತೆ ನಾವು ಬದಲಾಗಬೇಕಿದೆ ಎಂದು ಸಂತ ಫಿಲೋಮಿನಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ವಿ. ಶ್ರೀಧರಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ನಟರಾಜ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಅನನ್ಯ ಪುಸ್ತಕ ಸಂಸ್ಥೆ ವತಿಯಿಂದ ಶ್ರೀ ನಟರಾಜ ಸಭಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಸಿ.ಚಾಮಶೆಟ್ಟಿ ರಚಿಸಿರುವ 'ಚತುರ್ವಿಧ ನಾಟಕಗಳು', ನೇಗಿಲಯೋಗಿ ಮತ್ತು ಇತರೆ ನಾಟಕಗಳು', ಕ್ರೀಡಾ ಕಾವ್ಯಲಹರಿ' ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಪುಸ್ತಕಗಳು ಎಂದೆಂದಿಗೂ ನಿಜವಾದ ಗೆಳೆಯರು ಎಂದು ಹೇಳಿರುವ ಮಹಾತ್ಮ ಗಾಂಧೀಜಿ ಮಾತುಗಳು ಇಂದಿಗೂ ಸತ್ಯವಾಗಿದೆ. ಆದರೆ, ಜನರು ಪುಸ್ತಕ ಓದುವುದಿಲ್ಲ, ನಾಟಕಕ್ಕೆ ಬರುವುದಿಲ್ಲ ಎಂದು ನಿಲ್ಲಿಸಿದರೆ ಕನ್ನಡ ಸಾಹಿತ್ಯ ಕ್ಷೇತ್ರ ಕುಂಠಿತವಾಗಲಿದೆ ಎಂದು ತಿಳಿಸಿದರು.

ಇಂತಹ ಸಂದರ್ಭದಲ್ಲಿಯೂ ಪ್ರಕಾಶಕರು ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಿರುವುದನ್ನು ನೋಡಿದರೆ ನಿಜವಾಗಿಯೂ ಸಂತಸವಾಗುತ್ತದೆ. ಉತ್ತಮ ವಿಚಾರಗಳನ್ನು ಒಳಗೊಂಡ ಪುಸ್ತಕಗಳನ್ನು ನೀಡಿದ್ದರೆ ಜನರು ಓದುವುದನ್ನು ನಿಲ್ಲಿಸುವುದಿಲ್ಲ. ಸಾಹಿತ್ಯಕ್ಕೆ ಜನರು ಇದ್ದಾರೆ. ಪುಸ್ತಕ ಬರೆಯುವವರು ನಿರಾಶವಾದಿಗಳಾಗಬೇಡಿ. ಆಶಾವಾದಿಗಳಾಗಿರಿ ಎಂದು ಸಲಹೆ ನೀಡಿದರು.

ಜೆಎಸ್ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ ಪ್ರೊ.ವೊರಬದ ಮಲ್ಲಿಕಾರ್ಜುನ ಮಾತನಾಡಿ, ಸಿ.ಚಾಮಶೆಟ್ಟಿ ತಮ್ಮ ಶಕ್ತಿ, ಸಾಮರ್ಥ್ಯವನ್ನು ಬಳಸಿಕೊಂಡು ಬದುಕನ್ನು ಅರ್ಥಪೂರ್ಣವಾಗಿಸಿಕೊಂಡಿದ್ದಾರೆ. ಸಮಾಜಕ್ಕೆ ಉಪಯುಕ್ತವಾಗಿ ಜೀವಿಸಿದ್ದು, ಅವರ ಬಳಿ ತರಬೇತಿ ಪಡೆದ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಅಲ್ಲದೇ ಸಿಂಗಾನಲೂರಿನಲ್ಲಿ ಅವರು ಮಕ್ಕಳಿಗೆ ನೀಡುತ್ತಿದ್ದ ಕ್ರೀಡಾ ತರಬೇತಿಯನ್ನು ಕನ್ನಡದ ಹಿರಿಯ ಚಿತ್ರನಟ ಡಾ.ರಾಜ್‌ಕುಮಾರ್ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು.

ಎಂಟು ನಾಟಕಗಳನ್ನು ಸಿ.ಚಾಮಶೆಟ್ಟಿ ಬರೆದಿದ್ದಾರೆ. ಅವುಗಳಲ್ಲಿ ಪೌರಾಣಿಕ, ಸಾಮಾಜಿಕ ಕಾಳಜಿ ಜೊತೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಧಿಸಿದಂತೆ ಬರೆದಿದ್ದಾರೆ. ಎಲ್ಲಾ ನಾಟಕಗಳಲ್ಲೂ ಕ್ರೀಡಾ ಸ್ಫೂರ್ತಿ ಜೊತೆಗೆ ಸಂದೇಶಗಳಿಂದ ಕೂಡಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕವಯತ್ರಿ ಕೆರೋಡಿ ಲೋಲಾಕ್ಷಿ, ಲೇಖಕ ಸಿ.ಚಾಮಶೆಟ್ಟಿ, ಪ್ರಕಾಶಕ ಡಿ.ಎನ್. ಲೋಕಪ್ಪ ಮತ್ತಿತರರು ಉಪಸ್ಥಿತರಿದ್ದರು.

ಗಣಪತಿ ಆಶ್ರಮದಲ್ಲಿ ವನ ದುರ್ಗಾ ವೃಕ್ಷಶಾಂತಿ ಮಹಾಯಜ್ಞ, ಸಹಸ್ರ ಚಂಡಿಯಾಗ ಸಂಪನ್ನ



ಮೈಸೂರಿನ ಅವಧೂತ ದತ್ತಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಚಂಡಿಯಾಗಕ್ಕೆ ಪೂರ್ಣಾಹುತಿ ನೆರವೇರಿಸುತ್ತಿರುವುದು.

ಮೈಸೂರು,ಜೂ.15(ಎಂಟಿವೈ)– ಲೋಕ ಕಲ್ಯಾಣಾರ್ಥವಾಗಿ ಮೈಸೂರಿನ ಅವಧೂತ ದತ್ತಪೀಠದಲ್ಲಿ ಜೂ.6ರಂದು ಆರಂಭವಾಗಿದ್ದ ವನ ದುರ್ಗಾ ವೃಕ್ಷ ಶಾಂತಿ ಮಹಾಯಜ್ಞ ಮತ್ತು ಸಹಸ್ರ ಚಂಡಿಯಾಗ ಭಾನುವಾರ ವಿವಿಧ ಧಾರ್ಮಿಕ ಕಾರ್ಯದೊಂದಿಗೆ ಸಂಪನ್ನಗೊಂಡಿತು.

ಅವಧೂತ ದತ್ತಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾರ್ಗದರ್ಶನದಲ್ಲಿ ಕಳೆದ 9 ದಿನಗಳಿಂದ ನಡೆಯುತ್ತಿದ್ದ ವನ ದುರ್ಗಾ ವೃಕ್ಷ ಶಾಂತಿ ಮಹಾಯಜ್ಞ ಮತ್ತು ಸಹಸ್ರ ಚಂಡಿಯಾಗದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.

ಇಂದು ಮುಂಜಾನೆ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಹಸ್ರ ಚಂಡೀಯಾಗದ ವಿಧಿ ವಿಧಾನಗಳನ್ನು ಪೂರ್ಣಗೊಳಿಸಿದರು. ಗಣಪತಿ ಆಶ್ರಮದ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡಿದ್ದರು. ಮಹಾಯಾಗಕ್ಕಾಗಿ ನಿರ್ಮಿಸಿದ್ದ 11 ಹೋಮ ಕುಂಡಗಳ ಬಳಿಯೂ ಪೂರ್ಣಹುತಿಯನ್ನು ನೆರವೇರಿಸಿದರು. ತದ ನಂತರ ಪ್ರಧಾನ ಹೋಮಕುಂಡದಲ್ಲಿ ಪ್ರಮುಖವಾದ ಪೂರ್ಣಾಹುತಿ ನೆರವೇರಿಸಿ ಯಾಗವನ್ನು ಸಂಪನ್ನಗೊಳಿಸಿದರು.

ನಂತರ ಸಪ್ತ ಋಷಿ ಸರೋವರದಲ್ಲಿ ದೇವಿಯನ್ನು ಉತ್ಸವದಲ್ಲಿ ಕೊಂಡೊಯ್ದು ಅವಭೃತ ಸ್ನಾನ ನೆರವೇರಿಸುವ ಮೂಲಕ ಯಾಗವನ್ನು ಸಂಪನ್ನಗೊಳಿಸಲಾಯಿತು. ಇದೇ ವೇಳೆ ನೂರಾರು ಭಕ್ತರು ಲಲಿತಾ ಸಹಸ್ರನಾಮ ಮತ್ತು ಸೌಂದರ್ಯ ಲಹರಿಯನ್ನು ಪಠಿಸಿದರು. ಆಶ್ರಮದ ಆವರಣದಲ್ಲಿ ಸಂಜೆ ವನದುರ್ಗ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ದೇಶಾದ್ಯಂತ ಹಲವಾರು ರಾಜ್ಯಗಳಿಂದ ಮತ್ತು ವಿದೇಶಗಳಿಂದಲೂ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ವೃಕ್ಷ ಶಾಂತಿ ಮಹಾಯಜ್ಞ ಮತ್ತು ವಿಶ್ವದ ಮೊಟ್ಟ ಮೊದಲ ಸಹಸ್ರ ಚಂಡೀಯಾಗವನ್ನು ಕಣ್ತುಂಬಿಕೊಂಡು ಪುನೀತರಾದರು.

ನಾನು ಎಲ್ಲ ತಿಳಿದಿರುವ ಜ್ಞಾನಿ ಎಂದು ಬೀಗಬಾರದು

ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಸಲಹೆ



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಅನಾಥಾಲಯದಲ್ಲಿ ನಡೆದ ತಾತಯ್ಯ ಸ್ಮಾರಕ ಉಪನ್ಯಾಸ ಮಾಲೆಯಲ್ಲಿ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಮಾತನಾಡಿದರು.

ಮೈಸೂರು, ಜೂ.15(ಬಿಎಲ್‌ಯು)– ಪ್ರತಿಯೊಂದು ವಿಚಾರಗಳನ್ನು ನಾನು ತಿಳಿದಿರುವೆ, ನಾನು ಜ್ಞಾನಿ ಎಂಬ ಭ್ರಮೆ ಬೇಡ ಎಂದು ಮೈಸೂರು ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಸಲಹೆ ನೀಡಿದ್ದಾರೆ.

ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಅನಾಥಾಲಯದಲ್ಲಿ ತಾತಯ್ಯ ಸ್ಮಾರಕ ಉಪನ್ಯಾಸ ಮಾಲೆಯಲ್ಲಿ ಇಂದು ನಾಗರಿಕ ಸೇವೆಗಳ ಸ್ಪರ್ಧಾತ್ಮಕ ಪರೀಕ್ಷೆಗಳು– ಭೇದಿಸುವ ಸಲಕರಣೆಗಳು, ಸಾಧನೆಗಳು –ಗುರಿ ಮತ್ತು ಪೂರ್ವ ಸಿದ್ಧತೆಗಳ ಕೆಲವು ಆಯಾಮಗಳು ಕುರಿತ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಕೇಂದ್ರ ಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಯ್ಕೆಯಾಗಲು ಗುರಿ, ಉದ್ದೇಶ ಮತ್ತು ಕೌಶಲ ಬಹಳ ಪ್ರಮುಖವಾಗಿರುತ್ತದೆ. ಎಷ್ಟೆ ಓದಿ, ಬರೆದರೂ ಜ್ಞಾನ ಕಡಿಮೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಎಷ್ಟೇ ಓದಿ ಜ್ಞಾನವಂತನಾದರೂ ಕಡಿಮೆ. ನನಗೇನು ಗೊತ್ತಿಲ್ಲ ಎಂಬ ಮನೋಭಾವ ಇದ್ದರೆ ಗುರಿ ಸಾಧಿಸಬಹುದು ಎಂದು ಹೇಳಿದರು.

ನಾನು ಎಲ್ಲಾ ಕಲಿತಿದ್ದೇನೆ, ನಾನು ಸಾಧನೆ ಮಾಡಿದ್ದೇನೆ ಎಂದು ಬೀಗಿದರೆ ಬೆಳವಣಿಗೆ ಹೊಂದಲು ಆಗುವುದಿಲ್ಲ. ಇನ್ನು ಬಹಳಷ್ಟು ಕಲಿಯುವುದು ಇದೆ ಎಂದು ಜ್ಞಾನಾರ್ಜನೆ ಮಾಡಿದರೆ ಯಶಸ್ವಿಯಾಗಬಹುದು ಎಂದರು.

ತುಂಬಿದ ಕೊಡ ತುಳುಕಲ್ಲ ಎಂಬ ಮಾತಿನಂತೆ ಹೆಚ್ಚು ಜ್ಞಾನವಂತರು ನಾನು ಎಲ್ಲಾ ತಿಳಿದಿದ್ದೇನೆ ಎಂದು ಹೇಳುವುದಿಲ್ಲ. ಇಂತಹ ಮನೋಭಾವದವರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುತ್ತಾರೆ ಎಂದು ಅಭಿಪ್ರಾಯಪಟ್ಟರು.

ವಿಶ್ವಕ್ಕೆ ಏನಾದರೂ ಕೊಡುಗೆ ನೀಡುವ ನಿಟ್ಟಿನಲ್ಲಿ ಆವಿಷ್ಕಾರ ಮಾಡಬೇಕು. ಹೊಸತನ್ನು ಸೃಷ್ಟಿ ಮಾಡುವ ಚಿಂತನೆ, ಗುರಿ, ಕಾತುರ ಇರಬೇಕು. ಇದನ್ನು ಸಾಕಾರಗೊಳಿಸಲು ಪರಿಣಿತರ ಸಲಹೆ ಮಾರ್ಗದರ್ಶನ ಪಡೆಯಬೇಕು ಎಂದರು.

ಯಾವ ಪುಸ್ತಕ ಓದಬೇಕು, ಏನನ್ನು ಓದಬೇಕು ಎಂಬ ಅರಿವು ಇರಬೇಕು. ಮುಖ ಪುಟದಿಂದ ಕೊನೆ ಪುಟದವರೆಗೆ ಓದಬೇಕು. ಆ ಪುಸ್ತಕದ ವಿಚಾರ ತಿಳಿದುಕೊಳ್ಳಬೇಕು. ಇದು ಬಿಟ್ಟು ಕಾಟಾಚಾರಕ್ಕೆ ಪುಸ್ತಕ ಓದಬಾರದು. ಶ್ರಮವಹಿಸಿ ಓದಿದರೆ ಕೇಂದ್ರ ಲೋಕಸೇವಾ ಆಯೋಗಕ್ಕೆ ಆಯ್ಕೆಯಾಗಬಹುದು ಎಂದು ಷೇಕ್ ತನ್ವೀರ್ ಆಸೀಫ್ ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ಅನಾಥಾಲಯದ ಅಧ್ಯಕ್ಷ ಸಿ.ವಿ.ಗೋಪಿನಾಥ್, ನಗರಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಅವರು ಸರಳ ವ್ಯಕ್ತಿತ್ವದ ಅಧಿಕಾರಿ. ಸಮಸ್ಯೆ ಹೊತ್ತು ಹೋಗುವ ಸಾಮಾನ್ಯ ಜನರಿಗೆ ನಾವು ಒಬ್ಬ ಐಎಎಸ್ ಅಧಿಕಾರಿ ಜೊತೆ ಮಾತನಾಡುತ್ತಿದ್ದೇವೆ ಎಂಬ ಮನೋಭಾವ ಇರುವುದಿಲ್ಲ. ಅಂತಹ ವಿನಯಶೀಲತೆ ಇವರಲ್ಲಿದೆ ಎಂದರು. ಪ್ರತಿಯೊಬ್ಬರು ಮಾನವೀಯ ಗುಣ ಮೈಗೂಡಿಸಿಕೊಳ್ಳಬೇಕು. ಇದರಿಂದ ಜ್ಞಾನವೃದ್ಧಿಯಾಗುತ್ತದೆ. ನಾವು ಕಲಿತ ಜ್ಞಾನವನ್ನು ಇತರರಿಗೂ ಧಾರೆ ಎರೆಯಬೇಕು ಎಂದು ಸಲಹೆ ನೀಡಿದರು.

ನಾವು ಸಾಗುವ ಗುರಿಯಲ್ಲಿ ವೈಫಲ್ಯತೆ ಹೊಂದಿದರೆ ಧೃತಿಗೆಡಬಾರದು. ಎದುರಿಗಿರುವ ಸವಾಲನ್ನು ಸಮರ್ಥವಾಗಿ ಎದುರಿಸಿ ಗುರಿ ಸಾಧಿಸಿದರೆ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ಹೇಳಿದರು. ನಾವು ಓದುವ ಕಾಲದಲ್ಲಿ ಫೋನ್, ಟಿವಿ, ಮೊಬೈಲ್ ಸೇರಿದಂತೆ ಈಗಿರುವ ಆಧುನಿಕವಾದ ಯಾವ ಸಾಧನವೂ ಇರಲಿಲ್ಲ. ಆದರೂ ನಮ್ಮ ಕಾಲದಲ್ಲಿ ಬಹಳಷ್ಟು ಜನರು ಪರಿಣಿತಿ ಹೊಂದಿದ್ದರು ಎಂದು ಗೋಪಿನಾಥ್ ಹೇಳಿದರು. ಕಾರ್ಯಕ್ರಮದಲ್ಲಿ ಅನಾಥಾಲಯದ ಜಂಟಿ ನಿರ್ದೇಶಕ ವೆಂಕಟೇಶ್ ಆರ್.ಪದಕಿ, ಕಾರ್ಯದರ್ಶಿ ಹೆಚ್.ಅಶ್ವಥ್ ನಾರಾಯಣ್, ನಿರ್ದೇಶಕರಾದ ಚಿತ್ಕಲ, ನಾಗಮಣಿ ಸಂಪತ್ ಹಾಜರಿದ್ದರು.

ಇರಾನ್‌ನಲ್ಲಿ ಸಿಲುಕಿರುವ ಕರ್ನಾಟಕದ 9 ವಿದ್ಯಾರ್ಥಿಗಳ ಭಾರತಕ್ಕೆ ಕರೆತರುವಂತೆ ಮನವಿ

ಬೆಂಗಳೂರು, ಜೂ.15– ಇರಾನ್ ಮತ್ತು ಇಸ್ರೇಲ್ ನಡುವೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು ರಾಜ್ಯದ 9 ವಿದ್ಯಾರ್ಥಿಗಳು ಇರಾನ್‌ನಲ್ಲಿ ಸಿಲುಕಿಕೊಂಡಿದ್ದಾರೆ. ಇವರು ರಾಜಧಾನಿ ಟೆಹರಾನ್‌ನಲ್ಲಿ ಜಫ್ರಾನಿಯಾ ಪ್ರದೇಶದ ತೌಫಿಕ್ ಅಲ್ಲೆ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಓದುತ್ತಿದ್ದರು. ಈ 9 ವಿದ್ಯಾರ್ಥಿಗಳನ್ನು ಸ್ಥಳಾಂತರಿಸುವಂತೆ ಕರ್ನಾಟಕ ನಾನ್ ರೆಸಿಡೆನ್ಸಿ ಫೋರಂ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಫೋರಂನ ಡೆಪ್ಯುಟಿ ಚೇರ್‌ಮನ್ ಡಾ. ಆರತಿ ಕೃಷ್ಣ ಅವರು ವಿದೇಶಾಂಗ ಸಚಿವ ಜೈಶಂಕರ್ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ. ಸದ್ಯ ಭಾರತಕ್ಕೆ ಮರಳಲು ಸಹಾಯ ಮಾಡಲು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಮತ್ತು ವಿದೇಶಾಂಗ ಸಚಿವಾಲಯದ ಕರ್ನಾಟಕದ ವಿದ್ಯಾರ್ಥಿಗಳಾದ ನದೀಮ್ ಹುಸೇನ್, ಮೀರ್ ನಾಸರ್ ಹುಸೇನ್, ಸೈಯದ್ ಮೊಹಮ್ಮದ್ ಟಕಿ, ಮೀರ್ ಎಸಾಮ್ ರೇಜಾ, ಅಬ್ಬಾಸ್ ಅಸ್ಕರಿ, ಸೈಯದ್ ಮೊಹ್ಸಿನ್ ರೇಜಾ, ಮರ್ಯಮ್ ಫಾತಿಮಾ, ಡೇನಿಯಾ ಉಲ್ಫಾಟ್, ಅಬ್ಬಾಸ್ ಅಲಿ ಅಮು ತುರ್ತು ಸಹಾಯಕ್ಕೆ ಮನವಿ ಮಾಡಿದ್ದಾರೆ.

ಇಂದಿನಿಂದ ಯೋಗ ಶಿಬಿರ



ಮೈಸೂರು,ಜೂ.15–ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜೂ.16ರಿಂದ 30ರವರೆಗೆ ಕುತ್ತಿಗೆ, ಬೆನ್ನು ನೋವಿಗೆ ಆಕ್ಯೂಪಂಕ್ಚರ್, ಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ ನಡೆಯಲಿದೆ. ಮಾಹಿತಿಗೆ ಮೊ.9632000697, ದೂ. 0821–2548231 ಸಂಪರ್ಕಿಸಿ.

ಮೈಸೂರಿನ ಕಬಿನಿ ಹಿನ್ನೀರಿನಲ್ಲಿ ವಾಟರ್ ಸ್ಪೋರ್ಟ್ಸ್ ಅನುಮತಿ ರದ್ದತಿಗೆ ಆಗ್ರಹ

ರಾಷ್ಟ್ರೀಯ ಹಸಿರು ನ್ಯಾಯಾಧೀಕರಣಕ್ಕೆ ವಕೀಲ ರವಿಕುಮಾರ್ ಪತ್ರ

ಮೈಸೂರು, ಜೂ.15(ಬಿಎಲ್‌ಯು)– ಮೈಸೂರಿನ ಹೆಚ್.ಡಿ.ಕೋಟೆಯ ಕಬಿನಿ ಹಿನ್ನೀರಿನಲ್ಲಿ ವಾಟರ್ ಸ್ಪೋರ್ಟ್ಸ್ ಉದ್ಯಮ ನಡೆಸಲು ಸರ್ಕಾರ ನೀಡಿರುವ ಅನುಮತಿ ರದ್ದು ಮಾಡಬೇಕು ಎಂದು ವಕೀಲ ವಿ.ರವಿಕುಮಾರ್ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಅಧ್ಯಕ್ಷರಿಗೆ ಪತ್ರ ಬರೆದಿರುವ ಅವರು, ಒಂದು ವೇಳೆ ವಾಟರ್ ಸ್ಪೋರ್ಟ್ ನಡೆಸಿದರೆ ವನ್ಯಜೀವಿ, ಅರಣ್ಯ ಮತ್ತು ಜಲಚರಗಳಿಗೆ ಅಪಾಯವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಬಂಡಿಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿರುವ ಕಬಿನಿ ಹಿನ್ನೀರಿನ ಪ್ರದೇಶ ಅರಣ್ಯ ಸೂಕ್ಷ್ಮ ವಲಯ ಮತ್ತು ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿದೆ ಎಂದು ರವಿಕುಮಾರ್ ವಿವರಣೆ ನೀಡಿದ್ದಾರೆ.

ಇಂತಹ ಸೂಕ್ಷ್ಮಾತಿ ಸೂಕ್ಷ್ಮ ಪ್ರದೇಶದ ಸುತ್ತಮುತ್ತ ನೂರಾರು ಅನಧಿಕೃತ ರೆಸಾರ್ಟ್‌ಗಳು ನಾಯಿ ಕೊಡೆಗಳಂತೆ ಈಗಾಗಲೇ ತಲೆ ಎತ್ತಿವೆ. ಇದನ್ನು ತಡೆಯುವ ಬದಲು ಸರ್ಕಾರ ರೆಸಾರ್ಟ್‌ಗಳಿಗೆ ಅನುಕೂಲವಾಗುವಂತೆ ಕಬಿನಿ ಹಿನ್ನೀರಿನಲ್ಲಿ ಕಾನೂನುಬಾಹಿರ ವಾಟರ್ ಸ್ಪೋರ್ಟ್ಸ್‌ಗೆ ಅನುಮತಿ ನೀಡಿದೆ ಎಂದು ಆರೋಪಿಸಿದ್ದಾರೆ. ನಮ್ಮ ಮುಂದಿನ ಪೀಳಿಗೆಗೆ ಕಾಡು ಸಂರಕ್ಷಿಸುವ ದೃಷ್ಟಿಯಿಂದ ವಾಟರ್ ಸ್ಪೋರ್ಟ್ಸ್‌ಗೆ ಸರ್ಕಾರ ನೀಡಿರುವ ಅನುಮತಿಗೆ ತಡೆ ನೀಡಬೇಕು ಎಂದು ರವಿಕುಮಾರ್ ಮನವಿ ಮಾಡಿದ್ದಾರೆ.

ಅಹಮದಾಬಾದ್ ವಿಮಾನ ದುರಂತ: ಉನ್ನತ ಮಟ್ಟದ ತನಿಖೆಗೆ ಒತ್ತಾಯ



ಮೈಸೂರು, ಜೂ.15 (ಎಸ್‌ಪಿಎನ್) –ಅಹಮದಾಬಾದ್ ವಿಮಾನ ದುರಂತದ ಬಗ್ಗೆ ಉನ್ನತ ಮಟ್ಟದ ತನಿಖೆ ಕೈಗೊಳ್ಳಬೇಕು ಹಾಗೂ ವಿಮಾನಯಾನ ಸುರಕ್ಷೆ ಬಗ್ಗೆ ಗಂಭೀರ ಕ್ರಮ ಕೈಗೊಳ್ಳಲು ಎಐಯುಟಿಯುಸಿ ಒತ್ತಾಯಿಸಿದೆ.

ಅಹಮದಾಬಾದ್‌ನಲ್ಲಿ ಜರುಗಿದ ವಿಮಾನ ದುರಂತದಲ್ಲಿ ಸುಮಾರು 270 ಜನರು ಮೃತರಾಗಿದ್ದು, ಈ ದುರಂತದ ಬಗ್ಗೆ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ಕರ್ನಾಟಕ ರಾಜ್ಯ ಸಮಿತಿ ದಿಗ್ಭ್ರಮೆ ವ್ಯಕ್ತಪಡಿಸಿ, ಈ ದುರಂತದಲ್ಲಿ ಮಡಿದವರ ಕುಟುಂಬಗಳಿಗೆ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಸರ್ಕಾರವು ಈ ಕೂಡಲೇ ಸಂತ್ರಸ್ತ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಗಾಯಗೊಂಡವರಿಗೆ ಸಮರ್ಪಕ ಚಿಕಿತ್ಸೆ ನೀಡಬೇಕು, ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕೆಂದು ಎಐಯುಟಿಯುಸಿ ಒತ್ತಾಯಿಸಿದೆ. ಈ ದುರಂತದ ಸುತ್ತ, ನಾಗರಿಕ ವಿಮಾನಯಾನ ಮತ್ತು ನಿರ್ದೇಶನಾಲಯದ ಮಾನದಂಡಗಳು ಹಾಗೂ ಸುರಕ್ಷತಾ ಮಾರ್ಗಸೂಚಿಗಳು ಉಲ್ಲಂಘನೆಯಾಗಿವೆ ಎಂದು ತಜ್ಞರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಟಾಟಾ ಸಮೂಹ ಹಾಗೂ ಡಿಜಿಸಿಎ ಸಂಸ್ಥೆಗಳನ್ನು ಅವಘಡಕ್ಕೆ ಜವಾಬ್ದಾರರನ್ನಾಗಿಸಬೇಕು. ಈ ಹಿನ್ನೆಲೆಯಲ್ಲಿ ಈ ದುರ್ಘಟನೆಯ ಬಗ್ಗೆ ನಿಷ್ಪಕ್ಷಪಾತ ತನಿಖೆಯಾಗಬೇಕು ಹಾಗೂ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದೆ.

ಈ ದುರಂತಕ್ಕೆ ಕಾರಣವೇನೆಂಬುದನ್ನು ಪತ್ತೆ ಹಚ್ಚಿ, ಮುಂದೆ ಇಂತಹ ದುರ್ಘಟನೆ ನಡೆಯದಂತೆ ಕಟ್ಟುನಿಟ್ಟಿನ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಾರಿಗೊಳಿಸುವಂತೆ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಸೋಮಶೇಖರ್ ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಪ್ರತಿಭಾ ಪುರಸ್ಕಾರ, ಶಿಕ್ಷಣ ಪ್ರೋತ್ಸಾಹಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.15(ಜಿಎ)–ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಶಿಕ್ಷಣ ಪ್ರೋತ್ಸಾಹಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಕೆ.ಕೆಂಡಗಣ್ಣ ವಿಶ್ವಕರ್ಮ ಈ ವಿಷಯ ತಿಳಿಸಿ, ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶೇ.65ಕ್ಕಿಂತಲೂ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ಪ್ರೋತ್ಸಾಹ ನೀಡಲು ನಿರ್ಧರಿಸಿ, ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬೇಕೆಂದು ಮನವಿ ಮಾಡಿದರು. ಅರ್ಜಿ ಸಲ್ಲಿಸಲು ಜೂ.30 ಕೊನೆ ದಿನವಾಗಿದ್ದು, ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯವರು ಮಾತ್ರ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಎಲ್‌ಐಜಿ –130, 3ನೇ ಕ್ರಾಸ್, ಗಂಗೋತ್ರಿ ಲೇಔಟ್, ಮೈಸೂರು 570009 ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ ದೂ.91088 14433, 97398 09952 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಸಿದ್ದರಾಜು, ಶ್ರೀಲಕ್ಷ್ಮಿ, ಬಿ.ರಾಜು, ಲೋಕೇಶ್, ಮಹಾಂತೇಶ್, ಮಹೇಶ್, ಸಿದ್ದೇಶ್ ಉಪಸ್ಥಿತರಿದ್ದರು.

ಮಾವಿನ ಹಣ್ಣಿನ ಬೆಲೆ ದಿಢೀರ್ ಕುಸಿತ

ಬೆಳೆಗಾರರು, ಗುತ್ತಿಗೆದಾರರು ಕಂಗಾಲು



ಮೈಸೂರು, ಜೂ.15(ಬಿಎಲ್‌ಯು)– ಸಿಹಿಯಾದ ರುಚಿ ನೀಡುವ ಹಣ್ಣಿನ ರಾಜ ಮಾವು ಬೆಳೆಗಾರರು ಹಾಗೂ ಮಾರಾಟಗಾರರಿಗೆ ಕಹಿಯಾಗಿದೆ. ಆದರೆ ಬೆಲೆ ಕಡಿಮೆ ಇರುವ ಕಾರಣ ಮಾವಿನ ಹಣ್ಣು ಖರೀದಿ ಮಾಡುವ ಗ್ರಾಹಕರಿಗೆ ರುಚಿಯಾಗಿದೆ. ಮಾವಿನ ಹಣ್ಣಿನ ಬೆಲೆ ದಿಢೀರ್ ಕುಸಿತವಾಗಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.

ಮಾವಿನ ಹಣ್ಣು ಮಾರುಕಟ್ಟೆಗೆ ಬಂದ ಆರಂಭದಲ್ಲಿ ಉತ್ತಮ ಬೆಲೆ ಇತ್ತು. ಇದರಿಂದ ಮಾವಿನ ಹಣ್ಣು ಮಾರಾಟಗಾರರ ಮೊಗದಲ್ಲಿ ಮಂದಹಾಸ ಮೂಡಿತ್ತು. ಆದರೆ ಈಗ ಮಾವಿನ ಹಣ್ಣಿನ ಬೆಲೆ ದಿಢೀರ್ ಕುಸಿತ ಕಂಡಿದೆ. ಮಾವಿನ ಹಣ್ಣಿನ ಬೆಲೆ ಕುಸಿದಿರುವ ಕಾರಣ ಬೆಳೆಗಾರರು ಮಾವಿನ ಕಾಯಿಗಳನ್ನು ಕೊಯ್ಲು ಮಾಡದೆ ಮರದಲ್ಲೆ ಬಿಟ್ಟಿದ್ದಾರೆ. ಈಗ ಮಾವಿನ ಹಣ್ಣು ಕೊಯ್ಲು ಮಾಡಿ ಮಾರಾಟ ಮಾಡಿದರೆ ಸಾಗಾಟ ವೆಚ್ಚ ಕೂಡ ಸಿಗುವುದಿಲ್ಲ. ಮುಂಗಾರು ಮಳೆ ಆರ್ಭಟ ಜೋರಾಗಿದ್ದು, ಪ್ರತಿ ದಿನ ತುಂತುರ ಮಳೆ ಬೀಳುತ್ತಿರುವ ಕಾರಣ ಹಣ್ಣುಗಳು ಮರದಲ್ಲೆ ಕೊಳೆಯುವ ಪರಿಸ್ಥಿತಿ ಎದುರಾಗಿದೆ. ಮಾವಿನ ಕಾಯಿಗಳ ಮೇಲೆ ಕಪ್ಪು ಕಲೆ ಕಾಣಿಸಿಕೊಳ್ಳುತ್ತಿದ್ದು, ಇಂತಹ ಮಾವಿನ ಕಾಯಿ ಕೊಯ್ಲು ಮಾಡಿದರೆ ಹೆಚ್ಚು ದಿನ ಇಡಲು ಸಾಧ್ಯವಾಗುವುದಿಲ್ಲ.

ಡಿಸೆಂಬರ್ ಮತ್ತು ಜನವರಿಯಲ್ಲಿ ಮರಗಳಲ್ಲಿ ಹೂವು ಬಿಟ್ಟಿರುವುದರ ಮೇಲೆ ಬೆಲೆ ನಿಗದಿ ಮಾಡಿ ಇಡೀ ತೋಟವನ್ನು ಗುತ್ತಿಗೆಗೆ ಪಡೆದಿದ್ದಾರೆ. ಆದರೆ ಈಗ ಮಾವಿನ ಹಣ್ಣಿನ ಬೆಲೆ ದಿಢೀರ್ ಕುಸಿತ ಕಂಡಿರುವ ಕಾರಣ ಗುತ್ತಿಗೆದಾರರು ಕಂಗೆಟ್ಟಿದ್ದಾರೆ.

ಈ ಮೊದಲು ಕೆ.ಜಿ.ವೊಂದಕ್ಕೆ 120ರಿಂದ 140 ರೂಪಾಯಿ ತನಕ ಇದ್ದ ರಸಪೂರಿ ಮತ್ತು ಬಾದಾಮಿ ಹಣ್ಣು ಈಗ 80ರಿಂದ 100 ರೂಪಾಯಿಗೆ ಇಳಿದಿದೆ. 140 ರೂಪಾಯಿ ಇದ್ದ ಮಲ್ಲಿಕಾ 100 ರೂಪಾಯಿಗೆ ಇಳಿಕೆ ಕಂಡಿದೆ. 150 ರೂಪಾಯಿ ಇದ್ದ ಮಲಗೋವಾ 100 ರೂಪಾಯಿ ಇಳಿಕೆ ಕಂಡಿದೆ. 60ರಿಂದ 80 ರೂಪಾಯಿಗೆ ಇದ್ದ ತೋತಾಪುರಿ ಈಗ 40 ರಿಂದ 50 ರೂಪಾಯಿಗೆ ಕುಸಿದಿದೆ. ಕರ್ನಾಟಕದಲ್ಲಿ ಸುಮಾರು 1.40 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಇದರಿಂದ ಸುಮಾರು 10 ರಿಂದ 11 ಲಕ್ಷ ಟನ್ ಮಾವಿನ ಹಣ್ಣು ಇಳುವರಿ ಬರುತ್ತದೆ. ಇದರಲ್ಲಿ 4 ಲಕ್ಷ ಟನ್ ಗ್ರಾಹಕರಿಗೆ ಮಾರಾಟವಾದರೆ, ಉಳಿದ ಹಣ್ಣು ಜಾಮ್, ಜ್ಯೂಸ್, ಉಪ್ಪಿನ ಕಾಯಿಗೆ ಬಳಕೆಯಾಗುತ್ತದೆ.

ಮೈಸೂರಿನಲ್ಲಿ ಮಾವಿನ ಹಣ್ಣಿನ ಬೆಲೆ ಕಡಿಮೆಯಾದರೂ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಅಷ್ಟಾಗಿ ಪರಿಣಾಮ ಇಲ್ಲ. ಆದರೆ ಕೋಲಾರ ಸೇರಿದಂತೆ ಇತರೆಡೆ ಮಾವಿನ ಹಣ್ಣು ಸುರಿದು ಬೆಂಬಲ ಬೆಲೆ ಘೋಷಣೆ ಮಾಡುವಂತೆ ಬೆಳೆಗಾರರು ಸರ್ಕಾರವನ್ನು ಆಗ್ರಹಿಸಿದ್ದಾರೆ. ಮಾವಿನ ಬೆಲೆ ದಿಢೀರ್ ಕುಸಿತ ಕಂಡಿರುವ ಹಿನ್ನೆಲೆ ಮಾರುಕಟ್ಟೆ ಯೋಜನೆಯಡಿ ಬೆಲೆ ಕುಸಿತ ಪಾವತಿ ಯೋಜನೆ ಅನುಷ್ಠಾನ ಮಾಡಬೇಕೆಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದಿರುವ ಸಿದ್ದರಾಮಯ್ಯ ಅವರು, ಮಾವಿನ ಬೆಳೆಗಾರರು ಹಾಗೂ ಮಾರಾಟಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆ ಬೆಂಬಲ ಬೆಲೆ ಘೋಷಣೆ ಮಾಡುವಂತೆ ಮನವಿ ಮಾಡಿದ್ದಾರೆ. ಬೆಲೆ ಕುಸಿತದಿಂದ ಮಾವು ಬೆಳೆಗಾರರು ಹಾಗೂ ಗುತ್ತಿಗೆದಾರರಿಗೆ ನಷ್ಟವಾದರೆ, ಬೆಲೆ ಕಡಿಮೆಯಾಗಿರುವ ಕಾರಣ ಗ್ರಾಹಕರು ಹೆಚ್ಚಿನ ಮಾವಿನ ಹಣ್ಣು ಖರೀದಿ ಮಾಡುತ್ತಿದ್ದಾರೆ.

ವಿದ್ಯುತ್ ಶಾಕ್‌ಗೆ ತಾಯಿ, ಮರಿ ಆನೆ ಬಲಿ



ಹಾಸನ: ವಿದ್ಯುತ್ ಶಾಕ್‌ನಿಂದ 2 ಕಾಡಾನೆಗಳು ಸಾವನ್ನಪ್ಪಿದ ಘಟನೆ ಸಕಲೇಶಪುರ ತಾಲೂಕಿನ ಗುಡ್ಡೆಬೆಟ್ಟ ಗ್ರಾಮದ ಬಳಿಯ ಎಬಿಸಿ ಎಸ್ಟೇಟ್‌ನಲ್ಲಿ ನಡೆದಿದೆ. ಆಹಾರ ಅರಸಿ ಮರಿಯೊಂದಿಗೆ ಕಾಡಾನೆ ಕಾಫಿ ತೋಟಕ್ಕೆ ಬಂದಿತ್ತು. ಈ ವೇಳೆ, ಕಾಫಿ ತೋಟದಲ್ಲಿ ಹಾದು ಹೋಗಿದ್ದ ವಿದ್ಯುತ್ ತಂತಿ ಗಾಳಿ ಮಳೆಗೆ ತುಂಡಾಗಿ ಬಿದ್ದಿದ್ದು, ತಂತಿಯನ್ನು ತುಳಿದು ಸಾವನ್ನಪ್ಪಿವೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.